## ಅಧ್ಯಾಯ 7

# ವಿವಾಹದ ಕುರಿತು ಸೂಚನೆಗಳು

1 ಕೊರಿಂಥದವರಿಗೆ ಬರೆದ ಮೊದಲಿನ 6 ಅಧ್ಯಾಯಗಳಲ್ಲಿ, ಪೌಲನು ಸಭೆಯಲ್ಲಿ ತೊಂದರೆಯನ್ನುಂಟು ಮಾಡುತ್ತಿರುವ ಬೆಳವಣಿಗೆಯ ಕುರಿತಾಗಿ ಅದನ್ನು ಕಂಡು ಕೇಳಿದವರ ಜ್ಞಾನದಿಂದ ತಾನು ತಿಳಿದುಕೊಂಡು ಬರೆಯುತ್ತಾನೆ. ಅಪೊಸ್ತಲನು ಚರ್ಚೆಮಾಡಿದ ಅಧ್ಯಾಯ 6ರ ಕೊನೆಯಲ್ಲಿರುವ ಮುಖ್ಯ ವಿಷಯ ಜನರು ತಮ್ಮ ದೈಹಿಕ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಬೇಕಾಗಿತ್ತು. 6ನೇ ಅಧ್ಯಾಯದ ಕೊನೆಯಲ್ಲಿ ಅಪೊಸ್ತಲನು ಸಂಬೋಧಿಸಿದ ವ್ಯಾಕುಲತೆಗಳು ಜನರು ತಮ್ಮ ದೈಹಿಕ ಬಯಕೆಗಳನ್ನು ಪೂರೈಸಿ ಕೊಂಡಮೇಲೆ ತಮ್ಮ ಕಾರ್ಯಗಳನ್ನು ಸಾಧ್ಯವಾದಷ್ಟು ಉತ್ತಮವಾಗಿ ಮಾಡಿದರು. “ಅದು ನಿಮಗೆ ಉತ್ತಮವಾಗಿ ತೋರಿದರೆ, ಮಾಡಿರಿ” ಎಂಬದು ಸುಮಾರು 1960 ಮತ್ತು 70ರಲ್ಲಿ ಹಿಪ್ಪಿ ಜನಾಂಗದವರ ಬಹಳ ಹಿಂದಿನ ಘೋಷಣೆಯಾಗಿತ್ತು. ಶತಮಾನಗಳಿಂದ ಮಹತ್ವದ ಗ್ರೀಕ ಮತ್ತು ರೋಮನ್ ಶಾಲೆಗಳ ತತ್ವಜ್ಞಾನಿಗಳು ಅದೃಷ್ಟವಾದಿಗಳ ದೃಷ್ಟಿಕೋನವಾದ ಉತ್ತಮವಾದ ಜೀವಿತಕ್ಕೆ ಮಾರ್ಗವೆಂದರೆ ಹಸಿವನ್ನು ತೀರಿಸುವದು ಎಂಬುದರ ಕುರಿತು ವಾದಿಸಿದರು. ಜೀವಿತದಲ್ಲಿ ದೈವೀಕ ಮಾರ್ಗದರ್ಶನ ಇಲ್ಲದಿದ್ದರೆ, ಯಾವುದೇ ಶ್ರೇಷ್ಟ ಧ್ಯೇಯಗಳ ಗುರಿ ಇರುವದಿಲ್ಲ, ಅಲ್ಲಿ ಉಳಿಯುವದು ಹಸಿವು ಮಾತ್ರ. ಕೊರಿಂಥದಲ್ಲಿರುವ ಹಲವರು ಇಂಥಹ ತತ್ವಶಾಸ್ತ್ರವನ್ನು ಕ್ರೈಸ್ತ ಯುದ್ಧರಂಗದಲ್ಲಿ ಹಗುರವಾಗಿ ಅಳವಡಿಸಿಕೊಂಡಂತೆ ತೋರಿಬರುತ್ತದೆ. ಅವರು “ಆಹಾರವು ಹೊಟ್ಟೆಗಾಗಿ ಮತ್ತು ಹೊಟ್ಟೆಯು ಆಹಾರಕ್ಕಾಗಿ” (6:13) ಎಂಬ ಘೋಷಣೆಯನ್ನು ಬಲವಾಗಿ ಉಪಯೋಗಿಸುತ್ತಿದ್ದರು. ಆದರೆ ಘೋಷಣೆಯು ಕೇವಲ ಹೊಟ್ಟೆ ಹಸಿವಿಗಾಗಿ ಅಲ್ಲ. ಇದು ಆಹಾರದ ಹಸಿವನ್ನು ತೃಪ್ತಿಪಡಿಸುವದು ಉತ್ತಮ ಮತ್ತು ಲೈಂಗಿಕ ಬಯಕೆಗಳನ್ನು ಯಾವ ಮಾರ್ಗದಲ್ಲಿ ಸಾಧ್ಯವೋ ಹಾಗೆ ತೃಪ್ತಿಪಡಿಸಿಕೊಳ್ಳುವದನ್ನು ಸಮರ್ಥಿಸುತ್ತಿದ್ದರು.

ಕೊರಿಂಥದಲ್ಲಿ ವೈಚಾರಿಕ ಶಾಲೆಗಳ ತೊಡಗಿಸುವಿಕೆಯೊಂದಿಗೆ ದೈಹೀಕ ಹಸಿವುಗಳನ್ನು ಕ್ರೈಸ್ತರು ಹತ್ತಿಕ್ಕಬೇಕು ಎಂದು ಇನ್ನೊಂದು ಶಾಲೆಗಳು ವಾದಿಸಿದವು. ಈ ವ್ರತಬದ್ಧವಾದದ ತತ್ವಜ್ಞಾನ ಸಹ ತನ್ನ ಇತಿಹಾಸವನ್ನು ಗ್ರೀಕೋ-ರೋಮನ್ ಸಂಸ್ಕೃತಿಯಲ್ಲಿ ಹೊಂದಿತ್ತು. ವ್ರತಬದ್ಧವಾದ ತನ್ನ ಸ್ವಂತ ಲಾಭಕ್ಕಾಗಿ, ಇತರರ ಲಾಭಕ್ಕಾಗಿ ಅಲ್ಲ ಸ್ವ-ಅಲ್ಲಗಳೆಯುವದು ಆಗಿತ್ತು. ಉಪವಾಸ, ಉದಾಹರಣೆಗೆ, ಉಪವಾಸ ಮಾಡುವವರ ಆತ್ಮೀಕ ಅಥವಾ ದೈಹೀಕ ಲಾಭಕ್ಕಾಗಿ ಯಾವುದೇ ಇರಲಿ ಸ್ವ-ಅಲ್ಲಗಳೆಯುವದಾಗಿತ್ತು; ಇದು ಸಾಮಾನ್ಯವಾಗಿ ಹಸಿವಿನಿಂದ ಬಳಲುತ್ತಿರುವ ಮನುಷ್ಯನಿಗೆ ಆಹಾರವನ್ನು ಒದಗಿಸುವದಕ್ಕಾಗಿ ಅಲ್ಲ. ಅದೇ ರೀತಿಯಲ್ಲಿ, ಕೊರಿಂಥದಲ್ಲಿ ಕೆಲವರು

ಸಹಜವಾಗಿ ಬಯಕೆಗಳನ್ನು ಹತ್ತಿಕ್ಕುವ ದೃಷ್ಟಿಕೋನವನ್ನು ಅಳವಡಿಸಿಕೊಂಡಿದ್ದರು, ಅದರಲ್ಲೂ ವಿಶೇಷವಾಗಿ ಲೈಂಗೀಕ ಬಯಕೆಗಳು, ವಿಶ್ವಾಸಿಗಳಿಗೆ ಲಾಭದಾಯಕವಾಗಿದ್ದವು. ಶತಮಾನಗಳಿಂದ, ಕೆಲವು ಧರ್ಮಗಳು ಲೈಂಗೀಕತೆಯನ್ನೆ ಕೆಟ್ಟತನವೆಂದು ನಿರ್ಧರಿಸಿದ್ದರು.

ಮಹತ್ವದ ನೈತಿಕ ಸಂಗತಿಗಳ ಕುರಿತು ಪ್ರಶ್ನೆ ಉದ್ಭವಿಸುವಾಗ, ಪೌಲನು ಸಂಧಾನ ಮಾಡಿಕೊಳ್ಳುತ್ತಿರಲಿಲ್ಲ. ಉದಾಹರಣೆಗೆ, ಕಳ್ಳತನ ಅಥವಾ ದೇವದೂಷಣೆ, ಯಾವಾಗಲೂ ತಪ್ಪಾಗಿತ್ತು; ಆದರೆ ಅಪೊಸ್ತಲನು ಕೆಲವೊಂದು ಸಂಗತಿಗಳನ್ನು ಸನ್ನಿವೇಶಗಳೊಂದಿಗೆ ದೃಷ್ಟಿಸಬೇಕು ಎಂಬುದನ್ನು ಸ್ಪಷ್ಟಪಡಿಸಿದನು. ಹೊಟ್ಟೆಬಾಕುತನ ಮತ್ತು ವೇಶ್ಯೆಯೊಂದಿಗೆ ಸಂಪರ್ಕವನ್ನು ಬೆಳೆಸುವದು ಪಾಪ, ಸಾಧಾರಣವಾಗಿ ಊಟಮಾಡುವದು ಅವಶ್ಯ ಮತ್ತು ದೇವರು ಲೈಗೀಂಕತೆಯನ್ನು ವಿವಾಹದ ಪರಿಮಿತಿಯಲ್ಲಿ ಆಶೀರ್ವದಿಸುತ್ತಾನೆ. ಅಧ್ಯಾಯ 6ರಲ್ಲಿರುವ ಕಾರ್ಯವಿಶೇಷ ಆಸಕ್ತಿ, ಪೌಲನು ಅಧ್ಯಾಯ 7ರಲ್ಲಿ ವಿವಾಹದ ಕುರಿತು ಸ್ವಾಭಾವಿಕವಾಗಿ ಹರಿದು ಬಂದಿದೆ. ತಮ್ಮ ದೇಹವನ್ನು ಯಾವುದೇ ವಿಧದ ಸುಖಾನುಭವದಿಂದ ತೃಪ್ತಿಪಡಿಸುವದಕ್ಕೆ ಒಪ್ಪಿಸುವದನ್ನು ನಂಬುವವರಿಗೆ ಖಂಡಿತವಾಗಿ ತಪ್ಪು ಎಂದು ಹೇಳುವದರ ಮೇಲೆ ಕೇಂದ್ರಿಕರಿಸುವದಕ್ಕೆ ಅಪೊಸ್ತಲನಿಗೆ ಇದು ಸಮಯವಾಗಿತ್ತು. ಸಂಕ್ಷಿಪ್ತವಾಗಿ, ಆತನು ಕೆಳಗಿನಂತೆ ಪ್ರತಿಕ್ರಿಯಿಸಿದ್ದಾನೆ: ಗಂಡ ಮತ್ತು ಹೆಂಡತಿಯರ ಮಧ್ಯದಲ್ಲಿ ಲೈಂಗೀಕ ವ್ಯಕ್ತಪಡಿಸುವಿಕೆ ದೇವರಿಂದ ಅನುಮತಿಸಲ್ಪಟ್ಟಿದೆ. ಅದು ಕೆಡುಕಲ್ಲ.

## ತೃಪ್ತಿಪಡಿಸುವ ಅಥವಾ ಸ್ವ-ನಿರಾಕರಣೆಯ ವಿಷಯ (7:1-7)

ಪೌಲನು ಹಲವು ವರ್ಷ ಮುಂಚಿತವಾಗಿ ಕೊರಿಂಥವನ್ನು ಬಿಟ್ಟ ನಂತರ, ಆತನು 1 ಕೊರಿಂಥ ಪತ್ರಿಕೆಯನ್ನು ಬರೆಯುವ ಪೂರ್ವದಲ್ಲಿ, ಸ್ಥಾನಿಕ ಪ್ರವಾದಿಗಳ್ನು ಯಾವುದೇ ವಿಧದಲ್ಲಿ ಗಲಿಬಿಲಿಗೆ ಕೊಡುಗೆಯನ್ನು ನೀಡಿದ್ದರು ಇವರನ್ನು ಹೊರತು ಪಡಿಸಿ ಕ್ರೈಸ್ತರು ಮಾರ್ಗದರ್ಶನವಿಲ್ಲದೆ ಇದ್ದರು (ನೋಡಿರಿ 14:22-25). ಆಂತರಿಕ ಕಲಹಗಳು ವಿವಿಧ ದೃಷ್ಟಿಕೋನಗಳನ್ನು ಪ್ರತಿಪಾದಿಸುವವರ ಮತ್ತು ಜನಪ್ರಿಯ ತತ್ವಜ್ಞಾನಿಗಳ ಮಧ್ಯದಲ್ಲಿ ಉದ್ಭವಿಸಿದವು; ಅವರು ಸಭೆಯ ಗಲಭೆಗಳಿಗೆ ಕೊಡುಗೆಯನ್ನು ನೀಡಿದರು ಎಂಬುದರಲ್ಲಿ ಸಂದೇಹವಿಲ್ಲ.

ಒಂದು ವಾದವಿವಾದ ಪೀಡಿಸಿತ್ತು, ಕ್ರೈಸ್ತರು ಪೌಲನು ಪ್ರಾಮಾಣಿಕವಾಗಿ ಸಮೀಪದಲ್ಲಿದ್ದನು ಎಂಬುದನ್ನು ಕಲಿತಿದ್ದರು, ಎಫೆಸದಲ್ಲಿಯೂ ಸಹ, ನಿಜವಾಗಿಯೂ ಪೌಲನು, ಅವರಿಗೆ ಕನಿಷ್ಠ ಒಂದು ಪತ್ರವನ್ನಾದರೂ ಬರೆಯುವದರ ಮೂಲಕ ಸಂಪರ್ಕವನ್ನು ಪ್ರಾರಂಭಿಸಿದನು (5:9). ಕ್ರೈಸ್ತರು ಮಾರ್ಗದರ್ಶನ ಪಡೆಯಲು ಆತನಿಗೆ ಮತ್ತೆ ಬರೆದರು. ಪೌಲನಿಗೆ ಕಳುಹಿಸಿದ ಪತ್ರದಲ್ಲಿ ಯಾರು ವಿಷಯಗಳನ್ನು ಸೇರಿಸಿದರು ಎಂಬುವುದು ನಿಖರವಾಗಿ ತಿಳಿಯದು. ಅದನ್ನು ಕಳುಹಿಸಿದ ಮೂವರು ಸಂದೇಶವಾಹಕರಿಂದ ಇದು ಬರೆಯಲ್ಪಟ್ಟಿದೆ, ಅಥವಾ ಸಮಿತಿಯು ಇದನ್ನು ರಚಿಸಿದ್ದಿರಬಹುದು. ಈ ಪತ್ರದ ಮೂಲ ವಿಷಯವನ್ನು ಪೌಲನ 1 ಕೊರಿಂಥದಲ್ಲಿ ಮಾಡಿದ ಪ್ರತಿಕ್ರಿಯೆಯಿಂದ ನಿರ್ಧರಿಸಬಹುದು.

**[1]ನೀವು ಬರೆದ ಸಂಗತಿಗಳನ್ನು ಕುರಿತು ನಾನು ಹೇಳುವ ಅಭಿಪ್ರಾಯವೇನಂದರೆ - ಸ್ತ್ರೀಸಂಪರ್ಕವಿಲ್ಲದೆ ಇರುವದು ಮನುಷ್ಯನಿಗೆ ಒಳ್ಳೇದು; [2]ಆದರೆ ಜಾರತ್ವವು ಪ್ರಬಲವಾಗಿರುವರಿಂದ ಪ್ರತಿಯೊಬ್ಬನಿಗೆ ಸ್ವಂತ ಹೆಂಡತಿಯು ಇರಲಿ. ಪ್ರತಿಯೊಬ್ಬಳಿಗೆ ಸ್ವಂತ ಗಂಡನು ಇರಲಿ. [3]ಗಂಡನು ಹೆಂಡತಿಗೆ ಸಲ್ಲತಕ್ಕದ್ದನ್ನು ಸಲ್ಲಿಸಲಿ. ಹಾಗೆಯೇ ಹೆಂಡತಿಯು ಗಂಡನಿಗೆ ಸಲ್ಲಿಸಲಿ. [4]ಹೆಂಡತಿಗೆ ಸ್ವಂತ ದೇಹದ ಮೇಲೆ ಅಧಿಕಾರವಿಲ್ಲ; ಅದು ಗಂಡನಿಗುಂಟು. ಹಾಗೆಯೇ ಪುರುಷನಿಗೆ ಸ್ವಂತ ದೇಹದ ಮೇಲೆ ಅಧಿಕಾರವಿಲ್ಲ; ಅದು ಹೆಂಡತಿಗುಂಟು. [5]ಪ್ರಾರ್ಥನೆಗೆ ಮನಸ್ಸು ಕೊಡುವದಕ್ಕಾಗಿ ನೀವು ಪರಸ್ಪರ ಸಮ್ಮತಿಯಿಂದ ಸ್ವಲ್ಪಕಾಲ ದಂಪತಿ ಧರ್ಮವನ್ನು ಬಿಟ್ಟು ಅಗಲಿರಬಹುದೇ ಹೊರತು ಅನ್ಯಥಾ ಹಾಗೆ ಮಾಡಬಾರದು; ಆ ಮೇಲೆ ಸೈತಾನನು ನಿಮಗೆ ದಮೆಯಿಲ್ಲದಿರುವದನ್ನು ನೋಡಿ ನಿಮಗೆ ದುಷ್ಪ್ರೇರಣೆಮಾಡದಂತೆ ತಿರುಗಿ ಕೂಡಿಕೊಳ್ಳಿರಿ. [6]ಹೀಗೆ ಮಾಡಬಹುದೆಂದು ಹೇಳುವದು ಹಿತೋಪದೇಶವೇ ಹೊರತು ಆಜ್ಞೆಯಲ್ಲ. [7]ನಾನಿರುವಂತೆಯೇ ಎಲ್ಲಾ ಮನುಷ್ಯರು ಇರಬೇಕೆಂಬದು ನನ್ನ ಇಷ್ಟ; ಆದರೆ ಒಬ್ಬನು ಒಂದು ವಿಧವಾಗಿ ಮತ್ತೊಬ್ಬನು ಇನ್ನೊಂದು ವಿಧವಾಗಿ ದೇವರಿಂದ ವರವನ್ನು ಹೊಂದಿಕೊಂಡಿದ್ದಾರೆ.**

**ವಚನಗಳು 1, 2.** ಪೌಲನು ಈಗ **ಸಂಗತಿಗಳನ್ನು ಕುರಿತು** ಎಂಬ ವಾಕ್ಯಾಂಗದೊಂದಿಗೆ ತನ್ನ ಪತ್ರವು ಮುಂದುವರೆಯುತ್ತಿರುವ ಹಾಗೆ ಸಭೆಗೆ ಸಂಬಂಧಿಸಿದ ಇತರ ಪ್ರಶ್ನೆಗಳನ್ನು ಗುರುತಿಸುವದಕ್ಕಾಗಿ ಉಪಯೋಗಿಸುತ್ತಾನೆ (7:25; 8:1; 12:1; 16:1). ಇಲ್ಲಿ ಅದು ವಿವಾಹದ ಕುರಿತು ಅವನ ಚರ್ಚೆಯನ್ನು ಪರಿಚಯಿಸುತ್ತದೆ. ಕೊರಿಂಥದಲ್ಲಿ ಕೆಲವರು ಪರಿಶುದ್ಧತೆಯ ಕುರಿತು ಅವನ ಬೋಧನೆಯಿಂದ ಆಚೆಗೆ ಹೋಗುತ್ತಾರೆ ಮತ್ತು ಕ್ರೈಸ್ತರಿಗೆ ಎಲ್ಲಾ ಪರಿಸ್ಥಿತಿಗಳಲ್ಲಿ ಲೈಂಗೀಕ ಸಂಬಂಧಗಳಿಂದ ದೂರ ಇರುವದು ಉತ್ತಮ ಎಂದು ನಿರ್ವಹಿಸುತ್ತಾರೆ.

ಕೆಳಗಿನ ಕೆಲವು ಅನುಸಂಧಾನಗಳನ್ನು 6:12, 13, ಉಪಯೋಗಿಸಲಾಗಿದೆ. NRSV ಅನುವಾದಕರು "ಸ್ತ್ರೀಸಂಪರ್ಕವಿಲ್ಲದೆ ಇರುವದು ಒಬ್ಬ ಪುರುಷನಿಗೆ ಒಳ್ಳೇದು" ಎಂಬ ಪದಗಳನ್ನು ಆವರಣ ಚಿಹ್ನೆಗಳಲ್ಲಿ ಇಡುತ್ತಾರೆ. ಅನುವಾದದ ಕಾರ್ಯಕ್ಕೆ ಒಂದು ಶ್ರೇಣಿಯ ಅರ್ಥೈಸುವಿಕೆ ಅಗತ್ಯವಾಗಿದೆ ಮತ್ತು ತಮ್ಮ ತೀರ್ಪಿನಲ್ಲಿ ಈ ವಾಕ್ಯಂಗವನ್ನು ಪೌಲನು ಕೊರಿಂಥದ ಕೆಲವು ವಿಶ್ವಾಸಿಗಳ ಘೋಷಣೆಯಾಗಿ ಉಲ್ಲೇಖಿಸಿದ್ದಾನೆ. ಗಲಭೆಯ ಒಂದು ಬದಿಯಲ್ಲಿ ಹಸಿವನ್ನು ತೃಪ್ತಿಪಡಿಸಿಕೊಳ್ಳುವದನ್ನು "ಎಲ್ಲಾ ಕಾರ್ಯಗಳನ್ನು ಮಾಡುವದಕ್ಕೆ ನನಗೆ ಸ್ವಾತಂತ್ರವೇನೋ ಉಂಟು" (6:12). ಮತ್ತು "ಭೋಜನ ಪದಾರ್ಥಗಳು ಹೊಟ್ಟೆಗಾಗಿಯೂ ಮತ್ತು ಹೊಟ್ಟೆಯು ಭೋಜನ ಪದಾರ್ಥಗಳಿಗಾಗಿಯೂ ಅವೆ'' (6:13) ಎಂಬ ಘೋಷಣೆಯೊಂದಿಗೆ ಸಮರ್ಥಿಸುತ್ತವೆ. ಇತರರು ತಮ್ಮ ಸ್ವಂತ ಘೋಷಣೆಗಳೊಂದಿಗೆ ಪ್ರತಿಕ್ರಿಯಿಸಿದ್ದಾರೆ. **ಸ್ತ್ರೀಸಂಪರ್ಕವಿಲ್ಲದೆ ಇರುವದು ಒಬ್ಬ ಪುರುಷನಿಗೆ ಒಳ್ಳೇದು.**[1] ಮೊದಲಿನ ಎರಡು ಘೋಷಣೆಗಳು ಲೈಂಗೀಕ ತೃಪ್ತಿಯನ್ನು ಬೆಂಬಲಿಸುತ್ತವೆ; ಮೂರನೆಯದು ವ್ರತಬದ್ಧವಾದ ಜೀವನ ಶೈಲಿ ಎಂದು ಕರೆಯಲ್ಪಡುತ್ತದೆ. ಸನ್ನಿವೇಶದ ಈ ಹೇಳಿಕೆಗಳನ್ನು NRSVಯ ಅನುವಾದಕನು ಆವರಣ ಚಿಹ್ನೆಯಲ್ಲಿ ಇಡುವದು ಸರಿಯಾಗಿದೆ ಎಂದು ಹೇಳುತ್ತಾರೆ.

"ಸ್ತ್ರೀಯನ್ನು ಸ್ಪರ್ಶಿಸುವದು" ಇದನ್ನು ಅಪೊಸ್ತಲನು ಸಮಾನಾರ್ಥಕ ಪದವಾಗಿ

ಲೈಂಗೀಕ ಸಂಬಂಧಗಳಿಗೆ ಉಲ್ಲೆಖಿಸಲು ಉಪಯೋಗಿಸುತ್ತಾನೆ. ಸಭೆಯಲ್ಲಿ ತೃಪ್ತಿಪಡಿಸುವದು ಪ್ರತಿ ಸ್ವ-ನಿರಾಕರಣೆ ನಿಜವಾಗಿಯೂ ಶಕ್ತಿಯುತವಾಗಿವೆ, ಮತ್ತು ಈ ಕ್ರೈಸ್ತರು ಪೌಲನನ್ನು ವಿಷಯವನ್ನು ಪರಿಹರಿಸಲು ಕೇಳಕೊಳ್ಳುತ್ತಾರೆ. ಯಾರು ಸರಿ? ಈಗಾಗಲೇ ತೃಪ್ತಿಪಡುವವರನ್ನು ಬೆಂಬಲಿಸುವವರನ್ನು ಸಂಬೋಧಿಸಿ, ಅಪೊಸ್ತಲನು ತನ್ನ ಗಮನವನ್ನು ವ್ರತಬದ್ಧತೆಯೆಡೆಗೆ ತಿರುಗಿಸುತ್ತಾನೆ. ಅವನು ಹಿಂದೆ (6:12, 13)ರಲ್ಲಿ ಮಾಡಿದಂತೆ, ಪೌಲನು ಘೋಷಣೆಯನ್ನು ಉಲ್ಲೇಖಿಸಿ ಅದು ವ್ಯಕ್ತಪಡಿಸಿರುವ ಸತ್ಯವನ್ನು ಸ್ವೀಕರಿಸಿದ್ದಾನೆ, ಆದರೆ, ಇದು ಎಲ್ಲಾ ಸತ್ಯವನ್ನು ವ್ಯಕ್ತಪಡಿಸುವದಿಲ್ಲ ಎಂಬುದನ್ನು ದೃಢಪಡಿಸುತ್ತಾ ಆದು ನೀರಾಕರಿಸಿದ್ದಾನೆ.

ಸಭೆಯ ಈ ವಾದಗಳು ಘೋಷಣೆಯ ಹಂತಕ್ಕೆ ಇಳಿಸಲಾಗಿವೆ. ಆದರೆ ಇವುಗಳನ್ನು ಪ್ರಾಮುಖ್ಯವಾಗಿಸುವದು “ವಿವಾಹವು ಆಜ್ಞೆಯಾಗಿದೆಯೋ, ಅಥವಾ ಕ್ರೈಸ್ತರು ಅವಿವಾಹಿತರಾಗಿರಬೇಕೋ?” ಎಂಬುದು ಅವರ ತಾತ್ಪರ್ಯದ ಪ್ರಶ್ನೆಯಾಗಿದೆ. ಪ್ರಶ್ನೆಯನ್ನು ಹೆಚ್ಚು ವಿಸ್ತಾರವಾಗಿ ನೀಡಬಹುದಿತ್ತು: “ಲೈಂಗೀಕ ಉಲ್ಲಂಘನೆಯು ಯಾವಾಗಲೂ ಲೈಂಗೀಕ ತೃಪ್ತಿಪಡಿಸುವಿಕೆಗೆ ಯೋಗ್ಯವೋ?” ಪೌಲನು ಈ ವಿಷಯವನ್ನು ಸಂಬೋಧಿಸುತ್ತಿರುವ ಹಾಗೆ ಹಗುರವಾಗಿ ಹೆಜ್ಜೆಯನ್ನಿಡುತ್ತಾನೆ, ಆದರೆ ಕೊನೆಯಲ್ಲಿ ವಿವಾಹದ ಒಳಗೆ ಲೈಂಗೀಕತೆ ಉತ್ತಮ ಎನ್ನುವದನ್ನು ದೃಢಪಡಿಸುತ್ತಾನೆ. ಅವನು ಎಲ್ಲಾ ಪರಿಸ್ಥಿತಿಗಳಲ್ಲಿ ಉಲ್ಲಂಘನೆಯು ಮೌಲ್ಯವಾಗಿದೆ ಎಂದು ಬೆಂಬಲಿಸಿ ಹೇಳುವದಿಲ್ಲ, ಅವನು **. . . ಪ್ರತಿಯೊಬ್ಬ ಮನುಷ್ಯನಿಗೆ ಸ್ವಂತ ಹೆಂಡತಿಯಿರಲಿ ಮತ್ತು ಪ್ರತಿಯೊಬ್ಬಳಿಗೆ ಸ್ವಂತ ಗಂಡನಿರಲಿ** (7:2) ಎಂದು ಬರೆಯುತ್ತಾನೆ.

“ಸ್ತ್ರೀ ಸಂಪರ್ಕವಿಲ್ಲದೆ ಇರುವದು ಒಬ್ಬ ಪುರುಷನಿಗೆ ಒಳ್ಳೇದು” (7:1) ಎಂಬ ವಾಕ್ಯದಲ್ಲಿ ಯಾವದೇ ರೀತಿಯ ಪ್ರಯೋಜನಗಳಿದ್ದರೂ, ಪೌಲನು ನೈಜ್ಯತೆಯನ್ನು ಸೂಚಿಸುತ್ತಾನೆ: ಅನೈತಿಕತೆಯು ಉದ್ಭವಿಸುತ್ತದೆ ಯಾಕಂದರೆ ದೈಹಿಕ ಬಯಕೆಗಳು ಬಲವಾಗಿವೆ. ಅವನು ಸೂಳೆಯ ಸಂಸರ್ಗ ಮಾಡುವದರ (6:15) ಅಥವಾ ಒಬ್ಬನು ತನ್ನ ಹೆಂಡಿತಿಗೆ ಸಮರ್ಪಿಸಿಕೊಳ್ಳುವದು ಇವುಗಳ ಮಧ್ಯದಲ್ಲಿ ಆಯ್ಕೆಮಾಡಿಕೊಳ್ಳುವದು ಬರುವಾಗ, ವಿವಾಹವು ಕ್ರೈಸ್ತರ ಮಾರ್ಗವಾಗಿದೆ ವಚನ 1 ಮತ್ತು 2ರಲ್ಲಿ Richard B. Hays ತಾನು ಸೇರಿಸಿರುವದನ್ನು ಓರೆ ಅಕ್ಷರದಲ್ಲಿ ಇಡುತ್ತಾ ಹೀಗೆ ಸಂಕ್ಷಿಪ್ತಗೊಳಿಸುತ್ತಾನೆ:

> ನೀನು ಬರೆದಿರುವ ಮಾತುಗಳಿಗೆ ನಾನು ಪ್ರತಿಕ್ರಿಯಿಸುತ್ತಾನೆ. *ಪವಿತ್ರತೆ ಮತ್ತು ಪರಿಶುದ್ಧತೆಗಾಗಿ, ವಿವಾಹಿತ ದಂಪತಿಗಳು ಲೈಂಗೀಕ ಸಂಪರ್ಕವನ್ನು ಉಲ್ಲಂಘಿಸಬೇಕು. ನೀವು ಹೇಳುವಂತೆ* “ಸ್ತ್ರೀ ಸಂಪರ್ಕವಿಲ್ಲದೆ ಇರುವದು ಒಬ್ಬ ಪುರುಷನಿಗೆ ಒಳ್ಳೇದು.” ಆದರೆ ಅದು ನೈಜ್ಯತೆಯಾಗಿಲ್ಲದೇ ಇರುವದರಿಂದ - ಇಂಥಹ ಗಂಡಂದಿರು ತಮ್ಮ ಸ್ವಂತ ಹೆಂಡತಿಯೊಂದಿಗೆ ಮತ್ತು ಪ್ರತಿಯೊಬ್ಬ ಹೆಂಡತಿಯು ತನ್ನ ಗಂಡನೊಂದಿಗೆ ಲೈಂಗೀಕ ಸಂಪರ್ಕವನ್ನು ಇಟ್ಟುಕೊಳ್ಳಲಿ.[2]

ಈ ತಾತ್ಪರ್ಯವು ಪೌಲನ ಸಲಹೆಯ ಅರ್ಥವನ್ನು ಸೆರೆಹಿಡಿಯುತ್ತದೆ. ಅಂತಹ ಕಲಬೆರಕೆಯನ್ನು ನಿಗ್ರಹಿಸಲು ಪ್ರಯತ್ನಿಸುತ್ತಿದ್ದವರಿಗೆ ಮತ್ತು ನಿಷ್ಠಾವಂತ ವಿವಾಹದ ಬದ್ಧತೆಯೊಳಗಿರುವ ಲೈಂಗಿಕ ಸಂಬಂಧವು ದೇವರ ಆಶೀರ್ವಾದವನ್ನು ಹೊಂದಿದೆಯೆಂದು

ಮನವರಿಕೆ ಮಾಡಿದವರಿಗೆ ಅಪೊಸ್ತಲರು ಗೌರವವನ್ನು ವ್ಯಕ್ತಪಡಿಸಿದರು.

1 ಥೆಸಲೋನಿಕ 4:1-8ರಲ್ಲಿ ಪೌಲನ ಎಚ್ಚರಿಕೆಯು ಪ್ರಸ್ತುತ ವಾಕ್ಯಭಾಗವನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ. Wayne A. Meeks ಅವರು ಎರಡೂ ವಾಕ್ಯಭಾಗಗಳಲ್ಲಿ ಸಾಮಾನ್ಯ ನಿಯಮವೆಂದರೆ "'avoid *porneia'* ದೂರವಿರಿಸುವದು [ಹಾದರವನ್ನು], ಈ ಪದವನ್ನು ಎಲ್ಲಾ ರೀತಿಯ ನ್ಯಾಯಸಮ್ಮತವಲ್ಲದ ಸಂಬಂಧಗಳನ್ನು ವಿಂಗಡಿಸುವದಕ್ಕೆ ಉಪಯೋಗಿಸಲಾಗುತ್ತದೆ ಎಂದು ಹೇಳುತ್ತಾರೆ." ಅವರು "ಪೌಲನ ಕಾಲದ ಕ್ರೈಸ್ತರಲ್ಲಿ ಏಕಪತ್ನಿವ್ರತ ನಿಯಮವನ್ನು ಅರ್ಥಮಾಡಿಕೊಂಡಿದ್ದರು ಎಂಬುದನ್ನು ತೋರಿಸುತ್ತದೆ. ಅದರಂತೆ ಇದು ಯೆಹೂದ್ಯ ಹೆಲೆನಿಸ್ಟಿಕ್ ಮತ್ತು ರೋಮನ್‌ರ ಕಾಲದಲ್ಲಿ ಹಾದರವನ್ನು ದೂರುವಿರಿಸುವ ನಿಯಮಾನುಸಾರವಾದ ಮತ್ತು ಸಾಮಾವ್ಯ ವಿಧಾನವಾಗಿತ್ತು."[3] F. F. Bruce ಅವರು ಪೌಲನು ತರ್ಕಬದ್ಧವಾಗಿರುವದಕ್ಕಿಂದ ಹೆಚ್ಚಾಗಿ ಭಾವನಾತ್ಮಕವಾದ ವಾದವನ್ನು ಮಾಡುತ್ತಿದ್ದಾನೆ ಎಂದು ಹೇಳುತ್ತಿರುವದು ಸರಿಯಾಗಿದೆ. ಅಪೊಸ್ತಲನ ಮಾತುಗಳು "ಹಾದರವನ್ನು ದೂರವಿರಿಸುವದಕ್ಕಿಂತ ಹೆಚ್ಚಾದ ಉದ್ದೇಶವನ್ನು [ವಿವಾಹವು] ನೋಡುತ್ತಿಲ್ಲ ಎಂಬುದನ್ನು ಸೂಚಿಸುತ್ತಿಲ್ಲ."[4] ಪೌಲನ ಲೈಂಗೀಕ ಮತ್ತು ವೈವಾಹಿಕ ಸಂಬಂಧದ ತನ್ನ ಜನರಿಗೆ ದೇವರ ಚಿತ್ತ ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯ ಮಧ್ಯದಲ್ಲಿ ಇರುವ ವಿವಾಹಿತ ಜೀವಿತದ ಸಮರ್ಪಣೆ ಮತ್ತು ಎಚ್ಚರಿಕೆಗೆ ಪ್ರಾರಂಭ ಅಂಶವಾಗಿದೆ. ವಿವಾಹದೊಳಗೆ, ಗಂಡ ಮತ್ತು ಹೆಂಡತಿ ಪ್ರೀತಿ, ಸಂಬಂಧ ಮತ್ತು ಬೆಂಬಲದಲ್ಲಿ ಆನಂದಿಸುತ್ತಾರೆ (ಎಫೆಸ 5:25 ನೋಡಿರಿ).

**ವಚನ 3.** ಒಂದು ವೇಳೆ ಲೈಂಗೀಕ ವ್ಯಕ್ತಪಡಿಸುವಿಕೆಯಲ್ಲಿ ಗಂಡ ಮತ್ತು ಹೆಂಡತಿಯರ ಸಂಬಂಧದ ಸಮರ್ಪಣೆಯಲ್ಲಿ ಮಾನವನ ಹೆಚ್ಚಾದ ಮೂಲ ಅವಶ್ಯಕತೆಗಳ ಒದಗಿಸುವಿಕೆಯು ಇರದಿದ್ದಲ್ಲಿ, ಅದು ಅಷ್ಟೊಂದು ಮಹತ್ವವುಳ್ಳದಾಗಿರುತ್ತಿರಲಿಲ್ಲ. ಗಂಡ ಮತ್ತು ಹೆಂಡತಿ ತಮ್ಮ ವಿವಾಹದ ಸಂಗಾತಿಯ ಲೈಂಗೀಕ ಅವಶ್ಯಕತೆಗಳನ್ನು ಪೂರೈಸುವದು ಪರಸ್ಪರ ಕರ್ತವ್ಯವಾಗಿದೆ ಎಂದು ಪೌಲನು ಹೇಳುತ್ತಾನೆ. ಲೈಂಗೀಕ ನಿರ್ಭಂಧದ ನಿರ್ಧಾರವನ್ನು ಮಾಡುವದು ಗಂಡನಾಗಲಿ ಅಥವಾ ಹೆಂಡತಿಯಾಗಲಿ ಒಬ್ಬರೇ ತೆಗದೆದುಕೊಳ್ಳುವ ನಿರ್ಧಾರವಲ್ಲ. **ಗಂಡನು ಹೆಂಡತಿಗೆ ಸಲ್ಲತಕ್ಕದ್ದನ್ನು ಸಲ್ಲಿಸಲಿ. ಹಾಗೆಯೇ ಹೆಂಡತಿಯು ಗಂಡನಿಗೆ ಸಲ್ಲಿಸಲಿ.** ಅವನು ಹೇಳುವದರ ಅರ್ಥ ಗಂಡ ಮತ್ತು ಹೆಂಡತಿ ಒಬ್ಬರಿಗೊಸ್ಕರ ಒಬ್ಬರಿದ್ದಾರೆಂದು ಪರಿಗಣಿಸಬೇಕು. ಒಬ್ಬರ ಸಂಗಾತಿ ತನ್ನ ದೇಹವನ್ನು ಕೇವಲ ಕರ್ತವ್ಯವೆಂಬಂತೆ ಅರ್ಪಿಸಬೇಕು ಎಂದು ಹೇಳುತ್ತಿಲ್ಲ. ಅವನು ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯ ಮಧ್ಯದಲ್ಲಿರುವ ಲೈಂಗೀಕ ತೃಪ್ತಿಪಡಿಸುವಿಕೆಯನ್ನು ವಿವಾಹ ಸಂಬಂಧದಲ್ಲಿ ದೇವರು ಆಶೀರ್ವದಿಸುತ್ತಾನೆ ಎಂದು ದೃಢಪಡಿಸುತ್ತಿದ್ದಾನೆ.

**ವಚನ 4.** ಪೌಲನ ದೃಢಪಡಿಸುವಿಕೆ ಗಂಡನಾಗಲಿ ಅಥವಾ ಹೆಂಡತಿಯಾಗಲಿ ಅವನ ಅಥವಾ ಅವಳ ದೇಹದ ಮೇಲೆ ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತಾರೆ, ಗ್ರೀಕೋ-ರೋಮನ್ ಸಮಾಜದಲ್ಲಿ 1ನೇ ಶತಮಾನದಲ್ಲಿ ಇದ್ದಂಥ ಜನರಿಗೆ ಇದು ವಿಚಿತ್ರವಾಗಿ ತೋರಬಹುದು ಎಂಬುದರಲ್ಲಿ ಸಂಶಯವಿಲ್ಲ. ಪುರುಷ-ಪ್ರಧಾನ ವಿಗ್ರಹಾರಾಧಕರ ಸಮಾಜದಲ್ಲಿ, ಅವರು ಗಂಡನಿಗೆ ತನ್ನ ಹೆಂಡತಿಯ ದೇಹದ ಮೇಲೆ ಅಧಿಕಾರವಿದೆ ಎಂಬುದನ್ನು ನಿರ್ಧಾರಿತವಾಗಿ ತಿಳಿದುಕೊಂಡಿದ್ದರು, ಗಂಡಂದಿರ ದೇಹದ ಮೇಲೆ

ಹೆಂಡತಿಗೂ ಸಹ ಅಧಿಕಾರವಿದೆ ಎಂಬುದನ್ನು ಸ್ವೀಕರಿಸುವದು ಪುರುಷರಿಗೆ ಬಹಳ ಕಠಿಣವಾಗಿತ್ತು.

ಅಪೊಸ್ತಲರ ಬೋಧನೆ ಗಂಡ ಮತ್ತು ಹೆಂಡತಿಯನ್ನು ಸಮಾನವಾಗಿ ಮಾಡಿತು: **ಹೆಂಡತಿಗೆ ಸ್ವಂತ ದೇಹದ ಮೇಲೆ ಅಧಿಕಾರವಿಲ್ಲ . . . ಗಂಡನಿಗೆ ಸ್ವಂತ ದೇಹದ ಮೇಲೆ ಅಧಿಕಾರವಿಲ್ಲ.** ಯಾರನ್ನಾದರೂ ಮದುವೆಯಾಗುವದೆಂದರೆ ಅವರೊಂದಿಗೆ ಒಂದಾಗುವದು ಎಂದರ್ಥ. ತನ್ನನ್ನು ತಾನು ಸಮರ್ಪಿಸಿಕೊಳ್ಳುವದು ಮತ್ತು ಸಂಗಾತಿಯನ್ನು ತನ್ನ ಭಾಗವೆಂದು ಪರಿಗಣಿಸುವದು. ವಿವಾಹದಲ್ಲಿ ಅವನು ಅಥವಾ ಅವಳು ತನ್ನ ದೇಹದ ವಿಶೇಷವಾದ ಹಕ್ಕನ್ನು ಸಮರ್ಪಿಸಿಕೊಳ್ಳುತ್ತಾರೆ. ಲೈಂಗೀಕ ವ್ಯಕ್ತಪಡಿಸುವಿಕೆ ಪರಸ್ಪರವಾಗಿದೆ; ಇದು ಪರಸ್ಪರ ಮೆಚ್ಚಿಸಲು ಅನುಮತಿ ಅಥವಾ ತಡೆಹಿಡಿಯುವದಲ್ಲ. ಗಂಡ ಮತ್ತು ಹೆಂಡತಿ ಇಬ್ಬರ ಅವಶ್ಯಕತೆಗಳನ್ನು ಪರಿಗಣಿಸುವದು ಮತ್ತು ಗೌರವಿಸುವದು ಪ್ರಾಮುಖ್ಯವಾಗಿದೆ.

**ವಚನ 5.** ಈ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಪೌಲನು ಕ್ರೈಸ್ತರಿಗೆ ನೇರವಾದ ನಿಷೇಧವನ್ನು ಮಂಡಿಸುತ್ತಾನೆ: ಒಬ್ಬರಿಗೊಬ್ಬರು **ಅನ್ಯಥಾ ಹಾಗೆ ಮಾಡಬಾರದು.** ನಿಷೇಧವು ಕೊನೆಯ ಎರಡು ವಿಧಗಳದ್ದಾಗಿದೆ. ಯಾವುದನ್ನು ನಿಷೇಧಿಸಲಾಗಿದೆಯೋ ಅದರಿಂದ ಎಂದಿಗೂ ಪ್ರಾರಂಭಿಸಬಾರದು ಅಥವಾ ಅವರು ತಾವು ಯಾವುದನ್ನು ಮಾಡುತ್ತಿರುವ ಪ್ರಕ್ರಿಯೆಯಲ್ಲಿದ್ದಾರೋ ಅದನ್ನು ಮಾಡುವದನ್ನು ನಿಲ್ಲಿಸಬೇಕು. ಗ್ರೀಕರು ಎರಡು ವಿಧವಾದ ನಿಷೇಧಗಳಲ್ಲಿ ಆಂಗ್ಲಭಾಷೆಯಲ್ಲಿ ಸಾಮಾನ್ಯವಾಗಿ ಮಾಡಬಾರದು ಎಂದು ಹೇಳುವದರಲ್ಲಿ ಸ್ಪಷ್ಟವಾದ ವ್ಯತ್ಯಾಸವನ್ನು ಮಾಡುತ್ತಾರೆ; ಪೌಲನು ಕೊರಿಂಥದವರಿಗೆ ಅವರು ಏನನ್ನು ಮಾಡುತ್ತಿದ್ದಾರೋ ಅದನ್ನು ಮಾಡುವದನ್ನು ನಿಲ್ಲಿಸಿರಿ (μὴ ἀποστερεῖτε, *mē apostereite*) ಎಂದು ಹೇಳುತ್ತಿದ್ದಾನೆ. ಯಾವುದೇ ಹಂತದಲ್ಲಿ ಗಂಡಂದಿರು ಮತ್ತು ಹೆಂಡತಿಯರು ದಂಪತಿಗಳ ಹಕ್ಕನ್ನು ಪರಸ್ಪರ ತಡೆಹಿಡಿಯುತ್ತಿದ್ದಾರೊ, ಅವರು ಕ್ರೈಸ್ತರಿಗೆ ಯೋಗ್ಯವಲ್ಲದ ರೀತಿಯಲ್ಲಿ ವರ್ತಿಸುತ್ತಿದ್ದಾರೆ, ಕ್ರಿಸ್ತನು ವಿವಾಹ ಅನ್ಯೋನ್ಯತೆಯಲ್ಲಿ ಯಾವುದೇ ನಿರ್ಭಂದವನ್ನು ಇಟ್ಟಿಲ್ಲ. ಲೈಂಗೀಕತೆಯು ಮೂಲತಃ ಕೆಡುಕು ಅಥವಾ ಬುದ್ಧಿಪೂರ್ವಕವಾಗಿ ಮಾಡುವದಲ್ಲ. ಅದು ಗಂಡ ಮತ್ತು ಹೆಂಡತಿ ಇಬ್ಬರಿಗೂ ಪರಸ್ಪರ ಪ್ರೀತಿಯನ್ನು ಹಂಚಿಕೊಳ್ಳಲು ಮತ್ತು ಜನಾಂಗಗಳಿಗೆ ಜನ್ಮನೀಡುವದಕ್ಕಾಗಿ ದೇವರು ನೀಡಿದ ವರವಾಗಿದೆ.

ಸಾಮಾನ್ಯ ನಿಯಮದ ಆಕ್ಷೇಪಣೆ ಅಪೊಸ್ತಲನ ಮನಸ್ಸಿನಲ್ಲಿ ಹಾದುಹೋಯಿತು. ಒಂದುವೇಳೆ ದಂಪತಿಗಳು **ಪರಸ್ಪರ ಸಮ್ಮತಿಯಿಂದ** ಲೈಂಗೀಕ ಸಂಬಂಧವನ್ನು ತ್ಯಜಿಸುವುದಾದರೆ ಅವರು ಆ ಸಮಯದಲ್ಲಿ (ತಮ್ಮನ್ನು) **ಪ್ರಾರ್ಥನೆಗಾಗಿ** ಸಮರ್ಪಿಸಿಕೊಳ್ಳಲು ಹಾಗೆ ಮಾಡಬಹುದು. ಪೌಲನು ಬಹುಶಃ ಈ ಆಕ್ಷೇಪಣೆಯನ್ನು ರೂಢಿಯಲ್ಲಿ ತಂದದ್ದು ಯಾಕಂದರೆ ಕೊರಿಂಥದಲ್ಲಿ ಕೆಲವು ವಿವಾಹಿತ ದಂಪತಿಗಳು ಇದನ್ನು ಅಭ್ಯಾಸಿಸುತ್ತಿದ್ದರು. ಅವನು ಇಂಥಹ ಒಪ್ಪಂದಗಳಲ್ಲಿ ಯಾವ ಅಪಾಯವನ್ನು ಕಾಣಲಿಲ್ಲ; ನಿಜವಾಗಿಯೂ, ಇದು ದಂಪತಿಗಳನ್ನು ಹೆಚ್ಚು ದೇವರ ಸಾಮಿಪ್ಯಕ್ಕೆ ಮತ್ತು ಪರಸ್ಪರ ಸಾಮೀಪ್ಯಕ್ಕೆ ತರಲು ಕಾರಣವಾಗುತಿತ್ತು.

ಪೌಲನು ಕ್ರೈಸ್ತ ವಿವಾಹದ ಎರಡೂ ಪಂಗಡಗಳನ್ನು ಲೈಂಗೀಕ ಸಮರ್ಪಣೆಯನ್ನು

ಹೊರತು ಪಡಿಸಿ ವಯಕ್ತಿಕವಾಗಿ ಅಪಹರಿಸುವದನ್ನು ನಿಷೇಧಿಸಿದನು. ಪರಸ್ಪರ ಒಪ್ಪಿಗೆಯೊಂದಿಗೆ ಪಂಗಡಗಳ ಆತ್ಮೀಕ ಬೆಳವಣಿಗೆಯನ್ನು ಹುಡುಕುತ್ತಿರುವಂತೆ ನಿಷೇಧವನ್ನು ಆಕ್ಷೇಪಣೆಗಳೊಂದಿಗೆ ಅವನು ಆಧುನೀಕರಣಗೊಳಿಸಿದನು. ಅವನು 7.2ರಲ್ಲಿ ಉಲ್ಲೇಖಿಸಿದ ವಿಷಯವನ್ನು ತಿರುಗಿ ಉಲ್ಲೇಖಿಸಿದವರ ಮೂಲಕ ಅದನ್ನು ದೇವರು ಬಲವಾದ ಲೈಂಗಿಕ ಹಸಿವನ್ನು ಅಥವಾ ಬಯಕೆಯನ್ನು ಅನೇಕ ಪುರುಷ ಮತ್ತು ಸ್ತ್ರೀಯರಿಗೆ ಇಟ್ಟಿದ್ದಾನೆ. ಯಾರೊಬ್ಬರು ಅದರೊಂದಿಗೆ ಹೋರಾಡುವದು ಬೇಡ. ಸೈತಾನನು ಈ ದಾಹವನ್ನು ಉಪಯೋಗಿಸುತ್ತಾನೆ ಮತ್ತು ಉಪಯೋಗಿಸುವದನ್ನು ಮುಂದುವರೆಸುತ್ತಾನೆ, ದೇವ ಜನರನ್ನು ಅತ್ಯಂತ ಸ್ವ-ನಾಶಕವಾದ ಪಾಪದ ವಿಧದಲ್ಲಿ ಬೀಳಲು ಮನವೊಲಿಸುತ್ತಾನೆ. ಅವರ ಪ್ರಾರ್ಥನೆ ಸಮಯ ಮುಕ್ತಾಯವಾಗುವಾಗ ಇಬ್ಬರೂ ಮತ್ತೆ **ತಿರುಗಿ ಕೂಡಿಕೊಳ್ಳಿರಿ**. ಹೀಗೆ ಮಾಡುವದರಲ್ಲಿ ವಿಫಲರಾದಲ್ಲಿ ಅವರು ಶೋಧನೆಗಳಿಗೆ ಅನುಮತಿಸುತ್ತಾರೆ, **ಸೈತಾನನು ನಿಮಗೆ ದಮೆಯಿಲ್ಲದಿರುವದನ್ನು ನೋಡಿ** ನಿಮಗೆ ಶೋಧನೆಯನ್ನು ತರುತ್ತಾನೆ.

**ವಚನ 6.** ಪೌಲನು ವಿವರಿಸುತ್ತಾನೆ, **ಹೀಗೆ ಮಾಡಬಹುದೆಂದು ಹೇಳುವದು ಹಿತೋಪದೇಶವೇ ಹೊರತು ಆಜ್ಞೆಯಲ್ಲ.** “ಇದನ್ನು” (ಹೀಗೆ) ಎಂಬ ಪದವು ವಿವಾಹದ ಕುರಿತು ಪೌಲನ ಎಚ್ಚರಿಕೆಯನ್ನು ಸೂಚಿಸುತ್ತದೆ. ಈ ವಿಷಯದಲ್ಲಿ ಪೌಲನು ನೀಡುವ “ರಿಯಾಯತಿ” ಎಂದರೆ ಮದುವೆಯಾಗಬಹುದು ಅಥವಾ ಮದುವೆಯಾಗದೇ ಇರಬಹುದು, ಅವನ “ಸ್ವಂತ ಇಚ್ಛೆಯ ಮೇರೆಗೆ” (7:7ಬ). ಬಹಳ ಮಟ್ಟಿಗೆ “ಇದು” ಒಂದು ಸಮಯದಲ್ಲಿ ಕ್ರೈಸ್ತರು ತಮ್ಮನ್ನು ತಾವು ಪ್ರತ್ಯೇಕಿಸಿಕೊಳ್ಳುವದು ತಕ್ಷಣದಲ್ಲಿ ನಡೆಯುವ ಸಂಗತಿಯನ್ನು ಉಲ್ಲೇಖಿಸುತ್ತದೆ, ಇದರಿಂದಾಗಿ ಅವರು ತಮ್ಮನ್ನು ತಾವು ಪ್ರಾರ್ಥನೆಗಾಗಿ ಸಮರ್ಪಿಸಿಕೊಳ್ಳಬಹುದು. ಅಪೊಸ್ತಲನು ಈ ಅಭ್ಯಾಸವನ್ನು ಆಜ್ಞೆಯಾಗಿಯಾಗಿ ಆಗಲಿ ಅಥವಾ ಹೊಗಳುವದಕ್ಕಾಗಿ ಆಗಲಿ ಹೇಳುವದಿಲ್ಲ.

ಅಪೊಸ್ತಲನು ತನ್ನನ್ನು ತಾನು ಸ್ಪಷ್ಟಪಡಿಸುವದಕ್ಕೆ ಬಯಸುತ್ತಾನೆ. ವಿವಾಹದ ಸಂಗಾತಿಯೊಡನೆ ಲೈಂಗೀಕ ಸಂಬಂಧದಿಂದ ದೂರವಿರುವದು ಪರಿಶುದ್ಧತೆಯ ಸಂಕೇತವಲ್ಲ ಅಥವಾ ಅದು ದೇವರ ಮೆಚ್ಚಿಗೆಗೆ ಕಾರಣವಾಗುವದಿಲ್ಲ ಮತ್ತು ಒಬ್ಬನು ಹೊಗಳಿಕೊಳ್ಳುವದಕ್ಕೂ ಅಥವಾ ಬೇಡಿಕೆಗಳನ್ನು ಸಲ್ಲಿಸುವದಕ್ಕೂ ಪ್ರೇರೆಪಿಸುವದಿಲ್ಲ. ಪರಸ್ಪರ ಒಪ್ಪಿಗೆಯ ಮೇರೆಗೆ ಲೈಂಗೀಕ ಸಂಬಂಧಗಳಿಂದ ದೂರವಿರುವದು ಸಂಪೂರ್ಣವಾಗಿ ಖಾಸಗಿ ವಿಷಯವಾಗಿದೆ. ಪೌಲನು ಈ ಅಭ್ಯಾಸವನ್ನು “ಆಜ್ಞೆಯ ರೂಪದಲ್ಲಿ ಅಲ್ಲ ಒಂದು ರೀತಿಯ ರಿಯಾಯತಿಯಲ್ಲಿ” ಅನುಮತಿಸುತ್ತಾನೆ. ದೂರವಿರುವದರಿಂದ ಪ್ರಾರ್ಥನೆಯು ಪರಿಣಾಮಕಾರಿಯಾಗುತ್ತದೆ ಎಂಬುದು ನಿಜವಾದ ಕಾರಣವಲ್ಲ. ವಿವಾಹದ ಕುರಿತು ಪೌಲನ ಎಲ್ಲಾ ಮಾತುಗಳಲ್ಲಿ ಇದು ವಿಫುಲವಾಗಿ ಸ್ಪಷ್ಟವಾಗುತ್ತದೆ ಅದೇನಂದರೆ, ವಿವಾಹದ ಅನ್ಯೋನ್ಯ ಸಂಬಂಧವನ್ನು ಒಳಗೊಂಡು, ವಿವಾಹವು ಗೌರವಯುತವಾದ ಪರಿಶುದ್ಧ ವಿಧವಾದ ಜೀವನ ಶೈಲಿಯಾಗಿದೆ.

**ವಚನ 7.** ಪೌಲನು ಬರೆಯುವಾಗ, **ನಾನಿರುವಂತೆಯೇ ಎಲ್ಲಾ ಮನುಷ್ಯರು ಇರಬೇಕೆಂಬದು ನನ್ನ ಇಷ್ಟ** ಎಂದು ಹೇಳುತ್ತಾನೆ ಎಂದು ತಿಳಿದುಕೊಳ್ಳಬಹುದು. ಅವನು ವಿವಾಹ ಜೀವಿತವು ಪರಿಶುದ್ಧವಾದದ್ದು ಎಂದು ಸಮರ್ಥಿಸಿಕೊಂಡ ಮೇಲೂ ಸಹ ಇಂಥಹ

ಹೇಳಿಕೆಯನ್ನು ಏಕೆ ನೀಡುತ್ತಾನೆ. ಬಹುಶಃ ಅಪೊಸ್ತಲನು ಅನೇಕ ಜನರಿಗೆ ಲೈಂಗೀಕ ಶೋಧನೆಗಳು ಅಷ್ಟೊಂದು ಬಲವಾಗಿರಬಾರದು ಎಂದು ಅವನ ಇಚ್ಛೆಯಾಗಿರಬಹುದು. ಅವನು ಆ ಒತ್ತಡವನ್ನು ಕುಟುಂಬ ಜೀವಿತಕ್ಕೆ ಹಾನಿಕಾರಕ ಅದು ವಿವಾಹ ಜೀವಿತದ ಪ್ರಾಮಾಣಿಕತೆ ಮತ್ತು ಕ್ರಿಸ್ತನಲ್ಲಿ ನಂಬಿಗಸ್ತರಾಗಿರುವದಕ್ಕೆ ಹೊಂದಾಣಿಕೆಯಲ್ಲಿ ಇರುವದನ್ನು ಕಠಿಣವಾಗಿಸಬಹುದು. ಅಪೊಸ್ತಲನು ಲೈಂಗಿಕತೆಯಿಂದ ದೂರವಿರುವ ಸಾಮರ್ಥ್ಯದ ಕೊರತೆಯಲ್ಲಿರುವವರ ಮೇಲೆ ಯಾವುದೇ ವಿಧವಾದ ಆತ್ಮೀಕತೆಯ ನೆರಳನ್ನು ಚೆಲ್ಲುವದಿಲ್ಲ. ಯಾಕಂದರೆ ಅವನು ಹೇಳುತ್ತಾನೆ. **ಆದರೆ ಒಬ್ಬನು ಒಂದು ವಿಧವಾಗಿ ಮತ್ತೊಬ್ಬನು ಇನ್ನೊಂದು ವಿಧವಾಗಿ ದೇವರಿಂದ ವರವನ್ನು ಹೊಂದಿಕೊಂಡಿದ್ದಾರೆ.** ದೂರವಿರುವದು ಅವನಿಗೆ ಅವನ ಜೀವಿತದಲ್ಲಿ ದೇವರ ಸೇವೆಯನ್ನು ಸಂಪೂರ್ಣವಾಗಿ ಮಾಡಲು ಅನುಮತಿಸುತ್ತಿರಬಹುದು, ಅವನಿಗೆ ರೂಢಿಯಾಗಿರುವದು ಇನ್ನೊಬ್ಬರಿಗೆ ಸಹ ಅನ್ವಯವಾಗ ಬೇಕೆಂದೇನಿಲ್ಲ. ಅದಕ್ಕಿಂತಲೂ ಹೆಚ್ಚಾಗಿ, ಕೊರಿಂಥದಲ್ಲಿರುವ ಕ್ರೈಸ್ತರ ಮೇಲಿನ ಒತ್ತಡ ಪೌಲನಿಗೆ ಇಂಥಹ ಪರಿಸ್ಥಿತಿಯಲ್ಲಿ ವಿವಾಹವಾಗದೇ ಇರುವದು ಉತ್ತಮವೆಂದು ತೋರಿರಬಹುದು (7:26 ನೋಡಿರಿ).

ಈ ವಿಷಯದಲ್ಲಿ ಪೌಲನ ಅಂತಿಮ ಬೋಧನೆಯಲ್ಲಿ, ಎರಡು ಅಂಶಗಳಲ್ಲಿ ಒತ್ತು ನೀಡುವದು ಅವಶ್ಯವಾಗಿದೆ. (1) ದೇವರು ಪುರುಷ ಮತ್ತು ಸ್ತ್ರೀಯರಲ್ಲಿ ಲೈಂಗೀಕ ಇಚ್ಛೆಯನ್ನು ಇಟ್ಟಿದ್ದಾನೆ. ಇದು ಜನಾಂಗಕ್ಕೆ ಜನ್ಮನೀಡುವ ಬಲವಾದ ಪ್ರಚೋದನೆಯಾಗಿದೆ ಅಲ್ಲದೇ ಇದು ದೇವರು ನಮಗೆ ನೀಡಿದ ಭಾವನಾತ್ಮಕ ಮತ್ತು ಮಾನಸಿಕ ಅವಶ್ಯಕತೆಗಳನ್ನು ತೃಪ್ತಿಪಡಿಸುವ ಸಾಧನವಾಗಿದೆ. (2) ಇನ್ನೊಬ್ಬ ವ್ಯಕ್ತಿಯನ್ನು ಲೈಂಗೀಕವಾಗಿ ದುರುಪಯೋಗಪಡಿಸಿಕೊಳ್ಳುವದು ಅಥವಾ ಲೈಂಗೀಕ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಲು ಇನ್ನೊಬ್ಬ ವ್ಯಕ್ತಿಯ ಅವಶ್ಯಕತೆಗಳನ್ನು ಸುಲಿಗೆ ಮಾಡುವದು ಕ್ರೈಸ್ತರಿಗೆ ಸ್ವೀಕೃತವಲ್ಲ. ನಮ್ಮ ದೇಹವು ದೇವರ ಗರ್ಭಗುಡಿಯಾಗಿದೆ (6:19; ನೋಡಿರಿ 3:16), ಅದನ್ನು ಪರಿಶುದ್ಧವಾಗಿಟ್ಟುಕೊಳ್ಳ ಬೇಕು (ನೋಡಿರಿ 1 ಥೆಸಲೋನಿಕ 4:3).

## "ಅವಿವಾಹಿತ," "ವಿಧವೆಯರಿಗೆ," ಮತ್ತು "ವಿವಾಹಿತ" ಮಹಿಳೆಯರಿಗೆ ಸಲಹೆಗಳು (7:8-11)

ಕೊರಿಂಥದಲ್ಲಿರುವ ವಿಚಿತ್ರವಾದ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಪೌಲನು ವಿವಾಹವಾಗದೇ ಇರುವದು ಉತ್ತಮ ಎಂಬ ಸಾಮಾನ್ಯ ನಿಯಮವನ್ನು ಮಂಡಿಸುತ್ತಾನೆ (ನೋಡಿರಿ 7:27). ಅದೇ ಸಮಯದಲ್ಲಿ, ಅವನು ಜನರಲ್ಲಿರುವ ಸಾಮಾಜಿಕ, ಆತ್ಮೀಕ ಮತ್ತು ಮಾನಸಿಕ ವ್ಯತ್ಯಾಸಗಳನ್ನು ಗುರುತಿಸುತ್ತಾನೆ (7:7). ಅವನು ವಿವಾಹವು ಪಾಪ ಎಂದು ಅವನು ಹೇಳುತ್ತಿಲ್ಲ; ವಿವಾಹಿಕ ಜೀವಿತದಲ್ಲಿ ಲೈಂಗೀಕ ಸಂಬಂಧವು ಪಾಪವಲ್ಲ. ಅಪೊಸ್ತಲನು, ಒಬ್ಬನು ಕ್ರೈಸ್ತನಾಗುವ ಸಮಯದಲ್ಲಿ ಯಾವ ಸಾಮಾಜಿಕ ಸ್ಥಾನವನ್ನು ಹೊಂದಿರುತ್ತಾನೋ ಅದನ್ನು ನಿರ್ವಹಿಸುವದು ಉತ್ತಮ, ಅದೇ ಸ್ಥಿತಿಯಲ್ಲಿ ಇರುವದು ಉತ್ತಮ ಎಂದು ಹೇಳುತ್ತಾನೆ. ಅವನು ಸಾಮಾನ್ಯ ನಿಯಮವನ್ನು ವಿಸ್ತರಿಸುತ್ತಾನೆ 7:17-24. ವಿವಾಹಿತರಾಗಿರಲಿ ಅವಿಹಾಹಿತರಾಗಿರಲಿ, ಅವನನ್ನು ಕರೆದಂಥ ಸಮಯದಲ್ಲಿದ್ದ ಸ್ಥಿತಿಯಲ್ಲಿಯೇ ಇರುವದು ಒಬ್ಬ ಕ್ರೈಸ್ತನಿಗೆ ಉತ್ತಮವಾಗಿದೆ (7:24). ಒಬ್ಬನ ಬಾಹ್ಯ

ಅಂತಸ್ತಿಗಿಂತ ದೇವರೊಂದಿಗೆ ಅವನ ಅಥವಾ ಅವಳ ಸಂಬಂಧ ಬಹಳ ಪ್ರಾಮುಖ್ಯವಾಗಿದೆ. ರಕ್ಷಣೆ, ನಿತ್ಯಜೀವದ ನಿರೀಕ್ಷೆ, ಲೋಕದ ವಿಷಯಗಳಲ್ಲಿ ಹೊಸ ದೃಷ್ಟಿಕೋನವನ್ನು ತರುತ್ತದೆ. ಆ ವಿಶಾಲವಾದ ರೂಪರೇಷೆಯಲ್ಲಿ, ಅಪೊಸ್ತಲನು ತನ್ನ ಗಮನವನ್ನು ವಿಶಿಷ್ಟವಾದ ಸೂಚನೆಗಳೆಡೆಗೆ ತಿರುಗಿಸುತ್ತಾನೆ ಅವು ಅವಿವಾಹಿತರಿಗೆ ಅನ್ವಯಿಸುತ್ತವೆ ಮತ್ತು ಇತರ ಸೂಚನೆಗಳು ವಿವಾಹಿತರಿಗೆ ಅನ್ವಯಿಸುತ್ತವೆ.

**[8]ಮದುವೆಯಿಲ್ಲದವರನ್ನೂ ವಿಧವೆಯರನ್ನೂ ಕುರಿತು ನಾನು ಹೇಳುವದೇನಂದರೆ. ನಾನಿರುವಂತೆಯೇ ಇರುವದು ಅವರಿಗೆ ಒಳ್ಳೇದು; [9]ಅವರು ದಮೆಯಿಲ್ಲದವರಾದರೆ ಮದುವೆಮಾಡಿಕೊಳ್ಳಲಿ; ಕಾಮತಾಪಪಡುವದಕ್ಕಿಂತ ಮದುವೆಮಾಡಿಕೊಳ್ಳುವದು ಉತ್ತಮವಷ್ಟೆ, [10]ಮದುವೆಮಾಡಿ ಕೊಂಡಿರುವವರಿಗೆ ನನ್ನ ಅಪ್ಪಣೆ ಮಾತ್ರವಲ್ಲದೆ ಕರ್ತನ ಅಪ್ಪಣೆಯು ಏನಂದರೆ ಹೆಂಡತಿಯು ಗಂಡನನ್ನು ಬಿಟ್ಟು ಅಗಲಬಾರದು; [11]ಒಂದುವೇಳೆ ಅಗಲಿದರೂ ಪುರುಷಸಹವಾಸವಿಲ್ಲದೆ ಇರಬೇಕು, ಇಲ್ಲವೆ ಗಂಡನ ಸಂಗಡ ಸಮಾಧಾನವಾಗಬೇಕು; ಮತ್ತು ಗಂಡನು ಹೆಂಡತಿಯನ್ನು ಬಿಡಬಾರದು.**

**ವಚನ 8.** ಪೌಲನು ವಚನ 7:25-31ರಲ್ಲಿ ವಿವಾಹವಾಗದೇ ಇರುವ ಕನ್ನಿಕೆಯರನ್ನು ಮತ್ತು 7:39, 40ರಲ್ಲಿ ವಿಧವೆಯರನ್ನು ಸಂಭೋಧಿಸುತ್ತಾನೆ. ಅವನು **ಮದುವೆಯಿಲ್ಲದವರನ್ನೂ** [τοῖς ἀγάμοις, *tois agamois*] ಮತ್ತು **ವಿಧವೆಯರ** ಕುರಿತು ಸೂಚನೆಗಳನ್ನು ಏಕೆ ಸೇರಿಸಿದ್ದಾನೆ? ಬಹುಶಃ ಅವನು ಕೊರಿಂಥದ ಕ್ರೈಸ್ತರು, ಇಂದಿನವರಂತೆ, ಅನೇಕ ಕಾರಣಗಳಿಂದಾಗಿ "ಅವಿವಾಹಿತರಾಗಿ" ಉಳಿದಿರಬಹುದು. ಕೆಲವು ಯೌವನಸ್ಥರು ವಿವಾಹವಾಗಿರಲಿಕ್ಕಿಲ್ಲ; ಮತ್ತು ಇತರರು ವಿಚ್ಛೇದಿತರಾಗಿರಬಹುದು ಅಥವಾ ಅವರ ಸಂಗಾತಿಗಳು ಸತ್ತು ಹೋಗಿರಬಹುದು. ಕೊರಿಂಥದಲ್ಲಿರುವ ಎಲ್ಲಾ ಅವಿವಾಹಿತರು ಕನ್ನಿಕೆಯರಲ್ಲ, ಆದರೆ ಅಪೊಸ್ತಲನು ವಿಶಿಷ್ಟವಾದ ಗುಂಪಿನ ಅವಿವಾಹಿತರನ್ನು, ಕನ್ನಿಕೆಯರಲ್ಲದವರನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರಬಹುದು ಎಂಬುದನ್ನು ನಂಬುವದಕ್ಕೆ ಕಾರಣಗಳಿರಬಹುದು. ಅದು ಕೇವಲ ಆಕಸ್ಮಿಕವಾಗಿ "ವಿಧವೆಯರಿಗೆ" ನೀಡುವ ಅದೇ ಎಚ್ಚರಿಕೆಯಿಂದ ಅವಿವಾಹಿತರನ್ನು ಸಂಬೋಧಿಸಿರಬಹುದು. ಬಹುಶಃ ಇರಲಿಕ್ಕಿಲ್ಲ ಯಾಕಂದರೆ ಪೌಲನು ನಂತರ ಕನ್ನಿಕೆಯರಿಗೆ ಮತ್ತು ವಿಧವೆಯರಿಗೆ ಪ್ರತ್ಯೇಕವಾದ ಸೂಚನೆಗಳನ್ನು ನೀಡುತ್ತಾನೆ, ಈ ಸನ್ನಿವೇಶದಲ್ಲಿ ಅವಿವಾಹಿತರು ಮತ್ತು ವಿಧವೆಯರು ಎಂದರೆ ನಿರ್ಧಿಷ್ಟವಾಗಿ ಪುರುಷರು ಮತ್ತು ಸ್ತ್ರೀಯರು ಯಾರ ಸಂಗಾತಿಗಳು ಮರಣಹೊಂದಿದ್ದಾರೋ ಅವರಾಗಿದ್ದಾರೆ. "ಅವಿವಾಹಿತರು" ಬಹಳ ಮಟ್ಟಿಗೆ ಹೆಂಡತಿಯನ್ನು ಕಳೆದುಕೊಂಡವರಾಗಿರಬಹುದು. ಒಂದುವೇಳೆ ಈ ವಿಷಯದಲ್ಲಿ ಪೌಲನು 7:7 ರಲ್ಲಿರುವ ವಿಚಾರವನ್ನು ಏಕೆ ಪುನರಾವರ್ತಿಸಿದ್ದಾನೆ ಎಂಬುದನ್ನು ತಿಳಿದುಕೊಳ್ಳುವದು ಸರಳ. ಅವಿವಾಹಿತರಿಗೆ ಮತ್ತು ವಿಧವೆಯರಿಗೆ ಅವನು ಬರೆಯುತ್ತಾನೆ . . . **ನಾನಿರುವಂತೆಯೇ ಇರುವದು ಅವರಿಗೆ ಒಳ್ಳೇದು**, ಅಂದರೆ ಒಂಟಿಯಾಗಿರುವದು.

**ವಚನ 9.** ವಿಧವೆಯರಿಗೆ ಮತ್ತು ವಿಧುರರಿಗೆ ಮದುವೆಯಾಗದೇ ಇರುವದು ಈ ಸಮಯದಲ್ಲಿ ಉತ್ತಮ, ಮತ್ತು ಅವರು ಮದುವೆಯಾಗುವದೂ ಸಹ ಸ್ವೀಕೃತವಾಗಿದೆ. ಅನೇಕ ವಿಷಯಗಳಲ್ಲಿ, **ದಮೆಯಿಲ್ಲದವರಾದರೆ** ಪಾಪದಲ್ಲಿ ಸ್ವ-ತೊಡಗಿಸಿಕೊಳ್ಳುವ

ಕೊಡುಗೆಯನ್ನು ನೀಡುತ್ತದೆ. "ದಮೆಯಿಲ್ಲದವರಾದರೆ" (ἐγκράτεια, *engkrateia*) ಇದು ಎರಡು ವರ್ತನೆಗಳಲ್ಲಿ ಎರಡಕ್ಕೂ ಗಲಾತ್ಯ 5:23ರಲ್ಲಿ ಬರುವ ಆತ್ಮನ ಫಲ ಮತ್ತು 2 ಪೇತ್ರ 1:6,[5] ರಲ್ಲಿ ಬರುವ ಕ್ರೈಸ್ತ ಗುಣಲಕ್ಷಣಗಳ ಪಟ್ಟಿಯಲ್ಲಿ ಸಾಮಾನ್ಯವಾದದ್ದಾಗಿದೆ. ಸ್ವ-ನಿಗ್ರಹದ ಕೊರತೆಯಿರುವ ವ್ಯಕ್ತಿಯು ಸಹಜವಾಗಿ ಲೈಂಗೀಕ ತೃಪ್ತಿಯನ್ನು ವಿವಾಹ ಸಂಬಂಧದಿಂದ ಹೊರಗೆ ಹುಡುಕುವ ಶೋಧನೆಗೆ ಒಳಗಾಗುತ್ತಾನೆ ಮತ್ತು ಅದು ಖಂಡಿತವಾಗಿ ಪಾಪವಾಗಿದೆ.

ಒಂದುವೇಳೆ, ಪೌಲನು ಸಂಗಾತಿಗಳು ಮರಣಹೊಂದಿರುವ ಪುರುಷ ಮತ್ತು ಸ್ತ್ರೀಯರನ್ನು ಸಂಬೋಧಿಸುತ್ತಿದ್ದಲ್ಲಿ, ಕೆಲವು ಪುರುಷರು ಸ್ವ-ನಿಗ್ರಹದ ಕೊರತೆಯನ್ನು ಹೊಂದಿ ವೇಶ್ಯೆಯರ ಸಂಗವನ್ನು ಮಾಡಿರುವ ಸಾಕ್ಷಿಗಳು ಇರಬಹುದು, ಬಯಕೆಯನ್ನು ತೃಪ್ತಿಗೊಳಿಸುವ ಅನಿರೀಕ್ಷಿತವಾದ ವಿಧಾನವಾಗಿರಬಹುದು (ನೋಡಿರಿ 6:15-20) ನಂತರ ಅವನು ಹೇಳುತ್ತಾನೆ, **ಕಾಮತಾಪಪಡುವದಕ್ಕಿಂತ ಮದುವೆಮಾಡಿಕೊಳ್ಳುವದು ಉತ್ತಮವಷ್ಟೆ** ಎಂದು ಹೇಳುತ್ತಾನೆ. NASB "ಕಾಮಾತುರದೊಂದಿಗೆ" ಎಂಬ ಪದವನ್ನು ಓರೆ ಅಕ್ಷರಗಳಲ್ಲಿ ಅನುವಾದಕನು ನಂಬಿರುವ ವಚನವನ್ನು ಉತ್ತಮವಾಗಿ ತಿಳಿದುಕೊಳ್ಳಲು ಉತ್ತಮವಾದ ವಿಧಾನ ಎಂದು ತೋರಿಸುವದಕ್ಕೆ ಸೇರಿಸುತ್ತದೆ, ಆದರೆ ಇಲ್ಲಿ ಇನ್ನೊಂದು ಸಾಧ್ಯತೆಯಿದೆ. ಬೆಂಕಿ ಮತ್ತು ಉರಿಯುವದು ಅನೇಕಾವರ್ತಿ ನ್ಯಾಯತೀರ್ಪಿನೊಂದಿಗೆ ವೇದವಾಕ್ಯದಲ್ಲಿ ಜೋಡಿಸಲಾಗಿದೆ (ಉದಾಹರಣೆಗಾಗಿ ನೋಡಿರಿ, ಮತ್ತಾಯ 3:11, 12). ಕಾಮಾತುರವು ವಿಧುರರನ್ನು ಕಬಳಿಸಬಹುದು ಇದರ ಪರಿಣಾಮವಾಗಿ ಅವರು ಶಾಶ್ವತವಾಗಿ ದೇವರಿಂದ ಪ್ರತ್ಯೇಕಿಸಲ್ಪಟ್ಟು ಬೆಂಕಿಯ ನಾಯತೀರ್ಪಿನ ಪರಿಣಾಮಕ್ಕೆ ಬಾಧ್ಯರಾಗಬಹುದು. ಪೌಲನು ಹೇಳುವದು ಯಾರೂ ಲೈಂಗೀಕ ಪಾಪಗಳನ್ನು ಮಾಡುತ್ತಾರೋ ಅವರು ಕಾಮಾತುರ ಪಡುವದಕ್ಕಿಂತ ಮದುವೆಯಾಗುವದು ಉತ್ತಮ ಎಂದು ಹೇಳುತ್ತಾನೆ. ಈ ಸನ್ನಿವೇಶದಲ್ಲಿ, ಅಪೊಸ್ತಲನ ಕಳಕಳಿ ಅಷ್ಟಾಗಿ ಬಯಕೆಯಿಂದ ಉರಿಯುತ್ತಿರುವ ಯೌವನಸ್ಥರ ಕುರಿತಾಗಿ ಅಲ್ಲ ಬದಲಾಗಿ ಸ್ವ-ನಿಗ್ರಹದ ಕೊರತೆಯಿರುವ ಪ್ರಾಯಸ್ಥರ ಕುರಿತಾಗಿದೆ. ಲೈಂಗೀಕ ಶೋಧನೆಗಳಿಗೆ ಯೌವನಸ್ಥರು ಹೊರತಾಗಿಲ್ಲ.

**ವಚನಗಳು 10, 11.** ಅವಿವಾಹಿತರಿಗೆ ವಿಧುರರಿಗೆ ಮತ್ತು ವಿಧವೆಯರಿಗೆ ನೇರವಾಗಿ ಅನ್ವಯಿಸುವ ಯಾವುದೇ ಹೇಳಿಕೆಯನ್ನು ಕರ್ತನು ನೀಡಿಲ್ಲ ಎನ್ನುವದನ್ನು ಪೌಲನು ತಿಳಿದಿದ್ದನು, ಆದರೆ ಕರ್ತನು ಗಂಡ ಮತ್ತು ಹೆಂಡತಿಯರಿಗೆ ವಿವಾಹದ ಶಾಶ್ವತತೆಯ ಕುರಿತು ವಿಶೇಷವಾದ ಸೂಚನೆಗಳನ್ನು ನೀಡಿದ್ದನು. ವಿವಾಹಿತರು ತಮ್ಮ ವಿವಾಹದ ಒಡಂಬಡಿಕೆಯನ್ನು ತೊರೆಯಲೇ ಬಾರದು. **ಹೆಂಡತಿಯು ಗಂಡನನ್ನು ಬಿಟ್ಟು ಅಗಲಬಾರದು ಮತ್ತು ಗಂಡನು ಹೆಂಡತಿಯನ್ನು ಬಿಡಬಾರದು.**

ಕ್ರೈಸ್ತರು **ಕರ್ತನಿಂದ** ಪೌಲನು ಏನನ್ನು ಸೂಚಿಸಿದ್ದಾನೋ ಮತ್ತು ಕರ್ತನ ಅಪೊಸ್ತಲನಾಗಿ ಅವನು ಏನನ್ನು ನೀಡುತ್ತಾನೋ ಇವುಗಳ ಮಧ್ಯದಲ್ಲಿ ಬೇಧತೋರಿಸುವದರಲ್ಲಿ ಎಚ್ಚರವಾಗಿರಬೇಕು. ಪವಿತ್ರಾತ್ಮನ ಮಾರ್ಗದರ್ಶನದಲ್ಲಿ, ಅಪೊಸ್ತಲನು ಮಾತುಗಳು ವಿಶ್ವಾಸಿಗಳಿಗೆ ಅಧಿಕಾರಯುತವಾಗಿವೆ (ನೋಡಿರಿ 7:40). ಈ ಬರವಣಿಗೆಯಲ್ಲಿ, ದೈವಿಕ ಪ್ರಕಟನೆಯ ಅನುಪಸ್ಥಿತಿಯನ್ನು ಸಭೆಯ ಅಧಿಕಾರದ ಕೊರತೆ ಎಂದು ಪರಿಗಣಿಸಬಾರದು.

ಅಪೊಸ್ತಲನು ಮುಂದೆ ಒಬ್ಬರೇ ಒಬ್ಬ ಸಂಗಾತಿಯನ್ನು ಹೊಂದಿರುವವರು ಕ್ರೈಸ್ತರು ಎಂಬುದನ್ನು ಹೇಳುತ್ತಾನೆ (7:12-16), ಅವನು ವಚನ 10 ಮತ್ತು 11ರಲ್ಲಿ ಸಂಬೋಧಿಸಿರುವದು ಕ್ರೈಸ್ತ ದಂಪತಿಗಳು ಎಂಬುದನ್ನು ಸೂಚಿಸುತ್ತದೆ. ವಿವಾಹದಲ್ಲಿ ಯಾವ ಸಂಗಾತಿಯಾಗಲಿ ತನ್ನ ಸಂಗಾತಿಯನ್ನು ತೊರೆಯಬಾರದು (7:11). ವಿಚ್ಛೇದನ ಆಯ್ಕೆಯಲ್ಲ. ಯಾರಾದರೂ ವಿಚ್ಛೇದನವು ಸಮ್ಮತವಾಗಿದೆ ಯಾಕಂದರೆ ವಿವಾಹವಾಗದೇ ಇರುವದು ಬಹಳ ಪರಿಶುದ್ಧವಾದದ್ದು ಎಂದು ಹೇಳಿದ್ದಲ್ಲಿ ಅದು ತಪ್ಪು. ವಿವಾಹ ಮತ್ತು ವಿವಾಹಿತರ ಹಾಸಿಗೆ ಪರಿಶುದ್ಧವಾದದ್ದು (ನೋಡಿರಿ ಇಬ್ರಿಯ 13:4).

ವಿವಾಹ ಸಂಬಂಧವನ್ನು ಕಾಯ್ದುಕೊಳ್ಳಬೇಕು ಎಂದು ಸಕಾರಾತ್ಮಕವಾಗಿ ವರ್ಗೀಕರಿಸುವುದಾದರೆ, ಅಪೊಸ್ತಲನು ವಿವಾಹವಾದಾಗ ಜನರು ಕೆಲವೊಮ್ಮೆ ತಪ್ಪುಗಳನ್ನು ಮಾಡುವದು ಸಹಜ ಎಂದು ಒಪ್ಪಿಕೊಳ್ಳುತ್ತಾನೆ. ಅಸಾಮಾನ್ಯವಾದ ಪರಿಸ್ಥಿತಿಯಲ್ಲಿ, ಅಪೊಸ್ತಲನು, ಬೇರ್ಪಡುವದು ಉತ್ತಮ ಎಂಬುದನ್ನು ಸಮ್ಮತಿಸುತ್ತಾನೆ ಆದರೆ ಆತನು ಮರುವಿವಾಹವು ಆಯ್ಕೆಯಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾನೆ: . . . **ಒಂದುವೇಳೆ ಅಗಲಿದರೂ ಪುರುಷಸಹವಾಸವಿಲ್ಲದೆ ಇರಬೇಕು, ಇಲ್ಲವೆ ಗಂಡನ ಸಂಗಡ ಸಮಾಧಾನವಾಗಬೇಕು**. ಗಂಡನನ್ನು ತೊರೆದುಬಿಟ್ಟ ಹೆಂಡತಿ ಅವಿವಾಹಿತಳಾಗಿರಬೇಕು ಇಲ್ಲವೇ ಗಂಡನೊಂದಿಗೆ ಸಂಧಾನ ಮಾಡಿಕೊಳ್ಳಬೇಕು. ಅಪೊಸ್ತಲನು ಈ ನಿಯಮಕ್ಕೆ ಯಾವುದೇ ರಿಯಾಯತಿಯನ್ನು ನೀಡುವದಿಲ್ಲ. ಹೆಂಡತಿಗೆ ಅನ್ವಯವಾಗುವದೇ ಗಂಡನಿಗೂ ಅನ್ವಯವಾಗುತ್ತದೆ. ಅವನು ಇಬ್ಬರನ್ನೂ ಸಮಾನ ನಿಯಮದಿಂದ ಸಂಬೋಧಿಸುತ್ತಾನೆ.

## ವಿಶ್ವಾಸಿಗಳು ಅವಿಶ್ವಾಸಿಗಳನ್ನು ವಿವಾಹವಾಗುವದರ ಕುರಿತಾಗಿ ಸಲಹೆಗಳು (7:12-16)

ಗ್ರೀಕ್ ಲೋಕದ ಪುರುಷ-ಪ್ರಧಾನ ಸಮಾಜದಲ್ಲಿ, ಕುಟುಂಬದ ತಂದೆಯ ಧರ್ಮವು ಮನೆಯಲ್ಲಿ ಎಲ್ಲರ, ಹೆಂಡತಿಯ, ಮಕ್ಕಳ ಮತ್ತು ಗುಲಾಮರ ಧರ್ಮವಾಗಿರುತ್ತದೆ. ಕೋರ್ನೆಲ್ಯ (ನೋಡಿರಿ ಅ.ಕೃ. 10:24, 48) ಮತ್ತು ಫಿಲಿಪ್ಪಿಯ ಸೆರೆಮನೆಯ ಅಧಿಕಾರಿ (ಅ.ಕೃ. 16:33). ತಮ್ಮ ಕುಟುಂಬದವರೊಂದಿಗೆ ಪರಿವರ್ತನೆ ಹೊಂದಿದರು. ಸಾಮಾನ್ಯ ಗ್ರೀಕ್ ಧರ್ಮದ ಪರಧಿಯಲ್ಲಿ, ವ್ಯಕ್ತಿಯಾಗಲಿ ಒಂದು ಕುಟುಂಬವಾಗಲಿ ಹೊಸ ದೇವರನ್ನು ಅಳವಡಿಸಿಕೊಳ್ಳುದು ಸಾಮಾನ್ಯ ವಿಷಯವಾಗಿತ್ತು. ಪೌಲನು ಈ ಪತ್ರದಲ್ಲಿ ಮುಂದೆ ಹೇಳಿದಂತೆ ". . . ಅಲ್ಲಿ ಅನೇಕ ದೇವರುಗಳು ಮತ್ತು ಕರ್ತರುಗಳು ಇದ್ದರು" (8:5). ಇಂಥಹ ಹಿನ್ನೆಲೆಯಲ್ಲಿ, ಗಂಡಂದಿರು ಮತ್ತು ಹೆಂಡತಿಯರು ಎಲ್ಲಿಯವರೆಗೆ ಎಲ್ಲರೂ ಹೆಚ್ಚಿನ ವಾದವಿವಾದವಿಲ್ಲದೇ ಒಂದೇ ವಿಧದ ಧರ್ಮವನ್ನು ಪಾಲಿಸುತ್ತಾರೋ ಅಲ್ಲಿಯವರೆಗೆ ಬಹುಶಃ ಬೇರೆಬೇರೆ ದೇವರುಗಳಿಗೆ ಆದ್ಯತೆಯನ್ನು ನೀಡುತ್ತಿರಬಹುದು. ಗ್ರೀಕೋ-ರೋಮನ್ ಧರ್ಮಗಳಲ್ಲಿ, ಯಾವುದೇ ದೇವರಿಗೆ ಇತರ ದೇವರುಗಳನ್ನು ತೆಗೆದುಬಿಡುವದು ಅವಶ್ಯವಿರಲಿಲ್ಲ.

ಕ್ರೈಸ್ತತ್ವವು ಪರದೆಯ ಮೇಲೆ ಬರುವಾಗ, ಅದು ತೀವ್ರವಾದ ವಿರೋಧವನ್ನು ಹೊಂದಿದ್ದಕ್ಕೆ ಕಾರಣವೆಂದರೆ ಅದರಲ್ಲಿ ಯೇಸು ಕ್ರಿಸ್ತನ ತಂದೆಯನ್ನು ಹೊರತುಪಡಿಸಿ ಬೇರೆ ದೇವರುಗಳಿಲ್ಲದಿರುವದೇ. ಒಬ್ಬನು ಯೇಸು ಕ್ರಿಸ್ತನನ್ನು ಆರಾಧಿಸಿದ್ದಲ್ಲಿ, ಅವನು ಇತರ

ದೇವರುಗಳನ್ನು ತೊರೆದುಬಿಡಬೇಕು. ಕ್ರೈಸ್ತರು ಅವರು ಮೊದಲು ಆರಾಧಿಸುತ್ತಿದ್ದ ಪ್ರಾಮುಖ್ಯವಾದ ಸ್ಥಳಗಳಲ್ಲಿ ಇದ್ದ ದೇವರುಗಳನ್ನು ತೊರೆದು ಬಿಟ್ಟಿದ್ದರು. ಅವರು ಸಮುದಾಯ ಭಾಗವಹಿಸುವಿಕೆಯನ್ನು ಆಮಂತ್ರಿಸುವ ಹಬ್ಬಗಳಿಗೆ ಸಮರ್ಪಿಸಿಕೊಳ್ಳುವದನ್ನು ತೊರೆದುಬಿಟ್ಟಿದ್ದರು. ಕ್ರೈಸ್ತರಿಗೆ ವಿಗ್ರಹಾರಾಧಕರ ದೇವಾಲಯದಲ್ಲಿರುವ ದೇವರುಗಳು ಜನಪ್ರಿಯ ಕಲ್ಪನೆಯ ಅವಮಾನಕರವಾದ ಸೃಷ್ಟಿಗಳಾಗಿದ್ದವು. ಈ ಎಲ್ಲಾ ಕಾರಣಗಳಿಂದಾಗಿ, ಒಬ್ಬ ಸಂಗಾತಿಯು ಮಾತ್ರ ಕ್ರೈಸ್ತರಾಗಿದ್ದಲ್ಲಿ ಗಂಡ ಹೆಂಡತಿಯರ ಮಧ್ಯದಲ್ಲಿ ಇರುವ ಗಲಭೆಗೆ ಕಾರಣವು ಒಂದೇ ಧರ್ಮವನ್ನು ಹಂಚಿಕೊಂಡಿರುವ ಸಂಗಾತಿಗಳಿಗಿಂತ ಹೆಚ್ಚಾಗಿರುತ್ತದೆ. ಕ್ರಿಸ್ತನ ಮೂಲಕ ದೇವರ ಬಳಿಗೆ ತಿರುಗಿಕೊಳ್ಳುವದು ಇನ್ನೊಂದು ದೇವರನ್ನು ಸೇರಿಸಿಕೊಳ್ಳುವ ಅಯ್ಕೆಯಲ್ಲ.

ಅವಿವಾಹಿತರು ಖಂಡಿತವಾಗಿ ಪೌಲನ ಸಲಹೆಗಳನ್ನು "ಕರ್ತನಲ್ಲಿ ಮಾತ್ರ" ವಿವಾಹ ಎಂಬುದನ್ನು ಅನುಸರಿಸಬೇಕು (7:39); ಆದರೆ ಕೆಲವೊಮ್ಮೆ ವಿಗ್ರಹಾರಾಧಕನಾದ ವಿವಾಹಿತನು ಕ್ರೈಸ್ತನಾಗುತ್ತಾನೆ ಇನ್ನೊಬನು ಕ್ರೈಸ್ತರಾಗುವದನ್ನು ನಿರಾಕರಿಸುತ್ತಾವೆ. ಇಲ್ಲಿ ಪ್ರಶ್ನೆ ಉದ್ಭವಿಸುತ್ತದೆ. ಒಬ್ಬ ವ್ಯಕ್ತಿಯು ಕ್ರೈಸ್ತನಾಗಿರುತ್ತಾನೆ ಆದರೆ ಗಂಡನಾಗಲಿ ಅಥವಾ ಹೆಂಡತಿಯಾಗಲಿ ವಿಗ್ರಹಾರಾಧಕರಾಗಿದ್ದಲ್ಲಿ, ಗಲಭೆಯಿಂದ ದೂರವಿರಲು ಕ್ರೈಸ್ತರಾದವರಿಗೆ ವಿಗ್ರಹಾರಾಧಕರಾಗಿರುವ ಸಂಗಾತಿಯನ್ನು ಬಿಟ್ಟುಬಿಡುವದು ಸಮ್ಮತವೋ? ವಿಗ್ರಹಾರಾಧಕರೊಂದಿಗೆ ಅನ್ಯೋನ್ಯವಾದ ಸಂಬಂಧದಲ್ಲಿರುವದು ಕ್ರೈಸ್ತರನ್ನು ಅಪರಿಶುದ್ಧರನ್ನಾಗಿ ಮಾಡುತ್ತದೋ? ಈ ಪ್ರಶ್ನೆಗಳು ಈ ಪತ್ರದಲ್ಲಿ ಮುಕ್ತವಾಗಿ ಹೇಳಲ್ಪಟ್ಟಿದ್ದಾವೋ ಇಲ್ಲವೋ ಇದು ಪೌಲನಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವದಿಲ್ಲ. ಕೊರಿಂಥದಲ್ಲಿರುವ ಕ್ರೈಸ್ತರು ಜೀವಿಸುತ್ತಿರುವ ಸಾಮಾಜಿಕ ಸನ್ನಿವೇಶವನ್ನು ಪೌಲನು ನಿರ್ವಹಿಸುವದು ಅವರಿಗೆ ಅವಶ್ಯವಾಗಿತ್ತು.

**[12]ಮಿಕ್ಕಾದವರ ವಿಷಯದಲ್ಲಿ ಕರ್ತನ ಮಾತು ಇಲ್ಲವಾದರೂ ನನ್ನ ಅಭಿಪ್ರಾಯವೇನಂದರೆ – ಒಬ್ಬ ಸಹೋದರನಿಗೆ ಕ್ರಿಸ್ತ ನಂಬಿಕೆಯಿಲ್ಲದ ಹೆಂಡತಿಯಿರಲಾಗಿ ಆಕೆ ಅವನೊಂದಿಗೆ ಒಗೆತನಮಾಡುವದಕ್ಕೆ ಸಮ್ಮತಿಸಿದರೆ ಅವನು ಆಕೆಯನ್ನು ಬಿಡಬಾರದು. [13]ಒಬ್ಬ ಸ್ತ್ರೀಗೆ ಕ್ರಿಸ್ತ ನಂಬಿಕೆಯಿಲ್ಲದ ಗಂಡನಿರಲಾಗಿ ಅವನು ಆಕೆಯೊಂದಿಗೆ ಒಗೆತನ ಮಾಡುವದಕ್ಕೆ ಸಮ್ಮತಿಸಿದರೆ ಆಕೆಯು ಅವನನ್ನು ಬಿಡಬಾರದು. [14]ಯಾಕಂದರೆ ಕ್ರಿಸ್ತನಂಬಿಕೆಯಿಲ್ಲದ ಗಂಡನು ತನ್ನ ಹೆಂಡತಿಯಲ್ಲಿ ದೇವಜನಕ್ಕೆ ಸಂಬಂಧಪಟ್ಟವನಾದನು; ಮತ್ತು ಕ್ರಿಸ್ತನಂಬಿಕೆಯಿಲ್ಲದ ಹೆಂಡತಿಯು ನಮ್ಮ ಸಹೋದರನಾದ ತನ್ನ ಗಂಡನಲ್ಲಿ ದೇವಜನಕ್ಕೆ ಸಂಬಂಧಪಟ್ಟವಳಾದಳು. ಹಾಗಲ್ಲದಿದ್ದರೆ ನಿಮ್ಮ ಮಕ್ಕಳು ಅಪವಿತ್ರರಾಗುತ್ತಿದ್ದರು; ಈಗಲಾದರೋ ಅವರು ದೇವಜನರಲ್ಲಿ ಸೇರಿದವರೇ ಆಗಿದ್ದಾರೆ. [15]ಆದರೆ ಕ್ರಿಸ್ತನಂಬಿಕೆಯಿಲ್ಲದವನು ಅಗಲಬೇಕೆಂದಿದ್ದರೆ ಅಗಲಿಹೋಗಲಿ; ಇಂಥಹ ಸಂದರ್ಭಗಳಲ್ಲಿ ಕ್ರೈಸ್ತ ಸಹೋದರನಾಗಲಿ ಸಹೋದರಿಯಾಗಲಿ ಬದ್ಧರಲ್ಲ. ಸಮಾಧಾನದಲ್ಲಿರಬೇಕೆಂದು ದೇವರು ನಮ್ಮನ್ನು ಕರೆದಿದ್ದಾನೆ. [16]ಎಲೌ ಸ್ತ್ರೀಯೇ ನಿನ್ನ ಗಂಡನನ್ನು ರಕ್ಷಿಸುವಿಯೋ ಏನೋ ನಿನಗೇನು ಗೊತ್ತು? ಎಲೈ ಪುರುಷನೇ, ನಿನ್ನ ಹೆಂಡತಿಯನ್ನು ರಕ್ಷಿಸುವಿಯೋ ಏನೋ ನಿನಗೇನು ಗೊತ್ತು?**

**ವಚನ 12.** ಇದಕ್ಕೆ ವ್ಯತ್ಯಾಸವಾಗಿ ವಿವಾಹದ ಇಬ್ಬರೂ ಸಂಗಾತಿಗಳು ಕ್ರೈಸ್ತರಾಗಿದ್ದಲ್ಲಿ ವಿವಾಹದಲ್ಲಿ ಕ್ರೈಸ್ತರ ಜವಾಬ್ದಾರಿಯನ್ನು ಅವಿಶ್ವಾಸಿಗಳಿಗೆ ಕ್ರಿಸ್ತನ ಬೋಧನೆಯಲ್ಲಿ ನೇರವಾಗಿ ಸಂಬೋಧಿಸಲಾಗಿಲ್ಲ. ಹಾಗೂ, ಆತ್ಮನ ಮಾರ್ಗದರ್ಶನದ ಮೇಲೆ ಆತುಕೊಂಡು (2:13), ಪೌಲನು ಕೈಯಲ್ಲಿರುವ ಸನ್ನಿವೇಶಕ್ಕೆ ಕರ್ತನ ಸಂದೇಶವನ್ನು ವಿಸ್ತರಿಸುವಲ್ಲಿ ಹಿಂಜರಿಯಲಿಲ್ಲ. ಅಪೊಸ್ತಲನ ಮಾತುಗಳ ಹಿಂದೆ ದೇವರ ಸ್ವಂತ ಪ್ರಕಟನೆ ಇರುತ್ತದೆ ಖಂಡಿತವಾಗಿಯೂ ಅದು ಯೇಸುವಿನ ಮಾತಿನ ಹಿಂದೆ ಇದ್ದಂತೆ.

ಅಪೊಸ್ತಲನು ಕ್ರೈಸ್ತರ ಮಧ್ಯದಲ್ಲಿಯ ವಿವಾಹ ಸಂಬಂಧವನ್ನು ಈಗಾಗಲೇ ಚರ್ಚಿಸಿದ್ದಾನೆ (7:10, 11). ಇದರೊಟ್ಟಿಗೆ, ಅವನು "ಅವಿವಾಹಿತರಿಗೆ ಮತ್ತು ವಿಧವೆಯರಿಗೆ" ಸಲಹೆಗಳನ್ನು ನೀಡುತ್ತಾನೆ (7:8, 9). **ಮಿಕ್ಕಾದವರ ವಿಷಯದಲ್ಲಿ** ಅವಿಶ್ವಾಸಿಗಳನ್ನು ವಿವಾಹವಾದವರಿಗಾಗಿ. ಬಹಳ ಮಟ್ಟಿಗೆ, ಅಪೊಸ್ತಲನ ಸಲಹೆಗಳು ಸಹ ಯೆಹೂದ್ಯರನ್ನು ವಿವಾಹವಾದ ಕ್ರೈಸ್ತರಿಗೆ ಅನ್ವಯವಾಗುತ್ತವೆ.

ಅವಿಶ್ವಾಸಿಗಳನ್ನು ಮದುವೆಯಾದ ವಿಶ್ವಾಸಿಗಳಿಗೆ ಅಪೊಸ್ತಲನ ಮೊದಲ ಮಾತುಗಳು ಅವನು 7:10, 11ರಲ್ಲಿ ಪ್ರಕಟಿಸಿದನ್ನು ಬಲಪಡಿಸುತ್ತವೆ: ಹೆಂಡತಿಯು ತನ್ನ ಗಂಡನನ್ನು ಬಿಟ್ಟುಬಿಡಬಾರದು ("ದೂರ ಕಳುಹಿಸಬಾರದು [ಅವನನ್ನು]" 7:13), ಮತ್ತು ಗಂಡನು ತನ್ನ ಹೆಂಡತಿಗೆ ವಿಚ್ಛೇದನವನ್ನು ನೀಡಬಾರದು. ಹಾಗೂ, ಪೌಲನ ವಿವಾಹದ ಸಬಂಧವನ್ನು ನಿರ್ವಹಿಸಲು ಇಬ್ಬರ ಸಮ್ಮತಿ ಅವಶ್ಯವಾಗಿದೆ ಎಂಬುದನ್ನು ತಿಳಿದಿದ್ದನು. ಪೌಲನ ಸಮಯದಲ್ಲಿ, ವಿವಾಹ ಮತ್ತು ವಿಚ್ಛೇದನದ ಈ ಸ್ಥಿತಿಯು ಇಂದು ಕೆಲವು ಸರಕಾರದಲ್ಲಿ ಇರುವದಕ್ಕಿಂತ ಕಡಿಮೆ ಪ್ರಮಾಣದಲ್ಲಿತ್ತು. David E. Garland ಅವರು ಹೀಗೆ ವೀಕ್ಷಿಸುತ್ತಾರೆ, "ವಿವಾಹವಾಗಲು ನೀಡಿರುವ ಸಮ್ಮತಿಯನ್ನು ಪರಸ್ಪರ ಒಪ್ಪಿಗೆಯ ಮೇರೆಗೆ ತ್ಯಜಿಸುವಾಗ ಅಥವಾ ಒಬ್ಬನು ವಯಕ್ತಿಕವಾಗಿ ವಿವಾಹವನ್ನು ತಿರಸ್ಕರಿಸುವಾಗ ವಿವಾಹ ಸಂಬಂಧವು ಮುಕ್ತಾಯವಾಗುತ್ತದೆ. ಸಂಬಂಧವನ್ನು ಕೊನೆಗೊಳಿಸಿ ಮನೆಯನ್ನು ಬಿಟ್ಟುಹೋಗುವದಕ್ಕೆ ಸಂಗಾತಿಗೆ ಇಷ್ಟು ಸಾಕಾಗುತ್ತದೆ."[6]

**ವಚನ 13.** ವಿಶ್ವಾಸಿಯಾದ ಗಂಡನು ಅವಿಶ್ವಾಸಿಯಾದ ಹೆಂಡತಿಯನ್ನು ಮದುವೆಯಾಗಿರುವವನಿಗೆ ಪೌಲನು ಈಗತಾನೇ ನೀಡಿದ ಸಲಹೆ ವಿರುಧ ಸನ್ನಿವೇಶದಲ್ಲಿ ಸಹ ಸಮಾನವಾಗಿ ಅನ್ವಯವಾಗುತ್ತದೆ. ವಿಶ್ವಾಸಿಯಾದ ಗಂಡನು ಅಥವಾ ಹೆಂಡತಿಯು ಸಂಗಾತಿಯು ಅವಿಶ್ವಾಸಿಯಾಗಿದ್ದಾಗಲೂ ಮುಂದುವರೆಸಬೇಕು. ಪೌಲನು ಇದನ್ನು ನಕಾರಾತ್ಮಕವಾಗಿ ಹೇಳುತ್ತಾನೆ, ಗಂಡನು ಅವಿಶ್ವಾಸಿಯಾದ ಹೆಂಡತಿಗೆ "ವಿಛೇದನವನ್ನು ನೀಡಬಾರದು" (μὴ ἀφιέτω, *mē aphietō*; 7:12) ಮತ್ತು **ಹೆಂಡತಿಯು ಅವಿಶ್ವಾಸಿಯಾದ ತನ್ನ ಗಂಡನನ್ನು ಬಿಟ್ಟುಬಿಡಬಾರದು** (μὴ ἀφιέτω, *mē aphietō*). ಎರಡೂ ವಾಕ್ಯಾಂಗಗಳು ಒಂದೇ ರೀತಿಯ ಗ್ರೀಕ್ ಪದಗಳನ್ನು ಅನುವಾದಿಸುತ್ತವೆ.

**ವಚನ 14.** ಪೌಲನು ಅವಿಶ್ವಾಸಿಯಾದ ವಿವಾಹದ ಸಂಗಾತಿಯು ವಿಶ್ವಾಸಿಯಿಂದ ಶುದ್ಧೀಕರಿಸಲ್ಪಡುತ್ತಾಳೆ. ಇದು ಬಹುಶಃ ಉಪವಾಕ್ಯದ ವಿಮರ್ಶೆಯಾಗಿದೆ, ಅದರೆ ಸನ್ನಿವೇಶವು ಇದು ಕಾಲ್ಪನಿಕ ಸನ್ನಿವೇಶವಲ್ಲ ಎಂಬುದನ್ನು ತೋರಿಸುತ್ತದೆ. ಅಪೊಸ್ತಲನು ಕೊರಿಂಥದವರಿಗೆ ಕ್ರೈಸ್ತರ ದೇಹವು "ಪರಿಶುದ್ಧಾತ್ಮನ ಗರ್ಭಗುಡಿಯಾಗಿದೆ" ಎಂದು ಹೇಳಿದ್ದಾನೆ (6:19), ಅವನು ಸೂಳೆಯರ ಸಹವಾಸವನ್ನು ಮಾಡುವದನ್ನು ನಿಷೇಧಿಸಿದ್ದಾನೆ,

ಯಾಕಂದರೆ ಇತರ ಸಂಗತಿಗಳೊಟ್ಟಿಗೆ, ಸಹಭಾಗಿಯಾದವನು "ಅವಳೊಟ್ಟಿಗೆ ಒಂದೇ ದೇಹವಾಗಿದ್ದಾನೆ" (6:16). ಒಬ್ಬನು ಅವಿಶ್ವಾಸಿಯಾದ ಸಂಗಾತಿಯೊಟ್ಟಿಗೆ ಲೈಂಗೀಕವಾಗಿ ಅನ್ಯೋನ್ಯತೆಯಲ್ಲಿ ಇರುವಾಗ, ಅವನು ಅಥವಾ ಅವಳು ಅವರೊಂದಿಗೆ ಒಂದೇ ಶರೀರವಾಗಿರುವದರಿಂದ ದೇವರನ್ನು ಅಸಮಾಧಾನ ಪಡಿಸುತ್ತಾರೋ? ವಿಶ್ವಾಸಿಯಾದ ಸಂಗಾತಿಗೆ ಅವನು ವಿಚ್ಛೇಧನ ನೀಡುವದು ಉತ್ತಮವಲ್ಲವೋ ಅಥವಾ ಕನಿಷ್ಠಪಕ್ಷ ಲೈಂಗೀಕ ಸಂಬಂಧವನ್ನು ತೊರೆದು ಬಿಡುವದು ಉತ್ತಮವಲ್ಲವೋ? ಪೌಲನು "ಇಲ್ಲ" ಎಂದು ಉತ್ತರಿಸುತ್ತಾನೆ, ವಿವಾಹವನ್ನು ನಿರ್ವಹಿಸುವದು ಪ್ರಾಮುಖ್ಯವಾಗಿದೆ. ಅಪೊಸ್ತಲನು ಉದ್ದೇಶಪೂರ್ವಕವಾಗಿ ನಿರ್ದೇಶನವನ್ನು ಸೇರಿಸಿದ್ದಾನೆ "ಒಬ್ಬ ಮನುಷ್ಯನು . . . ತನ್ನ ಹೆಂಡತಿಯನ್ನು ಸೇರಿಕೊಳ್ಳುತ್ತಾನೆ:" (ಅದಿಕಾಂಡ 2:24), ಯೇಸುವಿನ ಹೇಳಿಕೆಯೊಂದಿಗೆ, "ಆದುದರಿಂದ ದೇವರು ಕೂಡಿಸಿದ್ದನ್ನು ಮನುಷ್ಯರು ಅಗಲಿಸಬಾರದು" (ಮತ್ತಾಯ 19:6). ಇಲ್ಲಿಯವರೆಗೆ ಇದು ವಿಶ್ವಾಸಿಯು ಮಾಡಿದ ಆಯ್ಕೆಯಾಗಿದೆ, ವಿವಾಹದ ಬಂಧವು ಸಂಗಾತಿಯು ಕ್ರೈಸ್ತರಾಗಿರಲಿ ಇಲ್ಲದಿರಲಿ ಮುಂದುವರೆಯ ಬೇಕು.

ಅಪೊಸ್ತಲನು ವಿಶ್ವಾಸಿಯ ಮತ್ತು ಅವಿಶ್ವಾಸಿಯಾದ ಸಂಗಾತಿಯ ಮಧ್ಯದಲ್ಲಿ ಸಂಬಂಧವು ಕ್ರೈಸ್ತ ಸಂಗಾತಿಯು ದೇವಜನಕ್ಕೆ ಸಂಬಂಧಪಟ್ಟವನಾದರಿಂದ "ಶುದ್ಧೀಕರಿಸಲ್ಪಟ್ಟದ್ದು" (ἡγίασται, *hēgiastai*) ಎಂದು ದೃಢಪಡಿಸುತ್ತಾನೆ. ಒಬ್ಬ ವ್ಯಕ್ತಿ, ವಸ್ತು ಅಥವಾ ವರ್ತನೆ ಯಾವಾಗ ದೇವರಿಂದ ಸ್ವೀಕರಿಸಲ್ಪಡುತ್ತದೋ ಮತ್ತು ಆತನ ಸೇವೆಗೆ ಯೋಗ್ಯವಾಗುತ್ತದೋ ಆಗ "ಶುದ್ಧೀಕರಿಸಲ್ಪಟ್ಟದ್ದು" (ἁγιάζω, *hagiazō*) "ಪರಿಶುದ್ಧವಾದದ್ದು" ಎಂದು ಹೇಳಬಹುದು, ದೇವರು ಆಶೀರ್ವದಿಸುತ್ತಾನೆ ಮತ್ತು ಕ್ರೈಸ್ತ ಮತ್ತು ವಿಶ್ವಾಸಿಯ ಮಧ್ಯದಲ್ಲಿರುವ ಸಂಬಂಧವನ್ನು ವಿಶ್ವಾಸಿಯಾದ ಸಂಗಾತಿಯ ನಿಮಿತ್ತವಾಗಿ ದೇವರು ಸಮ್ಮತಿಸುತ್ತಾನೆ.

ವಿವಾಹದ ಸಂಗಾತಿಗಳಲ್ಲಿ ಇಬ್ಬರೂ ಕ್ರೈಸ್ತರಾಗಿರದಿದ್ದಲ್ಲಿ ಏನಾಗುತ್ತದೆ? ಇಬ್ಬರು ಅವಿಶ್ವಾಸಿಗಳ ಮಧ್ಯದಲ್ಲಿರುವ ಲೈಂಗೀಕ ಸಂಬಂಧವು ದೇವರ ಸಮ್ಮತಿಯನ್ನು ಪಡೆಯುತ್ತದೋ? ಪೌಲನಿಗೆ ಈ ಪ್ರಶ್ನೆಯು, ಬಹುಶಃ ಕೇವಲ ಶೈಕ್ಷಣಿಕ ಆಸಕ್ತಿಯನ್ನು ಹೊಂದಿದ್ದಾಗಿರಬಹುದು. ಕ್ರಿಸ್ತನಿಲ್ಲದೇ, ವಿವಾಹಿತರು ಮತ್ತು ಅವಿವಾಹಿತರು ಪಾಪದಲ್ಲಿ ನಾಶವಾಗುತ್ತಾರೆ. ತಪ್ಪಿಹೋಗುವದು, ಇಬ್ಬರೂ ಅವಿಶ್ವಾಸಿಗಳ ವಿವಾಹದ ಮಧ್ಯದಲ್ಲಿರುವ ಪರಿಶುದ್ಧತೆ ಅಥವಾ ಪರಿಶುದ್ಧತೆಯ ಕೊರತೆಯು ವಿಶೇಷವಾಗಿ ಪರಿಗಣಿಸಲಾಗಿಲ್ಲ ಇದು ಇತರ ಪರಿಗಣಿಸುವಿಕೆಗಳನ್ನು ಮುಚ್ಚಿಹಾಕುತ್ತದೆ. ವೈವಾಹಿಕ ಅನ್ಯೋನ್ಯತೆ ಒಬ್ಬನು ಪಾಪದಲ್ಲಿ ಮುಳುಗಿಹೋಗಿರುವಾಗ, ದೇವರಿಂದ ಪ್ರತ್ಯೇಕಿಸಲ್ಪಟ್ಟಿರುವಾಗ, ನಿತ್ಯಜೀವದ ನೀರಿಕ್ಷೆ ಇಲ್ಲದಿರುವಾಗ ಚಿಕ್ಕದಾಗುತ್ತದೆ. ಒಬ್ಬರು ಅಥವಾ ಇಬ್ಬರು ವಿವಾಹದ ಸಂಗಾತಿಗಳು ಕ್ರೈಸ್ತರಾಗಿರುವಾಗ ಮಾತ್ರ ವಿವಾಹದ ಬಂಧವು ದೇವರಿಂದ ಶುದ್ಧಿಕರಿಸಲ್ಪಟ್ಟದ್ದೋ ಇಲ್ಲವೋ ಎಂಬುದು ಪರಿಗಣಿಸಲ್ಪಡುತ್ತದೆ. ಯಾಕಂದರೆ ಅವನು ಅಥವಾ ಅವಳು ರಕ್ಷಣೆಹೊಂದಿರುತ್ತಾರೆ, ಈ ಕಾರಣದಿಂದ ವಿಶ್ವಾಸಿಯ ಲೈಂಗೀಕ ಅನ್ಯೋನ್ಯತೆಯು ಶುದ್ಧೀಕರಿಸಲ್ಪಟ್ಟದ್ದಾಗಿದೆ.

ಪೌಲನು ತನ್ನ ವಿವೇಚನೆಯನ್ನು ಒಂದು ಹೆಜ್ಜೆ ಮುಂದಕ್ಕೆ ಒಯ್ಯುತ್ತಾನೆ. ಯಾಕಂದರೆ ವಿವಾಹದಲ್ಲಿ ಲೈಂಗೀಕ ಅನ್ಯೋನ್ಯತೆ ಕನಿಷ್ಠ ಒಬ್ಬ ಸಂಗಾತಿಯಾದರೂ ವಿಶ್ವಾಸಿಯಾಗಿದ್ದಲ್ಲಿ

ಶುದ್ಧೀಕರಿಸಲ್ಪಟ್ಟದ್ದಾಗಿರುತ್ತದೆ, ಈ ಅನ್ಯೋನ್ಯತೆಯಲ್ಲಿ ಜನಿಸಿದ ಮಕ್ಕಳು ಶುದ್ಧೀಕರಿಸಲ್ಪಟ್ಟವರಾಗಿದ್ದಾರೆ. ಈ ಅಂಶಕ್ಕೆ ಒತ್ತು ನೀಡಲು, ಪೌಲನು ಶುದ್ಧೀಕರಿಸಲ್ಪಟ್ಟವರ ಸಂಗಮದಿಂದ ಜನಿಸುವ ಮಕ್ಕಳನ್ನು ಅವಿಶ್ವಾಸಿಗಳಾದ ತಂದೆತಾಯಿಗಳಿಗೆ ಹುಟ್ಟುವ ಮಕ್ಕಳೊಂದಿಗೆ ವ್ಯತ್ಯಾಸವನ್ನು ತೋರಿಸುತ್ತಾನೆ. ಒಂದು ವೇಳೆ ದೇವರು ವಿಶ್ವಾಸಿಗಳ ಮತ್ತು ಅವಿಶ್ವಾಸಿಗಳ ಮಧ್ಯದಲ್ಲಿರುವ ಲೈಂಗೀಕ ಅನ್ಯೋನ್ಯತೆಯನ್ನು ಶುದ್ಧೀಕರಿಸದೇ ಹೋದರೆ, ಅವರ **ಮಕ್ಕಳು**, ಅವಿಶ್ವಾಸಿಗಳ ಮಕ್ಕಳಂತೆ, **ಅಶುದ್ಧರಾಗಿರುತ್ತಾರೆ**. ಪೌಲನು ಏಕೆ ಮಕ್ಕಳು ಅಶುದ್ಧರಾಗಿರುವ ಸಾಧ್ಯತೆಯ ಬಗ್ಗೆ ಹೇಳುತ್ತಾನೆ? ನಾವು ಪಾಪದಲ್ಲಿ ಹುಟ್ಟಿದ ಮಗು ಮತ್ತು ದೇವರ ದಂಡನೆಗೆ ಒಳಗಾದ ಮಗು ಎಂಬ ಹೇಳಿಕೆಯನ್ನು ತೊಡೆದುಹಾಕಬಹುದು. ಪೌಲನಿಗಿಂತ ಅನೇಕ ವರ್ಷಗಳ ಹಿಂದೆ, ಯೆಹಜ್ಕೇಲನು ಈ ವಿಷಯದ ಕುರಿತು ಮಾತನಾಡಿದ್ದನು. "ಪಾಪ ಮಾಡಿದ ಮನುಷ್ಯನು ಸಾಯುವನು" ಪ್ರವಾದಿಯು ಹೇಳುತ್ತಾನೆ. "ಮಗನು ತಂದೆಯ ದೋಷ ಫಲವನ್ನು ಅನುಭವಿಸನು" (ಯೆಹೆಜ್ಕೇಲ 18:20). ಯೆಹೆಜ್ಕೇಲನಾಗಲಿ ಅಥವಾ ಪೌಲನಾಗಲಿ ತಂದೆತಾಯಿಗಳ ವಯಕ್ತಿಕ ಅಪರಾಧವು ಮಕ್ಕಳಿಗೆ ವರ್ಗಾವಣೆಯಾಗುತ್ತದೆ ಎಂಬುದನ್ನು ಅನುಮತಿಸಿರಲಿಲ್ಲ.

Anthony C. Thiselton ಅವರು ವಿವಾಹದಲ್ಲಿ ಒಬ್ಬ ಸಂಗಾತಿ ಕ್ರೈಸ್ತರಾಗಿದ್ದಲ್ಲಿ ಆ ಮಗು ಪರಿಶುದ್ಧವಾಗಿದೆ ಯಾಕಂದರೆ ವಿಶ್ವಾಸಿಗಳಾದ ತಂದೆತಾಯಿಗಳ ಪರಿಶುದ್ಧವಾದ ಜೀವಿತದಿಂದಾಗಿ. ಕ್ರೈಸ್ತರು ಅವಿಶ್ವಾಸಿಯಾದ ಸಂಗಾತಿ ಮತ್ತು ಮಕ್ಕಳಿಗೆ ದೈವೀಕ ಜೀವಿತದ ಬಲವಾಗಿದ್ದಾರೆ.[7] ತಂದೆತಾಯಿಗಳಲ್ಲಿ ಒಬ್ಬರೂ ಕ್ರೈಸ್ತರಲ್ಲದಿರುವಾಗ ಮಗು ಪರಿಶುದ್ಧವಾಗಿರುವದಿಲ್ಲ ಯಾಕದರೆ ಅದಕ್ಕೆ ಬೋಧನೆ, ಮಾರ್ಗದರ್ಶನ ಮತ್ತು ಕ್ರೈಸ್ತರು ನೀಡುವ ಪ್ರಭಾವದ ಲಾಭಗಳು ದೊರೆಯುವದಿಲ್ಲ. ಈ ವೇದಭಾಗದಲ್ಲಿ ಪೌಲನ ಕಳಕಳಿ ಅವಿಶ್ವಾಸಿಗಳಾದ ಸಂಗಾತಿಗಳಿಗೆ ಜನಿಸುವ ಮಕ್ಕಳಲ್ಲ ಬದಲಾಗಿ, ಒಬ್ಬ ಸಂಗಾತಿಯಾದರೂ ಕ್ರೈಸ್ತರಾಗಿದ್ದಲ್ಲಿ ಮಕ್ಕಳ ಅನ್ಯೋನ್ಯತೆಯಾಗಲಿ ಅಥವಾ ಕಲ್ಪನೆಗಳಾಗಲಿ ಅಶುದ್ಧತೆಯಿಂದ ಕೂಡಿರುವದಿಲ್ಲ ಎಂದು ಸಕಾರಾತ್ಮಕವಾಗಿ ವಾದಿಸುತ್ತಾನೆ.

**ವಚನ 15.** ವಿವಾಹದಲ್ಲಿ ಕ್ರೈಸ್ತ ಸಂಗಾತಿಯು ಅ-ಕ್ರೈಸ್ತ ಸಂಗಾತಿಯನ್ನು ಹಿಡಿತದಲ್ಲಿಟ್ಟುಕೊಳ್ಳಲಾರರು ಎಂಬುದನ್ನು ಪೌಲನು ಗುರುತಿಸುತ್ತಾನೆ; ಅದೇನಂದರೆ ಅವನು ಅಥವಾ ಅವಳು ಅವಿಶ್ವಾಸಿಯನ್ನು ವಿವಾಹ ಸಂಬಂಧದಲ್ಲಿ ಉಳಿಯಲು ಒತ್ತಾಯಮಾಡಲಾರರು. ದೇವರು ಉದ್ದೇಶ ವಿವಾಹವು ಜೀವಿತದುದ್ದಕ್ಕೂ ಇರುವ ಸಮರ್ಪಣೆಯಾಗಿದೆ; **ಆದಾಗ್ಯೂ,** ಪೌಲನು ಬರೆಯುತ್ತಾನೆ, **ಅವಿಶ್ವಾಸಿಯು ಬಿಟ್ಟುಹೋಗುವುದಾದರೆ, ಬಿಟ್ಟುಹೋಗಲಿ**. ಕ್ರೈಸ್ತರು ಅವಿಶ್ವಾಸಿಯಾದ ಸಂಗಾತಿಯು ಬಿಟ್ಟುಹೋಗುವಾಗ ಅಪರಾಧಿ ಮನೋಭಾವದಲ್ಲಿ ಇರುವದು ಬೇಡ. ಅಪೊಸ್ತಲನು ತೊರೆದು ಬಿಟ್ಟವರು ವಿವಾಹ ಬದ್ದತೆಯಲ್ಲಿ ಇರಬೇಕು ಎಂಬ **ನಿರ್ಭಂಧವನ್ನು ಹೊಂದಿಲ್ಲ**. ಪೌಲನ ಮಾತುಗಳು ಕ್ರೈಸ್ತ ಸಂಗಾತಿ ತೊರೆದು ಬಿಡುವದಕ್ಕಿಂತ ಪೂರ್ವದಲ್ಲಿ "ಬದ್ದತೆಯಲ್ಲಿದ್ದಾನೆ" ಎಂಬ ಸಲಹೆಯನ್ನು ನೀಡುವಂತೆ ತೋರುತ್ತದೆ, ಆದರೆ ವೈವಾಹಿಕ ಸಂಬಂಧದಲ್ಲಿ ಯಾಕೆ ಅಥವಾ ಯಾರೊಂದಿಗೆ ವಿಶ್ವಾಸಿಯು ಬದ್ದತೆಯಲ್ಲಿದ್ದಾನೆ? ವಿವಾಹವು

ಸಮಾನ ಬದ್ದತೆಯಾಗಿದೆಯೋ? ಒಂದು ರೀತಿಯ ಹಂಗು ವಿವಾಹ ಜೀವಿತದ ಸುರಕ್ಷಿತೆಗೆ ಬಲಹೀನವಾದ ಆಧಾರವಾಗಿದೆ, ಆದರೆ ಬಹುಶಃ ಪೌಲನು ವಿವಾಹದ ಸಂಗಾತಿಯ ಬದ್ಧತೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರಲಿಕ್ಕಿಲ್ಲ.

ಪೌಲನು ಅವಿಶ್ವಾಸಿಯಾದ ಸಂಗಾತಿಯು ವಿಶ್ವಾಸಿಯನ್ನು ತೊರೆದು ಬಿಟ್ಟಾಗ ಅವನೊಂದಿಗೆ ಇನ್ನೆಂದಿಗೂ ಬದ್ಧತೆಯಲ್ಲಿ ಇಲ್ಲ ಎಂದು ಹೇಳುವಾಗ, ಅವನ ಮನಸ್ಸಿನಲ್ಲಿ ವಿವಾಹದ ಸಾಮಾಜಿಕ (ವಯಕ್ತಿಕವಲ್ಲ) ಅಂಶವಿತ್ತು. ತೊರೆದುಬಿಟ್ಟ ಕ್ರೈಸ್ತ ಹೆಂಡತಿಯು ಅಥವಾ ಗಂಡನು ಸಮಾಜದ ನಿರೀಕ್ಷೆಗಳನ್ನು ಅವಳಲ್ಲಿ ಅಥವಾ ಅವನ ವಿವಾಹವನ್ನು ಕಾಯ್ದುಕೊಳ್ಳುವ ಎಲ್ಲಾ ಸಾಧ್ಯತೆಗಳನ್ನು ಮಾಡಬೇಕು ಒಂದುವೇಳೆ ಕೊರಿಂಥದವರಿಗೆ ಪೌಲನ ಪ್ರಕಟನೆಯನ್ನು ಬಲಪಡಿಸಲು ಇತರ ಸಾಕ್ಷಿಗಳು ಬೇಕಾಗಿದ್ದಲ್ಲಿ, **ಸಮಾಧಾನದಲ್ಲಿರಬೇಕೆಂದು ದೇವರು ನಮ್ಮನ್ನು ಕರೆದಿದ್ದಾನೆ** ಎಂಬುದನ್ನು ಪರಿಗಣಿಸಬೇಕು. ಒಬ್ಬ ಅವಿಶ್ವಾಸಿಯಾದ ಸಂಗಾತಿ ಕ್ರೈಸ್ತ ವಿವಾಹದ ಸಂಗಾತಿಯೊಟ್ಟಿಗೆ ಜೀವಿಸಲು ನಿರಾಕರಿಸಿದ್ದಲ್ಲಿ ತನ್ನ ಬಲವನ್ನು ಅವಿಶ್ವಾಸಿಯಾದ ಸಂಗಾತಿಯನ್ನು ಮೆಚ್ಚಿಸಲು ಸಮರ್ಪಿಸಿದ್ದಲ್ಲಿ ಅದು ಸಮಾಧಾನದ ಮಾರ್ಗವಲ್ಲ.

ಕೆಲವರು ಈ ವೇದಭಾಗವನ್ನು ತೊರೆದು ಬಿಟ್ಟಂತ ಕ್ರೈಸ್ತನು ಇನ್ನೊಂದು ಮದುವೆಯಾಗಲು ಸ್ವತಂತ್ರನಾಗಿದ್ದಾನೆ ಎಂದು ಅರ್ಥೈಸುತ್ತಾರೆ. ತೊರೆದು ಬಿಡುವದು ಕೆಲವೊಮ್ಮೆ "ಪೌಲನ ಸೌಲಭ್ಯ" ಎಂದು ಕರೆಯಲಾಗುತ್ತದೆ, ಆದರೆ ಪೌಲನ ಮಾತುಗಳಲ್ಲಿ ಮರುವಿವಾಹವಾಗುವದರ ಕುರಿತು ಇಂಥಹ ಯಾವುದನ್ನೂ ನೋಡುವದು ಕಠಿಣವಾಗಿದೆ. ಅಪೊಸ್ತಲನು ವಿಚ್ಛೇಧನವು ಮರುವಿವಾಹದ ಸೌಲಭ್ಯವನ್ನು ನೀಡುವದಾಗಿದೆ ಎಂದು ಕ್ವಚಿತ್ತಾಗಿ ಯೋಚಿಸಿರಬಹುದು. ಅವನು ಈಗಾಗಲೇ "ಹೆಂಡತಿಯು ತನ್ನ ಗಂಡನನ್ನು ಬಿಟ್ಟು ಅಗಲಬಾರದು" (7:10)? "ಮತ್ತು ಗಂಡನು ಹೆಂಡತಿಯನ್ನು ಬಿಡಬಾರದು" (7:11) ಎಂದು ಆಜ್ಞಾಪಿಸಿದ್ದಾನೆ. ಒಂದುವೇಳೆ ವಿವಾಹವನ್ನು ರಕ್ಷಿಸಿಕೊಳ್ಳುವದು ಕರ್ತನಿಗೆ ನಂಬಿಗಸ್ತರಾಗಿರುವದನ್ನು ತ್ಯಾಗಮಾಡುವ ಬೆಲೆಯನ್ನು ನೀಡುವುದಾದಲ್ಲಿ ತೊರೆದು ಬಿಟ್ಟ ಕ್ರೈಸ್ತನು ಅವಿಶ್ವಾಸಿಯಾದ ಗಂಡ ಅಥವಾ ಹೆಂಡತಿಯೊಡನೆ ಸಂಬಂಧವನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿಲ್ಲ. ಒಬ್ಬನ ನಂಬಿಕೆಯನ್ನು ತೊರೆದು ಬಿಡುವದಕ್ಕೆ ಉತ್ತಮವಾದ ಕಾರಣಗಳನ್ನು ನೀಡಲಾಗಿಲ್ಲ. "ಪೌಲನು ಸುಮ್ಮನೇ ವಚನ 15ರಲ್ಲಿ ವಿಚ್ಛೇಧನದ ವಿರುದ್ಧ ಕ್ರೈಸ್ತರಿಗಿರುವ ನಿಷೇಧವು ಅವಿಶ್ವಾಸಿಯಾದ ಸಂಗಾತಿಯ ಬಯಕೆಯ ವಿರೋಧವಾಗಿ ಅನ್ಯೋನ್ಯತೆಯನ್ನು ಅವನು ವಿವಾಹವನ್ನು ಕೊನೆಗೊಳಿಸಲು ಒತ್ತಾಯವನ್ನು ತರುವಾಗ ನಿರ್ವಹಿಸುವದು ಎಂದಾಗಿಲ್ಲ."[8] ವಿಶ್ವಾಸಿಯು ವಿವಾಹವನ್ನು ಮುಂದುವರೆಸುವ ಸ್ವಾತಂತ್ರದ ಹಂಗು ಮರುವಿವಾಹದ ಸಲಹೆಯನ್ನು ನೀಡುವದಿಲ್ಲ.

**ವಚನ 16.** ಯಾಕಂದರೆ ಅವನಿಗೆ ವಿವಾಹದ ಕುರಿತು ಉನ್ನತವಾದ ದೃಷ್ಟಿಕೋನವಿರುತ್ತದೆ - ಇಬ್ಬರೂ ವ್ಯಕ್ತಿಗಳ ಮತ್ತು ಸಮುದಾಯದ ಲಾಭದ ಕುರಿತು ಸಕಾರಾತ್ಮಕವಾದ ತಿಳುವಳಿಕೆಯನ್ನು ಹೊಂದಿರುತ್ತದೆ - ಪೌಲನು ಅವಿಶ್ವಾಸಿಗಳನ್ನು ಮದುವೆಯಾದ ವಿಶ್ವಾಸಿಗಳು ವಿವಾಹ ಸಂಬಂಧದಲ್ಲಿ ತಾವು ಇದ್ದ ಹಾಗೇ ಮುಂದುವರೆಯಬೇಕು ಎಂದು ಬೇಡಿಕೊಳ್ಳುತ್ತಾನೆ. ಹಾಗೂ, ಅವನು ವಿಶ್ವಾಸಿಗಳು ವಿವಾಹಿತರಾಗಿಯೇ ಉಳಿಯುವದಕ್ಕೆ ಇನ್ನೊಂದು ಕಾರಣವನ್ನು ನೀಡುತ್ತಾನೆ.

ಅವಿಶ್ವಾಸಿಯನ್ನು ಮದುವೆಯಾಗುವದು ಸುವಾರ್ತೆಗೆ ಅವಕಾಶವನ್ನು ನೀಡುತ್ತದೆ. ಕ್ರೈಸ್ತರ ಉದಾಹರಣೆ ಮತ್ತು ಬೋಧನೆಯ ಮೂಲಕ ಅವಿಶ್ವಾಸಿಯೂ ಸಹಿತ ಕ್ರಿಸ್ತನನ್ನು ತಿಳಿದುಕೊಳ್ಳಬಹುದು. "ಒಬ್ಬ ಕ್ರೈಸ್ತ ಗಂಡ ಅಥವಾ ಹೆಂಡತಿ ಅವಿಶ್ವಾಸಿಯಾದ ಸಂಗಾತಿಯನ್ನು ರಕ್ಷಣೆಯೆಡೆಗೆ ನಡೆಸಲು ಸಾಧ್ಯವೋ?" ಎಂಬುದನ್ನು **ನಿನಗೇನು ಗೊತ್ತು** ಎಂದು ಅಪೊಸ್ತಲನು ಕೇಳುತ್ತಾನೆ.

ವಚನ 7:15ರಲ್ಲಿ ಅವಿಶ್ವಾಸಿಯಾದ ಸಂಗಾತಿಯು ಕ್ರಿಸ್ತನನ್ನು ವಿರೋಧಿಸುವಲ್ಲಿ ಕಠಿಣಪಡಿಸಿಕೊಂಡ ಸನ್ನಿವೇಶದಲ್ಲಿ ಮಾತ್ರ ಮಾತನಾಡುತ್ತಾನೆ ಎಂದು ಕೆಲವರು ಊಹಿಸುತ್ತಾರೆ. ವಿಶ್ವಾಸಿಗೆ ಇಂಥಹ ಅಶ್ವಾಸಿಯನ್ನು ಕ್ರಿಸ್ತನ ಬಳಿಗೆ ನಡೆಸಲು ಸ್ವಲ್ಪಮಟ್ಟಿನ ಸಾಧ್ಯತೆಯಿರುವದರಿಂದ, ಅಪೊಸ್ತಲನು ಕ್ರೈಸ್ತರಿಗೆ ವಿವಾಹದ ಸಂಗಾತಿಯು ತನ್ನ ವಿವಾಹ ಸಂಬಂಧವನ್ನು ನಿರ್ವಹಿಸುವದಕ್ಕೆ ಯಾವ ಪ್ರಯತ್ನವನ್ನು ಮಾಡಬೇಕಾಗಿಲ್ಲ ಎಂದು ಸಲಹೆಯನ್ನು ನೀಡುತ್ತಾನೆ ಎಂದು ವಾದಿಸುತ್ತಾರೆ. ಅರ್ಥೈಸುವಿಕೆ ವಿಫಲವಾಗಿದೆ, ಯಾಕಂದರೆ ಪೌಲನು ಇದಕ್ಕೆ ವ್ಯತಿರಿಕ್ತವಾದ ಸಲಹೆಯನ್ನು ನೀಡುತ್ತಾನೆ ವಿಶ್ವಾಸಿಯಾದ ಸಂಗಾತಿಯನ್ನು ವಿವಾಹದಲ್ಲಿ ಮುಂದುವರೆಯುವಂತೆ ಬೇಡಿಕೊಳ್ಳುತ್ತಾನೆ.

ಪೌಲನು ಗಂಡಂದಿರು ತಮ್ಮ ಹೆಂಡತಿಯರನ್ನು ಪರಿವರ್ತನೆಯೆಡೆಗೆ ನಡೆಸಬಹುದು ಎಂದು ಹೇಳುವದಕ್ಕಿಂತ ಪೂರ್ವದಲ್ಲಿ ಹೆಂಡತಿಯರು ತಮ್ಮ ಗಂಡದಿರನ್ನು ಕ್ರಿಸ್ತನ ಬಳಿಗೆ ನಡೆಸಬಹುದು ಎಂದು ಪೌಲನು ಮಾತನಾಡುವದನ್ನು ಉಲ್ಲೇಖಿಸುತ್ತಾನೆ ಎಂಬುದು ವಿಶಿಷ್ಟವಾಗಿರಬಹುದು. ಕೊರಿಂಥದಲ್ಲಿರುವ ಸಭೆ ಪುರುಷರಿಗಿಂತ ಹೆಚ್ಚು ಸ್ತ್ರೀಯರನ್ನು ಒಳಗೊಂಡಿತ್ತೋ?[9] ಪೇತ್ರನು ವಿವಾಹದ ಸಂಗಾತಿಯು ಸಂಗಾತಿಯನ್ನು ಕ್ರಿಸ್ತನ ಬಳಿಗೆ ನಡೆಸಬಹುದು ಎಂದು ಹೇಳುವಲ್ಲಿ ಅವನು ನಿರ್ಧಿಷ್ಟವಾಗಿ ಸ್ತ್ರೀಯರನ್ನು ಉದ್ದೇಶಿಸುತ್ತಾನೆ; "ಅದೇ ರೀತಿಯಾಗಿ ಸ್ತ್ರೀಯರೇ, ನಿಮ್ಮ ಗಂಡಂದಿರಿಗೆ ಅಧೀನರಾಗಿರಿ, ಅವರಲ್ಲಿ ಕೆಲವರು ದೇವರ ವಾಕ್ಯಕ್ಕೆ ಅವಿಧೇಯರಾಗಿದ್ದರೂ ನೀವು ನಿರ್ಮಲರಾಗಿಯೂ ಭಯಭರಿತಾರಾಗಿಯೂ ನಡೆದುಕೊಳ್ಳುವದನ್ನು ಅವರು ನೋಡಿ ವಾಕ್ಯೋಪದೇಶವಿಲ್ಲದೆ ತಮ್ಮ ಹೆಂಡತಿಯರಾದ ನಿಮ್ಮ ನಡೆತೆಯಿಂದಲೇ ಸನ್ಮಾರ್ಗಕ್ಕೆ ಬಂದಾರು" (1 ಪೇತ್ರ 3:1). ಒಬ್ಬನು ಯಾವುದೇ ರೀತಿಯ ವಿವರಣೆಯನ್ನು ನೀಡಬಹುದು, ಇಂದು ಸಭೆಯಲ್ಲಿ ಸ್ತ್ರೀಯರು ಅಸಮತೆಯ ಭಾಗವಾಗಿದ್ದಾರೆ ಎಂಬದು ನಿಜವಾಗಿದೆ.

## "ದೇವರು ಪ್ರತಿಯೊಬ್ಬರನ್ನು ಕರೆದಂತೆ" (7:17-24)

ಕಾಲದ ಕೊನೆಯಲ್ಲಿ, ಎಲ್ಲಾ ಜನರು ದೇವರ ಎದುರಿನಲ್ಲಿ ನ್ಯಾಯತೀರ್ಪಿಗಾಗಿ ನಿಲ್ಲುವ ಸಮಯದ ಕುರಿತು ಪೌಲನು ಯೋಚಿಸುತ್ತಾನೆ. ನಂಬಿಕೆಯಲ್ಲಿ ಜೀವಿಸುವ ಪ್ರಯತ್ನ, ಅಧಿಕೃತವಾಗಿ ಬೇಟಿಯಾಗುವ ದಿನ ಮತ್ತು ನಿತ್ಯಜೀವದ ನಿರೀಕ್ಷೆ ಕ್ರೈಸ್ತರು ನಿರ್ಧಾರ ತೆಗೆದುಕೊಳ್ಳುವದನ್ನು ಮತ್ತು ಹವ್ಯಾಸಗಳನ್ನು ಮೇಲ್ವಿಚಾರಣೆಮಾಡಬೇಕು. ಆದುದರಿಂದ, ಸಾಮಾಜಿಕ ಸಂಬಂಧಗಳು ಶರೀರಭಾವದಿಂದ ತಿರುಗಿಕೊಳ್ಳಬೇಕು ಎಂಬ ಕಳಕಳಿಯನ್ನು ಅಪೊಸ್ತಲನು ಹೊಂದಿದ್ದಾನೆ. ವಿವಾಹವು ಪ್ರಾಮುಖ್ಯವಾದ ಸಾಮಾಜಿಕ ಸಂಬಂಧವಾಗಿದೆ, ಆದರೆ ನಿತ್ಯತ್ವದಲ್ಲಿ ಅದು ವಿಶಿಷ್ಟವಾಗಿಲ್ಲ. ಕೊರಿಂಥದ ಕ್ರೈಸ್ತರು ದೇವರೊಂದಿಗೆ ಇರುವ ಒಬ್ಬನ ಸಂಬಂಧವನ್ನು ಅತ್ಯಂತ ನಿಕಟವಾಗಿ ವೈವಾಹಿಕ ಸಂಭಂದದೊಂದಿಗೆ

ಜೋಡಿಸುತ್ತಾರೆ. ಕ್ರಿಸ್ತನನ್ನು ಅರಿಕೆಮಾಡುವದು ಮತ್ತು ವಿಧೇಯರಾಗುವದಕ್ಕೆ ವಿವಾಹದ ಅಥವಾ ಇತರ ಸಾಮಾಜಿಕ ಸಂಬಂಧಗಳ ಸಂಪೂರ್ಣ ಬದಲಾವಣೆ ಅಗತ್ಯವಿಲ್ಲ. ಲೌಕಿಕ ಬಂಧನಗಳು ಕರ್ತನ ಬರೋಣದ ಮೇಲೆ ಕೇಂದ್ರಿಕರಿಸುವವರಿಗೆ ಹೊಸ ಅರ್ಥವನ್ನು ನೀಡುತ್ತವೆ. ಕೊನೆಯ ಸಮಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಅವರು ಹೇಗೆ ಇರಬೇಕು ಎಂಬುದರ ಕುರಿತು ಮೊದಲು ಯೋಚಿಸಿರುವದಕ್ಕಿಂತ ಅಷ್ಟೊಂದು ಪ್ರಾಮುಖ್ಯವಾಗಿಲ್ಲ. ಗಂಡನಿಲ್ಲದೆ ಇರುವವರು ಅಥವಾ ಹೆಂಡತಿಯಿಲ್ಲದೆ ಇರುವವರು ಅವಿವಾಹಿತರಾಗಿಯೇ ಉಳಿಯುವದು ಉತ್ತಮ ಎಂದು ಸಲಹೆಯನ್ನು ನೀಡಲಾಗಿದೆ. “ನೀವು ಇದ್ದಹಾಗೆಯೇ ಮುಂದುವರೆಯಿರಿ,” ಯಾಕಂದರೆ “ಸಮಯವು ಸಂಕೋಚವಾದದ್ದರಿಂದ” (7:29) ಎಂದು ಅಪೊಸ್ತಲನು ಹೇಳುತ್ತಾನೆ.

ಇದನ್ನು ಸ್ಪಷ್ಟೀಕರಿಸಲು ಮತ್ತು ಬಲಪಡಿಸಲು ವೈವಾಹಿಕ ಸಂಭಂದದ ಕುರಿತು ಅವನು ಅವರಿಗೆ ಏನು ಹೇಳಿದ್ದಾನೋ, ಪೌಲನು ಇನ್ನೊಂದು ಸಾಮಾಜಿಕ ಸವಂಹನದೆಡೆಗೆ ಅವರನ್ನು ಎಳೆಯುತ್ತಾನೆ. ಒಬ್ಬನು ಯೆಹೂದ್ಯನಾಗಿರಲಿ ಅಥವಾ ಯೆಹೂದ್ಯೇತರನಾಗಿರಲಿ, ಸುನ್ನತಿ ಮಾಡಿಸಿಕೊಂಡವನಾಗಿರಲಿ ಅಥವಾ ಸುನ್ನತಿ ಯಿಲ್ಲದವನಾಗಿರಲಿ. ಜನಾಂಗೀಯ ಗುರುತಿಸುವಿಕೆ ಕ್ರೈಸ್ತರಿಗೆ ಪ್ರಾಮುಖ್ಯವಲ್ಲ. ಹಳೆಯ ಧಾರ್ಮಿಕ ಬದ್ಧತೆಗಳು ಶರೀರದಲ್ಲಿರುವ ಗುರುತಿಗಳಿಂದ ಸೂಚಿಸುವದು ಈಗ ಅರ್ಥಹೀನವಾಗಿದೆ. ಒಬ್ಬ ಪಾಪಿಯು ಮತ್ತು ಅದೇ ಸಮಯದಲ್ಲಿ ಒಬ್ಬ ದಾಸನು ಅಥವಾ ಒಬ್ಬ ಸ್ವಂತಂತ್ರ ಮನುಷ್ಯನು ಕ್ರಿಸ್ತನನ್ನು ಧರಿಸಿರಬಹುದು. ಪ್ರತಿಯೊಬ್ಬರು ತಮ್ಮ ಪ್ರಸ್ತುತ ಸಾಮಾಜಿಕ ಸ್ಥಿತಿಯನ್ನು ಮತ್ತು ಅದನ್ನು ರೂಪಿಸಲು ಪ್ರಯತ್ನಿಸಿದವರನ್ನು ಸ್ವೀಕರಿಸಿಕೊಳ್ಳಬೇಕು. ಕರ್ತನು ಬಹುಬೇಗನೇ ತಿರುಗಿಬರಲಿಕ್ಕಿದ್ದಾನೆ, ಎಂದು ವಾಕ್ಯಭಾಗವು ಸೂಚಿಸುತ್ತದೆ. ನಂತರ ಅವನು ಪ್ರತಿಯೊಬ್ಬರಿಗೂ ಅವರವರ ಕ್ರಿಯೆಗಳಿಗೆ ಅನುಗುಣವಾಗಿ ನ್ಯಾಯತೀರಿಸುತ್ತಾನೆ (2 ಕೊರಿಂಥ 5:10). ಆದುದರಿಂದ ಪೌಲನು ಹೀಗೆ ಬರೆಯುತ್ತಾನೆ,

**[17]ಆದರೂ ಕರ್ತನು ಪ್ರತಿಯೊಬ್ಬನಿಗೆ ಯಾವ ಯಾವ ಸ್ಥಿತಿಯನ್ನು ನೇಮಿಸಿದ್ದಾನೋ, ಅಂದರೆ ದೇವರು ಕರೆಯುವಾಗ ಪ್ರತಿಯೊಬ್ಬನು ಯಾವ ಯಾವ ಸ್ಥಿತಿಯಲ್ಲಿ ಇದ್ದಾನೋ ಆಯಾ ಸ್ಥಿತಿಗೆ ಸರಿಯಾಗಿ ನಡೆದುಕೊಳ್ಳಲಿ. ಹೀಗೆ ಎಲ್ಲಾ ಸಭೆಗಳಲ್ಲಿಯೂ ಆಜ್ಞಾಪಿಸುತ್ತೇನೆ.**
**[18]ದೇವರು ಕರೆದ ಕಾಲದಲ್ಲಿ ಯಾವನಾದರೂ ಸುನ್ನತಿಯುಳ್ಳವನಾಗಿದ್ದನೋ ಅವನು ಸುನ್ನತಿಯಿಲ್ಲದವನಂತಾಗಬಾರದು. ದೇವರು ಕರೆದಾಗ ಯಾವನಾದರೂ ಸುನ್ನತಿಯಿಲ್ಲದನಾಗಿದ್ದನೋ ಅವನು ಸುನ್ನತಿ ಮಾಡಿಸಿಕೊಳ್ಳಬಾರದು. [19]ಸುನ್ನತಿಯಿದ್ದರೂ**
**ಪ್ರಯೋಜನವಿಲ್ಲ, ಸುನ್ನತಿಯಿಲ್ಲದಿದ್ದರೂ ಪ್ರಯೋಜನವಿಲ್ಲ; ದೇವರ ಕಟ್ಟಳೆಗಳನ್ನು ಅನುಸರಿಸಿ ನಡಯುವದೇ ಪ್ರಯೋಜನವಾಗಿದೆ. [20]ದೇವರು ಕರೆದಾಗ ಪ್ರತಿಯೊಬ್ಬನು**
**ಯಾವ ಸ್ಥಿತಿಯಲ್ಲಿದ್ದನೋ ಆ ಸ್ಥಿತಿಯಲ್ಲಿಯೇ ಇರಬೇಕು. [21]ದೇವರು ಕರೆದಾಗ ನೀನು**
**ಮತ್ತೊಬ್ಬನ ದಾಸನಾಗಿದ್ದಿಯೋ? ಅದಕ್ಕೆ ಚಿಂತೆ ಮಾಡಬೇಡ. ಆದರೆ ಬಿಡುಗಡೆ ಹೊಂದುವದಕ್ಕೆ ನಿನ್ನ ಕೈಯಿಂದಾದರೆ ಸ್ವತಂತ್ರನಾಗುವದೇ ಉತ್ತಮ. [22]ಯಾವನು**
**ಮತ್ತೊಬ್ಬನಿಗೆ ದಾಸನಾಗಿದ್ದು ಕರ್ತನ ಸೇವೆಗೆ ಕರೆಯಲ್ಪಟ್ಟಿರುವನೋ ಅವನು ಕರ್ತನ ಮೂಲಕ ಬಿಡುಗಡೆಹೊಂದಿರುವ ಸ್ವತಂತ್ರನು. ಅದೇ ಪ್ರಕಾರ ಯಾವನು ಸ್ವತಂತ್ರನಾಗಿದ್ದು ಕರೆಯಲ್ಪಟ್ಟಿರುವನೋ ಅವನು ಕ್ರಿಸ್ತನಿಗೆ ದಾಸನು. [23]ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು,**

**ಮನುಷ್ಯರಿಗೆ ದಾಸರಾಗಬೇಡಿರಿ, [24]ಸಹೋದರರೇ, ಪ್ರತಿಯೊಬ್ಬನು ಕರೆಯಲ್ಪಟ್ಟಾಗ ಯಾವ ಸ್ಥಿತಿಯಲ್ಲಿದ್ದನೋ ಅದೇ ಸ್ಥಿತಿಯಲ್ಲಿ ದೇವರ ಮುಂದೆ ಇದ್ದು ಕೊಂಡಿರಲಿ.**

**ವಚನ 17.** ಅಪೊಸ್ತಲನು ತಾನು ಗಂಡಂದಿರಿಗೆ ಮತ್ತು ಹೆಂಡತಿಯರಿಗೆ ಹೇಳಿರುವದನ್ನು ಈ ಕ್ರೈಸ್ತರಿಗೆ ಮಾರ್ಗದರ್ಶನ ನೀಡುವ ಎರಡು ಅಂಶಗಳೊಂದಿಗೆ ವಿಸ್ತರಿಸುತ್ತಾನೆ ಮತ್ತು ಸ್ಪಷ್ಟೀಕರಿಸುತ್ತಾನೆ. ಮೊದಲನೆಯದಾಗಿ, ನಿಯೋಜಿಸಿದ ಸಾಮಾಜಿಕ ಸಂಬಂಧದಲ್ಲಿ **ಕರ್ತನು ಪ್ರತಿಯೊಬ್ಬನಿಗೆ ಯಾವ ಯಾವ ಸ್ಥಿತಿಯನ್ನು ನೇಮಿಸಿದ್ದಾನೋ** ಅದರೊಂದಿಗೆ ತೃಪ್ತರಾಗಿರಬೇಕು. ಎರಡನೆಯದಾಗಿ, **ದೇವರು ಕರೆಯುವಾಗ** ಪ್ರತಿಯೊಬ್ಬರನ್ನು ಪರಿವರ್ತನೆಗೆ ಪೂರ್ವದಲ್ಲಿದ್ದ ತನ್ನ ಜೀವಿತವನ್ನು ಸಾಮಾಜಿಕ ಕಟ್ಟುಪಾಡುಗಳಲ್ಲಿ ಸಿಲುಕಿಸಿಕೊಂಡಿದೆ ಎಂಬುದರ ಸಂಪೂರ್ಣ ಜ್ಞಾನದೊಂದಿಗೆ ಕ್ರೈಸ್ತರನ್ನು ಕರೆದಿದ್ದಾನೆ ಎಂಬುದನ್ನು ತಿಳಿದುಕೊಳ್ಳಬೇಕು. ಇಲ್ಲಿರುವ ಸಂದೇಶವೇನಂದರೆ ಕರ್ತನ ಒಡೆತನಕ್ಕೆ ಅಧೀನಪಡಿಸಿಕೊಳ್ಳುವದು ಸಮಾಜದ ಕ್ರಮದಲ್ಲಿ ಒಬ್ಬನ ಸ್ಥಾನವನ್ನು ತೆಗೆದುಹಾಕುವದಿಲ್ಲ. ಪೌಲನು ಕ್ರೈಸ್ತರಿಗೆ ಅನವಶ್ಯಕ ಗಲಭೆಗಳನ್ನು ದೂರವಿರಿಸಲು ಕರೆನೀಡುತ್ತಿದ್ದಾನೆ. ಅವನು ಕ್ರಿಸ್ತನನ್ನು ಅಪ್ಪಿಕೊಳ್ಳುವುದಕ್ಕೆ ಪಾಪಧೀನ ಜೀವನ ಶೈಲಿಯಿಂದ ತಿರುಗಿಕೊಳ್ಳುವದು ಅವಶ್ಯವಾಗಿದೆ ತಮ್ಮ ಸಂಪೂರ್ಣವಾದ ಜೀವನ ಶೈಲಿಯಿಂದ ಅಲ್ಲ ಎಂಬುದನ್ನು ತಿಳಿದುಕೊಳ್ಳಬೇಕೆಂದು ಬಯಸುತ್ತಾನೆ. ವಿವಾಹವು ಮನುಷ್ಯನು ಯಾವ ರೀತಿಯಲ್ಲಿ ಇರಬೇಕು ಎಂದು ನಿರೀಕ್ಷಿಸಲಾಗಿದೆ ಎಂಬುದಕ್ಕೆ ಒಂದು ಉದಾಹರಣೆಯಾಗಿದೆ, “ದೇವರು ಕರೆದಾಗ ಪ್ರತಿಯೊಬ್ಬನು ಯಾವ ಸ್ಥಿತಿಯಲ್ಲಿದ್ದನೋ ಆ ಸ್ಥಿತಿಯಲ್ಲಿಯೇ ಇರಬೇಕು” (7:20).

ಒಬ್ಬನು ತನ್ನ ಪೂರ್ವಸ್ಥಿತಿಯಲ್ಲಿಯೇ ಇರಬೇಕು ಎಂಬುದು ಸ್ವ-ಸುಧಾರಣೆ ಒಳಗೊಂಡಿರುವದನ್ನು ರದ್ದುಪಡಿಸುವದಿಲ್ಲ; ಆದರೆ ಪೌಲನು ಸಹೋದರರು ಯಾವ ಸಂಗತಿಗಳನ್ನು ನಿರ್ಭಂದಿಸಲಾರರೋ ಅವುಗಳಿಗೆ ಲೆಕ್ಕಾ ಕೇಳುವವನಾಗಿದ್ದಾನೆ ಎಂಬುದನ್ನು ತಿಳಿದುಕೊಳ್ಳಬೇಕು ಎಂದು ಬಯಸುತ್ತಾನೆ. ಅನ್ಯಾಯ ಮತ್ತು ಅವಮಾನಕರವಾದ ಪರಿಸ್ಥಿತಿಗಳಲ್ಲಿ ಯಾವುದನ್ನು ನಿರ್ವಹಿಸಬೇಕಾದ ಅವಶ್ಯಕತೆಯಿದೆಯೋ ಅದನ್ನು ತನ್ನ ಜನರಿಗೆ ನೀಡಿದ್ದಾನೆ. ಶ್ರೀಮಂತರು ಮತ್ತು ಬಡವರು ಇಬ್ಬರಿಗೂ, ಶಕ್ತಿಯುತರಾದವರು ಮತ್ತು ಅಸಹಾಯಕರಾದವರು, ಆತನ ದೃಷ್ಟಿಯಲ್ಲಿ ಅಳತೆಗೆ ಮೀರಿದ ಯೋಗ್ಯತೆಯನ್ನು ಹೊಂದಿದ್ದಾರೆ ಎಂಬ ಭರವಸೆಯನ್ನು ನೀಡುತ್ತಾನೆ. ಅವನು ಜನರು ಯಾವುದನ್ನು ಬದಲಾವಣೆ ಮಾಡಲು ಬಲಹೀನರಾಗಿದ್ದರೋ ಆ ಕಾರ್ಯಗಳಿಗಾಗಿ ಅಲ್ಲ ಅವರು ಮಾಡುವ ಕಾರ್ಯಗಳಿಗೆ ಅವರನ್ನು ಉತ್ತರದಾಯಿಗಳನ್ನಾಗಿಸುತ್ತಾನೆ (ನೋಡಿ 2 ಕೊರಿಂಥ 8:12).

ಕೊರಿಂಥದಲ್ಲಿರುವ ಕೆಲವು ಕ್ರೈಸ್ತರು ಸೂಕ್ಷ್ಮಗ್ರಾಹಿಗಳಾಗಿದ್ದಲ್ಲಿ ನನ್ನ ವಿಮರ್ಶೆ ಮತ್ತು ಇದರಿಂದಾಗಿ **ನಾನು ಹೀಗೆ ಎಲ್ಲಾ ಸಭೆಗಳಲ್ಲಿಯೂ ಆಜ್ಞಾಪಿಸುತ್ತೇನೆಂದು** ತಿಳಿದುಕೊಳ್ಳುವಂಥದ್ದಾಗಿದೆ, ಒಂದುವೇಳೇ ಕೊರಿಂಥದಲ್ಲಿರುವ ಕ್ರೈಸ್ತರು ಸಭೆಯ ಆಡಳಿತವನ್ನು ನೋಡಿಕೊಳ್ಳಲು ಅಪೊಸ್ತಲನು ಮಾಡಿದ ನಿಯಮಗಳಿಗೆ ಸೂಕ್ಷ್ಮಗ್ರಾಹಿಗಳಾಗಿದ್ದಲ್ಲಿ, ಅಥವಾ ಬಹುಶಃ ಪ್ರತಿರೋಧಿಸುವವರಾಗಿದ್ದಲ್ಲಿ, ಪೌಲನು ತನ್ನ ಸೂಚನೆಗಳನ್ನು ಕ್ರೈಸ್ತರಾಗಿ ಜೀವಿಸಲು, ನಿರ್ಧಿಷ್ಟವಾಗಿ ಅವರಿಗಾಗಿ ರಚಿಸಲಾಗಿಲ್ಲ ಎಂದು

ಹೇಳುತ್ತಾನೆ. ಕೊರಿಂಥದಲ್ಲಿ ಅಥವಾ ಎಲ್ಲಾ ಇರಲಿ, ಸವಾಲನ್ನು ನೀಡುವಂಥದ್ದಾಗಿದೆ. ಅವರು ಸೇವೆಯನ್ನು ಮಾಡುವ ದೇವರಿಗೆ ಲೋಕದಲ್ಲಿರುವ ಕೆಟ್ಟತನದ ಸರಿಯಾದ ಅರಿವಿದೆ. ಅವನ ಕಾಲದಲ್ಲಿದ್ದ ಕೆಲವು ಕ್ರೈಸ್ತರು ವಿವಾಹದ ವ್ಯವಸ್ಥೆಯಲ್ಲಿ ಸುತ್ತಿಕೊಂಡಿದ್ದರು, ಅದೇ ಸಮಯದಲ್ಲಿ ಇತರರು ದೈಹಿಕ ಗುಲಾಮತನದ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡಿದ್ದರು ಎಂಬುದು ಅವನಿಗೆ ತಿಳಿದಿತ್ತು. ಸಹಿಸಲಾರದ ಅವರ ಸಾಮಾಜಿಕ ಹಂಗುಗಳಿಂದಾಗಿ ಬಹುಶಃ ಅವರು ಇನ್ನೂ ಪಾಪಗಳ ಕ್ಷಮಾಪಣೆ ಮತ್ತು ಬರಲಿಕ್ಕಿರುವ ಉತ್ತಮವಾದ ರಾಜ್ಯದಲ್ಲಿ ದೇವರೊಂದಿಗೆ ಜೀವಿಸುವ ನಿರೀಕ್ಷೆಯಲ್ಲಿರುವ ಕ್ರೈಸ್ತರಾಗಿದ್ದರು.

**ವಚನ 18.** ಕ್ರಿಸ್ತನ ಮರಣಾನಂತರ ಮೊದಲನೆಯ ಶತಮಾನದಲ್ಲಿ, ದೊಡ್ಡ ಸಂಖ್ಯೆಯಲ್ಲಿ ಯೆಹೂದ್ಯ ಕ್ರೈಸ್ತರು ಧರ್ಮಶಾಸ್ತ್ರದ ಶ್ರದ್ದೆಯುಳ್ಳವರಾಗಿ ಉಳಿದಿದ್ದರು. ಅವರಲ್ಲಿ ಅನೇಕ ಅನ್ಯಜನರು ಕ್ರೈಸ್ತರಾಗುವ ಪೂರ್ವದಲ್ಲಿ ಧರ್ಮಶಾಸ್ತ್ರವನ್ನು ಸ್ವೀಕರಿಸಿಕೊಳ್ಳಬೇಕು ಎಂದು ನಂಬುತ್ತಿದ್ದರು (ನೋಡಿರಿ ಅ.ಕೃ. 21:20). ಪರಿವರ್ತನೆ ಹೊಂದಿದ್ದ ಅನ್ಯಜನರು ಎದುರಿಸುತ್ತಿರುವ ಬೇಡಿಕೆಗಳಿಂದಾಗಿ ಪೌಲನು ಗಲಾತ್ಯದವರಿಗೆ ಬರೆಯಲು ಪ್ರೇರೆಪಣೆಯನ್ನು ಹೊಂದಿದ್ದನು. ಅವನು ವಿಷಯಗಳ ಕುರಿತು ದಾಹವುಳ್ಳವನಾಗಿದ್ದನು, ಆದರೆ ಗಲಾತ್ಯ 5ರಲ್ಲಿ ಅಥವಾ ಫಿಲಿಪ್ಪಿಯವರಿಗೆ 3ರಲ್ಲಿ ವ್ಯಕ್ತಪಡಿಸಿದ ಯಾವುದೇ ದಾಹಗಳು ಅವನು 1 ಕೊರಿಂಥ 7:18, 19ರಲ್ಲಿ ಸುನ್ನತಿಯ ವಿಷಯವಾಗಿ ಮಾತನಾಡುವಾಗ ಉದ್ಭವಿಸಲಿಲ್ಲ. ಕೊರಿಂಥದ ಸಭೆಗಳಲ್ಲಿ ಇಂಥಹ ವಾದವಿವಾದದ ಬೇರು ಕೊರಿಂಥದ ಸಭೆಗಳಲ್ಲಿ ಹುಟ್ಟಿರುವದು ಕಂಡುಬರುವದಿಲ್ಲ, ಕನಿಷ್ಠ ಈ ಅಂಶದಲ್ಲಿ.[10] ಹಾಗಿದ್ದಲ್ಲಿ ಪೌಲನು ಏಕೆ ಈ ವಿಷಯವನ್ನು ತಂದನು? ಸುನ್ನತಿ ಮಾಡಿಸಿಕೊಳ್ಳುವದು ಅಥವಾ ಸುನ್ನತಿ ಮಾಡಿಸಿಕೊಳ್ಳದೇ ಇರುವದು ಯಾವರೀತಿಯಲ್ಲಿ ವಿವಾಹಿತರು ಮತ್ತು ಅವಿವಾಹಿತರು ತಾವು ಇದ್ದ ಸ್ಥಿತಿಯಲ್ಲಿಯೇ ಮುಂದುವರೆಯಬೇಕು ಎಂಬ ಪೌಲನ ಉದ್ದೇಶವನ್ನು ಬೆಂಬಲಿಸುತ್ತದೆ (7:12-17)?

ಅಪೊಸ್ತಲನು ಜಾಗತಿಕ ಸಭೆಗಾಗಿ ಹೋರಾಡುತ್ತಾನೆ, ಯೆಹೂದ್ಯರು ಮತ್ತು ಅನ್ಯಜನರು ಸಂಧಾನದಲ್ಲಿರುವ ಸಭೆ ಯಾವಾಗಲೂ ಅವನ ಮನಸ್ಸಿನಲ್ಲಿತ್ತು. ಅವನ ಮತ್ತು ಯೆಹೂದ್ಯ ಕ್ರೈಸ್ತರ ಮಧ್ಯದಲ್ಲಿದ್ದ ಅನ್ಯಜನರು ಸುನ್ನತಿ ಮಾಡಿಸಿಕೊಳ್ಳಬೇಕು ಎಂಬ ಗಲಿಬಿಲಿ ಅವನಿಂದ ದೂರವಾಗಿರಲಿಲ್ಲ. ಸುನ್ನತಿ ಗಣನೀಯವಾದ ಭಾವನಾತ್ಮಕ ಮತ್ತು ಸಾಂಸ್ಕೃತಿಕ ಪರಿಣಾಮಗಳನ್ನು ಹೊಂದಿದ್ದಾಗಿತ್ತು; ಆದಾಗ್ಯೂ, ಪೌಲನ ದೃಷ್ಟಿಕೋನದಲ್ಲಿ, ಅದು ದೇವರೊಂದಿಗೆ ಇರುವ ಒಬ್ಬನ ಸಂಬಂಧವನ್ನು ಸಮರ್ಥಿಸುವದಾಗಿರಲಿಲ್ಲ. ಸುನ್ನತಿಯ ಕುರಿತು ಕ್ರೈಸ್ತರ ಭಿನ್ನಾಭಿಪ್ರಾಯ ಒಬ್ಬನ ವೈವಾಹಿಕ ಸ್ಥಾನದೊಂದಿಗೆ ಸಂಬಂಧವನ್ನು ಹೊಂದಿತ್ತು. ಒಬ್ಬನು ವಿವಾಹವಾಗಿರುವಾಗ ಅಥವಾ ಅವಿವಾಹಿತನಾಗಿರುವಾಗ ಕ್ರೈಸ್ತನಾಗಿದ್ದನೋ ಸುನ್ನತಿ ಮಾಡಿಸಿಕೊಂಡಿದ್ದನೋ ಅಥವಾ ಸುನ್ನತಿಮಾಡಿಸಿಕೊಂಡಿಲ್ಲವೋ, ಅಲ್ಲಿ ಬದಲಾವಣೆ ಅವಶ್ಯವಾಗಿತ್ತು. ಪರಿವರ್ತನೆಯನ್ನು ಹೊಂದಿದ ಯೆಹೂದ್ಯ **ಸುನ್ನತಿಯಿಲ್ಲದವನಾಗಿರಬಾರದು**; ಅನ್ಯನು **ಸುನ್ನತಿ ಮಾಡಿಸಿಕೊಳ್ಳಬಾರದು**. ಪರಿವರ್ತನೆ ಹೊಂದಿರುವ ವಿವಾಹಿತನು, ಅದರಂತೆ ವಿವಾಹ ಸಂಬಂಧವನ್ನು ತೊರೆದುಬಿಡುವದಲ್ಲ; ಇಲ್ಲವೇ ಅವಿವಾಹಿತ ಕ್ರೈಸ್ತನು ಮದುವೆಯಾಗಲು ಪ್ರಯತ್ನಿಸುವದಲ್ಲ.

ಇದು ಸ್ವಲ್ಪಮಟ್ಟಿಗೆ ಅನ್ಯ ಕ್ರೈಸ್ತನು ಸುನ್ನತಿಮಾಡಿಸಿಕೊಳ್ಳಲು ನಿರ್ಧರಿಸಬೇಕು, ಆದರೆ ಪರಿವರ್ತನೆಯನ್ನು ಹೊಂದಿದ ಯೆಹೂದ್ಯರು "ಸುನ್ನತಿಯಿಲ್ಲದವರಾಗಿರಲು" ಪ್ರಯತ್ನಿಸಬಾರದು ಎಂದು ಹೇಳುವಾಗ ಪೌಲನು ಏನೆಂದು ಅರ್ಥೈಸುತ್ತಾನೆ? ಒಬ್ಬನು ಏಕೆ ಮತ್ತು ಹೇಗೆ "ಸುನ್ನತಿಯಿಲ್ಲದವನಾಗಿರಬೇಕು"? ಸುನ್ನತಿಯ ಗುರುತನ್ನು ಅಳಿಸಿಹಾಕುವ ಕೆಲವು ಯೆಹೂದ್ಯರ ಬಯಕೆ, ಗ್ರೀಕ ಸಂಸ್ಕøತಿ ಯೆಹೂದ್ಯರ ಮಾರ್ಗಗಳ ಮೇಲೆ ಆಕ್ರಮಣಮಾಡುವಾಗ ಕ್ರಿಸ್ತ ಪೂರ್ವ ಶತಮಾನಗಳಲ್ಲಿ ತಕ್ಷಣದಲ್ಲಿ ಪ್ರಾರಂಭವಾಗಿತ್ತು. ಯೆಹೂದ್ಯರ ಸಂಪ್ರದಾಯಕ್ಕೆ ವ್ಯತ್ಯಾಸವಾಗಿರುವ ಇತರ ಅಭ್ಯಾಸಗಳಲ್ಲಿ, ಗ್ರೀಕರ ಪುರುಷರು ನಿರ್ವಾಣರಂತೆ ವರ್ತಿಸಿದರು.[11] ಸುನ್ನತಿಯೆಂಬ ಸಂಪ್ರದಾಯದಲ್ಲಿ ದೇಹವನ್ನು ವಿಕಾರಗೊಳಿಸುವದು ಅಸಂಸ್ಕೃತವಾಗಿತ್ತು. ಅಧುನಿಕ ಯೆಹೂದ್ಯರು, ಗ್ರೀಕರ ವಿಧಾನಗಳನ್ನು ಅನುಸರಿಸಲು ಕಾಯುತ್ತಿದ್ದರು, ಅವರು ವಿವಸ್ತ್ರರಾಗಿ ತಾವು ಸುನ್ನತಿಮಾಡಿಸಿಕೊಂಡಿರುವದನ್ನು ವ್ಯಾಯಾಮ ಕೇಂದ್ರಗಳಲ್ಲಿ ಪ್ರದರ್ಶಿಸಲು ಅವಮಾನಪಡುತ್ತಿದ್ದರು. ἐπισπάομαι (*epispaomai* "to undo . . . circumcision") ಗ್ರೀಕ್ ಪದ ಕೇವಲ ಹೊಸ ಒಡಂಬಡಿಕೆಯಲ್ಲಿ ಕಂಡುಬರುತ್ತದೆ. ಇದರ ಸಾಮಾನ್ಯ ಅರ್ಥ ಒಬ್ಬನು ತನ್ನ ಮೇಲೆ ಸಕಾರಾತ್ಮಕವಾದ ಅಥವಾ ನಕಾರಾತ್ಮಕವಾದ ಯಾವುದನ್ನಾದರೂ ಬರಮಾಡಿಕೊಳ್ಳುವದು ಎಂದರ್ಥ.[12] ಈ ಪದವನ್ನು ಯೆಹೂದ್ಯರು ಅಳವಡಿಸಿಕೊಂಡರು ಅವರಿಗೆ ತಾವು ಸಹಿಸಿಕೊಂಡಿರುವ ಸುನ್ನತಿಯ ಚಿಕ್ಕ ಶಸ್ತ್ರಚಿಕ್ಕಿತ್ಸೆಯ ಪ್ರಕ್ರಿಯೆಯನ್ನು ತಮ್ಮ ಸುನ್ನತಿಯನ್ನು ರಹಸ್ಯವಾಗಿಡಲು ಹೆಸರಿಸುವ ಪದದ ಅವಶ್ಯಕತೆಯಿತ್ತು.[13] ಕೊರಿಂಥದಲ್ಲಿರುವ ಪರಿವರ್ತನೆ ಹೊಂದಿದ ಯೆಹೂದ್ಯರು ನಿಜವಾಗಿಯೂ ಸುನ್ನತಿಯ ಗುರುತನ್ನು ಅಳಿಸಿಹಾಕಲು ಪ್ರಯತ್ನಿಸುತ್ತಿದ್ದರು ಎಂಬುದು ಅಸಂಭವನೀಯವಾಗಿದೆ; ಬಹುಶಃ ಅಪೊಸ್ತಲನು ಬರವಣಿಗೆಯಲ್ಲಿ ಈ ಮಾತನ್ನು ಹೇಳಿರಬಹುದು. ಅವನು ಸುನ್ನತಿಯು, ವಿವಾಹಿತರಾಗಿರಲಿ ಅಥವಾ ಅವಿವಾಹಿತರಾಗಿರಲಿ, ಆತ್ಮೀಕ ಪರಿಣಾಮವನ್ನು ಹೊಂದಿರುವದಿಲ್ಲ ಎಂದು ಹೇಳುತ್ತಾನೆ.

**ವಚನ 19.** ಈ ಪಠ್ಯಭಾಗದ ಗಣನೀಯವಾದ ಅಂಶವೆಂದರೆ ಪೌಲನು **ಸುನ್ನತಿಯಿದ್ದರೂ ಪ್ರಯೋಜನವಿಲ್ಲ** ಎಂಬ ಹೇಳಿಕೆಯನ್ನು **ದೇವರ ಕಟ್ಟಳೆಗಳನ್ನು ಅನುಸರಿಸಿ ನಡಯುವದೇ ಪ್ರಯೋಜನವಾಗಿದೆ** ಎಂಬುದರ ಜೊತೆಗೆ ಇಟ್ಟನು**.** ಸುನ್ನತಿಯು "ದೇವರ ಆಜ್ಞೆಗಳಲ್ಲಿ" ಒಂದಾಗಿದೆ; ಮತ್ತು ಯೆಹೂದ್ಯರಿಗೆ ಇದು ಒಂದು ಪುರಾತನವಾದ ಮತ್ತು ಅತ್ಯಂತ ಗೌರವಯುತವಾದ ಆಜ್ಞೆಯಾಗಿತ್ತು (ಆದಿಕಾಂಡ 17:9, 10; ಯೆಹೋಶುವ 5:2-5). ಅಪೊಸ್ತಲನು ನಂಬಿಕೆಯ ಮೂಲಕ ದೇವರಿಂದ ವಿಮೋಚನೆ ಎಂಬುದನ್ನು ಪ್ರದರ್ಶಿಸಲು ಹಳೆ ಒಡಂಬಡಿಕೆಯ ಅಧಿಕಾರಕ್ಕೆ ಬೇಡಿಕೊಳ್ಳಲು (ರೋಮಾ 4:3-8), ಸಭೆಯ ಅಭ್ಯಾಸವನ್ನು ಬೆಂಬಲಿಸಲು (1 ಕೊರಿಂಥ 9:9), ಅಥವಾ ನೈತಿಕ ಮೌಲ್ಯಗಳ ಅರ್ಹತೆಯನ್ನು ಸಿದ್ಧಾಂತಪಡಿಸಲು (ಗಲಾತ್ಯ 5:14) ಹಿಂಜರಿಯುವದಿಲ್ಲ. ಅದೇ ಸಮಯದಲ್ಲಿ, ಪೌಲನು ಇಸ್ರಾಯೇಲ್ಯರ ಧಾರ್ಮಿ ಸಂಪ್ರದಾಯಗಳ ಸಂಧಾನವಿಲ್ಲದ ನೈತಿಕ ಅಂಶಕ್ಕೆ ನೀಡುವ ಒತ್ತನ್ನು ಅನ್ಯಜನರಿಗೆ ಅನ್ವಯಿಸುವದಿಲ್ಲ. ಸೂಕ್ಷ್ಮಗ್ರಾಹಿಗಳಾದ ಯೆಹೂದ್ಯ ಕ್ರೈಸ್ತರು ಪೌಲನ ಬೋಧನೆಯು ವಿಶಿಷ್ಟವಾದ ಯೆಹೂದ್ಯ ಧರ್ಮದ ಜನಾಂಗೀಯ ಅಂಶಗಳನ್ನು ಆಚರಿಸುತ್ತಿಲ್ಲ ಎಂಬುದನ್ನು ಸೂಚಿಸುತ್ತವೆ.

ಯಾರು ಆತ್ಮನ ಸಾಕ್ಷಿಯನ್ನು ಒಪ್ಪಿಕೊಳ್ಳುತ್ತಾರೋ ಅವರು ತಾವು ಆಯ್ದುಕೊಳ್ಳುವ ಹಾಗೆ ಧರ್ಮಶಾಸ್ತ್ರದ ಜನಾಂಗೀಯ ಅಂಶಗಳನ್ನು ಅಭ್ಯಾಸಿಸಬಹುದು ಇಲ್ಲವೇ ಅಭ್ಯಾಸಿಸಲಿಕ್ಕಿಲ್ಲ, ಆದರೆ ಅವರು ಜನಾಂಗೀಯ ಯೆಹೂದ್ಯ ಧರ್ಮವನ್ನು ಅನ್ಯ ವಿಶ್ವಾಸಿಗಳ ಮೇಲೆ ಹೇರಬಾರದು. ಜನಾಂಗೀಯ ಅರ್ಥದಲ್ಲಿ, ಕ್ರಿಸ್ತನು "ಧರ್ಮಶಾಸ್ತ್ರದ ಕೊನೆ" ಆಗಿದ್ದಾನೆ (ರೋಮಾ 10:4). ಕ್ರೈಸ್ತ ಸಂದೇಶದ ಸಲಹೆಗಳನ್ನು ತಿರಸ್ಕರಿಸಿದ ಯೆಹೂದ್ಯರು "ಮತಾವಲಂಭಿಗಳಾಗಿದ್ದರು" (ಅ.ಕೃ 21:20) ಮತ್ತು ಅವರು ವಿಶ್ವಾಸಿಗಳಾದ ನಂತರವೂ ಫರಿಸಾಯರ ಧರ್ಮಕ್ಕೆ ಆತುಕೊಂಡಿದ್ದರು (ಅ.ಕೃ. 15:5), ಪೌಲನನ್ನು ಬೆನ್ನಟ್ಟಿದವರಿಗೆ ಕಡುವೈರಿಗಳಾಗಿದ್ದರು ಮತ್ತು ಅವನ ಬೋಧನೆಗೆ ಕೊನೆಯನ್ನು ತರಲು ಪ್ರಯತ್ನಿಸುತ್ತಿದ್ದರು. ಒಬ್ಬನು ದೇವರ ಎದುರಿನಲ್ಲಿ ನಿಲ್ಲುವಾಗ ಸುನ್ನತಿಯು ಯಾವುದೇ ರೀತಿಯಲ್ಲಿ ಪರಿಣಾಮವನ್ನು ಬೀರುವದಿಲ್ಲ ಎಂಬುದನ್ನು ಪೌಲನು ತಿಳಿದುಕೊಂಡಿದ್ದನು. ಅದು ಒಬ್ಬನ ವೈವಾಹಿಕ ಸ್ಥಿತಿಯಷ್ಟೇ ಅಸಮಂಜಸವಾಗಿದೆ. ಒಬ್ಬ ಕ್ರೈಸ್ತನು ವಿವಾಹದ ವಿಷಯದಲ್ಲಾಗಲಿ ಅಥವಾ ಜನಾಂಗೀಯ ಗುರುತಿಸುವಿಕೆಯ ವಿಷಯದಲ್ಲಾಗಲಿ ತನ್ನ ಸನ್ನಿವೇಶವನ್ನು ಬದಲಾಯಿಸಿಕೊಳ್ಳಬೇಕೆಂಬ ಒತ್ತಡವಿಲ್ಲ.

**ವಚನ 20.** ಸುನ್ನತಿಯ ವಿಷಯದಲ್ಲಿ ಆತನ ವಿಮರ್ಶೆಯನ್ನು ಒಳಗೊಂಡು, ಪೌಲನು ಹೇಳುತ್ತಾನೆ, **ದೇವರು ಕರೆದಾಗ ಪ್ರತಿಯೊಬ್ಬನು ಯಾವ ಸ್ಥಿತಿಯಲ್ಲಿ ಇದ್ದನೋ ಆ ಸ್ಥಿತಿಯಲ್ಲಿಯೇ ಇರಬೇಕು.** ಈ ವಿಚಾರವು ಸಾಮಾಜಿಕ ಮತ್ತು ವೈವಾಹಿಕ ಸ್ಥಿತಿಗೆ ಸಮನಾಗಿದೆ. ಅಪೊಸ್ತಲನು ಈ ಎಚ್ಚರಿಕೆಯನ್ನು ವಚನ 24ರಲ್ಲಿ ಪುನರಾವರ್ತಿಸುತ್ತಾನೆ. ಸುನ್ನತಿಯ ಮತ್ತು ದಾಸತ್ವದ ವಿಷಯಗಳು ಬ್ರಹ್ಮಚರ್ಯ ಮತ್ತು ವಿವಾಹದ ಕುರಿತಾದ ಪ್ರಶ್ನೆಗೆ ಪೌಲನ ಪ್ರತ್ಯುತ್ತರವನ್ನು ಸ್ಪಷ್ಟೀಕರಿಸುತ್ತವೆ ಮತ್ತು ಬೆಂಬಲಿಸುತ್ತವೆ.

**ವಚನ 21.** ಪೌಲನು ಸುನ್ನತಿ ಮತ್ತು ದಾಸತ್ವ ಎರಡನ್ನೂ ಪರಿವರ್ತನೆಯ ಸಮಯದಲ್ಲಿ ವೈವಾಹಿಕ ಜೀವಿತದಲ್ಲಿ ಯಾವ ಸ್ಥಿತಿಯಲ್ಲಿ ಇರುತ್ತಾರೋ ಆ ಸ್ಥಿತಿಯಲ್ಲೇ ಕ್ರೈಸ್ತರು ಇರಬೇಕು ಎಂದು ತನ್ನ ಎಚ್ಚರಿಕೆಯನ್ನು ಬೆಂಬಲಿಸಲು ಅರಿಕೆ ಮಾಡುತ್ತಾನೆ. ಅವನು ಹಾಗೂ, ದಾಸತ್ವವನ್ನು ಸಂಪೂರ್ಣವಾಗಿ ವಿವಾಹ ಅಥವಾ ಜನಾಂಗೀಯ ನಿಲುವಿಗೆ ಹೋಲಿಸಲಾಗುವದಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾನೆ. **ಆದರೆ, ನಾವು ಸ್ವತಂತ್ರರಾಗಿರಲು ಬಯಸುವುದಾದರೆ ಅದನ್ನೇ ಮಾಡಬೇಕು ಎಂದು ಹೇಳುತ್ತಾನೆ.**[14] ಆದುದರಿಂದ, ಅಪೊಸ್ತಲನು ದಾಸತ್ವವು ವಿಶಿಷ್ಟವಾಗಿ ವಿವಾಹಿತರು/ಅವಿವಾಹಿತರು ಅಥವಾ ಸುನ್ನತಿಯಿದ್ದವರು/ಸುನ್ನತಿಯಿಲ್ಲದವರು ಈ ಚರ್ಚೆಯಲ್ಲಿ ಸಮಾನವಾಗಿಲ್ಲ. ಮೊದಲಿನ ಎರಡು ವಿಧಗಳಲ್ಲಿ, ಆತನು ತನ್ನ ಸಹೋದರ ಮತ್ತು ಸಹೋದರಿಯರಿಗೆ ಹೇಳುತ್ತಾನೆ, ದೇವರು ಕರೆದಾಗ ಪ್ರತಿಯೊಬ್ಬನು ಯಾವ ಸ್ಥಿತಿಯಲ್ಲಿ ಇದ್ದನೋ ಆ ಸ್ಥಿತಿಯಲ್ಲಿಯೇ ಇರಬೇಕು; ಆದರೆ ಅವನು ದಾಸತ್ವದ ಆಜ್ಞೆಯನ್ನು ಮೃದುಗೊಳಿಸುತ್ತಾನೆ. **ಅದರ ಕುರಿತು ಚಿಂತಿಸಬೇಡರಿ**, ಎಂದು ಆತನು ಬರೆಯುತ್ತಾನೆ, ಇದರ ಅರ್ಥ, "ನೀವು ನಿಮ್ಮನ್ನು ಕೆರಳಿಸಲು ದಾಸತ್ವದ ಸ್ಥಿತಿಯಲ್ಲಿಯೇ ಇರುವದನ್ನು ಅನುಮತಿಸಬೇಡಿರಿ." ನಿಮ್ಮನ್ನು ನೀವು ಕೀಳಿರಿಮೆಯಲ್ಲಿ ಅಡಗಿಸಿಕೊಳ್ಳಬೇಡಿರಿ.

ಇಲ್ಲಿಯವರೆಗೆ ದಾಸರಿಗೆ ಪೌಲನ ಸೂಚನೆಗಳು ವಿವಾಹಿತರಿಗೆ ಇರುವ ಸೂಚನೆಗಳೊಂದಿಗೆ ಸಮಾನಾಂತರದಲ್ಲಿದೆ, ಅದು ಹಾಸ್ಯೋಕ್ತಿಯೊಂದಿಗೆ ಕೂಡಿದೆ.

ಗ್ರಿಕೋ ರೋಮನ್ ಲೋಕದಲ್ಲಿ ದಾಸರಿಗೆ ವಿವಾಹವಾಗುವ ಅನುಮತಿ ಇರಲಿಲ್ಲ. ದಾಸರ ದೇಹದ ದೂಷಣೆ ಅಥವಾ ಇಲ್ಲದೇ ಇರುವದು ಅವರ ಯಜಮನಾನರ ತಿಳುವಳಿಕೆಗೆ ಬಿಟ್ಟದ್ದು. Cato ಎಂಬ ಒಬ್ಬ ರೋಮನ್ ಸಭ್ಯ ಒಕ್ಕಲಿಗನು, ಕೆಳಗಿನ ಸಲಹೆಯನ್ನು ನೀಡುತ್ತಾನೆ: "ವಯಸ್ಸಾದ ಎತ್ತನ್ನು, ರೋಗಸ್ಥನಾದ ದಾಸನನ್ನು ಮತ್ತು ಯಾವುದೇ ಹುರುಳಿಲ್ಲದ್ದನ್ನು ಮಾರಬೇಕು."[15] Cato ಅವರ ಅಂದಾಜಿನಲ್ಲಿ ದಾಸರಿಗೆ ಕರುಣೆ ಭಾವಾತಿರೇಕವುಳ್ಳದ್ದಾಗಿದೆ. ಮುದುಕನಾದ ದಾಸನನ್ನು ಅಥವಾ ಎತ್ತನ್ನು ಇಟ್ಟುಕೊಳ್ಳುವದು ವ್ಯವಹಾರದಲ್ಲಿ ಬಲಹೀನವಾದ ನಿರ್ಧಾರವಾಗಿದೆ. ಅಧಿಕೃತವಾಗಿ ಸಮಾಜವು ಮನುಷ್ಯನನ್ನು ಕೆಳ-ಮಾನವ ಎಂದು ಪರಿಗಣಿಸಲಾಗುತ್ತದೆ. ಕ್ರಿಸ್ತನಲ್ಲಿ, ಒಬ್ಬನು ದಾಸನಾಗಲಿ ಅಥವಾ ಸ್ವತಂತ್ರನಾಗಲಿ, ಸುನ್ನತಿಯಿದ್ದವನಾಗಲಿ ಅಥವಾ ಸುನ್ನತಿಯಿಲ್ಲದವನಾಗಲಿ, ವಿವಾಹಿತನಾಗಲಿ ಅಥವಾ ಅವಿವಾಹಿತನಾಗಲಿ ಯಾವ ವ್ಯತ್ಯಾಸವಿಲ್ಲ.

**ವಚನ 22.** ಪೌಲನು ಬಹಳ ಮಟ್ಟಿಗೆ ಕ್ರೈಸ್ತರು ಹೊರಗಿನ ತೋರಿಕೆಯ, ಲೌಕಿಕ ಪರಿಸ್ಥಿತಿಯನ್ನು ಸ್ವೀಕರಿಸುವ ರೀತಿಯನ್ನು ಸ್ಪಷ್ಟೀಕರಿಸುವದಕ್ಕೆ ಸುನ್ನತಿ ಮತ್ತು ದಾಸತ್ವವನ್ನು ಉಪಯೋಗಿಸಿರಬಹುದು ಯಾಕಂದರೆ ದಾಸತ್ವ ಮತ್ತು ಯೆಹೂದ್ಯರು ಕೊರಿಂಥದ ಸಭೆಯನ್ನು ಉತ್ತಮವಾಗಿ ಪ್ರತಿನಿಧಿಸುತ್ತಾರೆ. ಹೊರಗಿನ ತೋರಿಕೆಯ ಮಾರ್ಗಗಳನ್ನು ಬಿಟ್ಟು ಒಬ್ಬನ ನಿರೀಕ್ಷೆ ಮತ್ತು ದೇವರೊಂದಿಗೆ ಮೆಚ್ಚಿಕೆಯಾಗಿರುವ ಸ್ಥಿತಿಯ ಎರಡೂ ಯೋಗ್ಯವಾಗಿದ್ದಲ್ಲಿ ಯಾವುದೇ ರೀತಿಯ ಹೊರಗಿನ ಸ್ಥಿತಿ ಸಹಿಸಿಕೊಳ್ಳಬಹುದಾದ್ದದಾಗಿದೆ. ಇದು ವಿಷಯವನ್ನು ಯಾವಾಗ ಜನಾಂಗೀಯ ಸ್ಥಿತಿಯನ್ನು ಸುನ್ನತಿಯಿಂದ ಗುರುತಿಸಬಹುದಾಗಿದೆಯೋ ಅದು ದಾಸತ್ವವನ್ನು ಗುರುತಿಸುವದು ಸಹಜವಾಗಿದೆ. ಗ್ರೀಕೋ ರೋಮನ್ ಸಮಾಜದಲ್ಲಿ ದಾಸತ್ವವು ದೃಢವಾಗಿ ಬೇರೂರಿದೆ. ಅಪೊಸ್ತಲನು ಅದರ ಬಲೆಗೆ ಬಿದ್ದವರು ಕೇವಲ **ಕ್ರೈಸ್ತ ದಾಸನು ಕರ್ತನ ಮೂಲಕ ಬಿಡುಗಡೆಹೊಂದಿರುವ ಸ್ವತಂತ್ರನು ಮತ್ತು ಸ್ವತಂತ್ರನಾಗಿದ್ದವನು . . . ಕ್ರಿಸ್ತನಿಗೆ ದಾಸನು.** ಈ ಪರಿಗಣಿಸುವಿಕೆಯು ಲೌಕಿಕ ಜೀವಿತವನ್ನು ಸರಳವಾಗಿ ಮಾಡುವದಿಲ್ಲ, ಆದರೆ ಇದು ಸಧ್ಯದ ಕಷ್ಟಾನುಭವದ ನ್ಯಾಯತೀರ್ಪಿನ ಮತ್ತು ನಿತ್ಯತ್ವದ ಚೌಕಟ್ಟಿನಲ್ಲಿ ಸರಳವಾಗಿ ತೋರಿಬರುತ್ತದೆ.

**ವಚನ 23.** ಕ್ರಿಸ್ತನ ಜಾಗತೀಕ ಅರಿಕೆ, ದಾಸನಾಗಲಿ ಅಥವಾ ಸ್ವತಂತ್ರನಾಗಲಿ ಎಲ್ಲಾ ಮನುಷ್ಯರಿಗೆ ಅವನು ದೃಢಪಡಿಸಿದ ಸ್ಥಾನ, ಬಹಳ ಸ್ಪಷ್ಟವಾಗಿಲ್ಲ, ಪೌಲನು ಬಹಳ ಸ್ಪಷ್ಟವಾಗಿಸಿದ್ದಾನೆ. ಎಲ್ಲಾ ಕ್ರೈಸ್ತರು, ದಾಸರಾಗಿರಲಿ ಅಥವಾ ಸ್ವತಂತ್ರರಾಗಿರಲಿ ಕ್ರಿಸ್ತನು ಕ್ರೂಜೆಯ ಮೇಲೆ ಮರಣಹೊಂದಿದಾಗ **ಕ್ರಯಕ್ಕೆ ಕೊಳ್ಳಲ್ಪಟ್ಟಿದ್ದಾರೆ**. ವಿಶ್ವದ ಅಳತೆಗೋಲಿನಲ್ಲಿ, ಕ್ರಿಸ್ತನ ಕುರಿತು ಅರಿಕೆ ಮಾಡುವದು ಶ್ರೇಷ್ಟ ಸಮಾನತೆಯಾಗಿದೆ. ಕೆಲವು ವಿಷಯದಲ್ಲಿ, ದಾಸನು ಆರ್ಥಿಕ ಸ್ಥಿತಿಯಲ್ಲಿ ತನ್ನ ಸ್ವಂತ್ರ ಸಹಪಾಟಿಗಿಂತ ಹೆಚ್ಚು ಸುರಕ್ಷಿತನಾಗಿರಬಹುದು,[16] ಆದರೆ ಮಾನವ ನಿಯಮಗಳ ದೃಷ್ಟಿಕೋನದಲ್ಲಿ ಅಥವಾ ಆತ್ಮೀಕ ದೃಷ್ಟಿಕೋನದ ಶಾರೀರಿಕ ತೊಡಗಿಸುವಿಕೆಯಲ್ಲಿ ಪರಿಗಣಿಸಲ್ಪಟ್ಟಿದ್ದರು ಅಪೊಸ್ತಲನ ಸಲಹೆ, **ಮನುಷ್ಯರಿಗೆ ದಾಸರಾಗಬೇಡಿರಿ**. ಯಾರು ದಾಸರಾಗಿರುವ ತಮ್ಮ ಸ್ಥಿತಿಯನ್ನು ಬದಲಾಯಿಸಿಕೊಳ್ಳಲಾರರೋ ಅವರು ತಮ್ಮ ಜೀವಿತದ ಸ್ಥಿತಿಯ ಕುರಿತು ದುಃಖಿಸಬಾರದು

ಉತ್ತಮವಾಗಿ ಕಾರ್ಯವನ್ನು ಮಾಡಬೇಕು. ಹೀಗೆ ಮಾಡುವದು ಲೋಕದ ಮೌಲ್ಯಗಳಿಗೆ ದಾಸರಾಗಿರುವದಕ್ಕೆ ಸಮಾನವಾಗಿದೆ. ಪೌಲನು ಲೌಕಿಕ ಮೌಲ್ಯಗಳಿಗೆ ದಾಸರಾಗಿರುವದರ ಮೂಲಕ "ದಾಸರಾಗಿರಬೇಡಿರಿ" ಎಂದು ಅವರನ್ನು ಎಚ್ಚರಿಸುತ್ತಾನೆ. ದೇವರು ದಾಸರನ್ನು ಮತ್ತು ಸ್ವತಂತ್ರರನ್ನು ತನ್ನ ರಕ್ತದಿಂದ ಕೊಂಡುಕೊಂಡಿದ್ದಾನೆ ಎಂಬ ತಿಳುವಳಿಕೆ ಅವರಿಗೆ ಸಾಕು.

**ವಚನ 24.** ಅಪೊಸ್ತಲನು ತನ್ನ ಬೋಧನೆಯ ವಿಚಾರಗಳನ್ನು 7:20ರಲ್ಲಿ ಪುನರಾವರ್ತಿಸುವದರ ಮೂಲಕ ಸಂಕ್ಷಿಪ್ತಗೊಳಿಸುತ್ತಾನೆ. **ಪ್ರತಿಯೊಬ್ಬನು ಕರೆಯಲ್ಪಟ್ಟಾಗ ಯಾವ ಸ್ಥಿತಿಯಲ್ಲಿದ್ದನೋ ಅದೇ ಸ್ಥಿತಿಯಲ್ಲಿ ದೇವರ ಮುಂದೆ ಇದ್ದು ಕೊಂಡಿರಲಿ** ಅಂದರೆ ಕ್ರೈಸ್ತರು ವಿವಾಹ ಮತ್ತು ಅದರಲ್ಲಿ ಇರುವ ಕಟ್ಟುಪಾಡುಗಳನ್ನು ಗೌರವಿಸಬೇಕು ಎಂದರ್ಥ. ಕ್ರೈಸ್ತನಾಗಿರಲು ದೇಶೀಯ ಗೋಳದಲ್ಲಿ ಯಾವುದೇ ಬದಲಾವಣೆಗಳು ಆವಶ್ಯಕವಿಲ್ಲ. ಬದಲಿಗೆ, ಕ್ರೈಸ್ತ ಧರ್ಮ ಕುಂಟುಂಬಗಳನ್ನು ಹೆಚ್ಚು ಸ್ಥಿರಗೊಳಿಸುತ್ತದೆ.

## ಕೊರಿಂಥದಲ್ಲಿರುವ ಕ್ರೈಸ್ತರಿಗೆ ಸೂಚನೆಗಳು (7:25-40)

ಕೊರಿಂಥದ ಕ್ರೈಸ್ತರಿಗೆ ಪೌಲನು ಬರೆದ ಪತ್ರ ಹಾಗೂ, ಲೇಖಕರ ಪ್ರವೃತ್ತಿ ಎಂದು ಸಂಗತಿಗಳನ್ನು ಅಂದಗೊಳಿಸಿ ಅಲಂಕಾರಿಕ ಭಾಷೆಯನ್ನು ಬರವಣಿಗೆಯಲ್ಲಿ ಬಳಿಸುವದನ್ನು ಪರಿಗಣಿಸುತ್ತಾರೆ ಇದು ಹಿಂದಿನ ವಿಗ್ರಹಾರಾಧಕರು ಕ್ರೈಸ್ತರ ತತ್ವಗಳನ್ನು ತಮ್ಮ ಜೀವಿತದಲ್ಲಿ ಸೇರಿಸಿಕೊಳ್ಳುವಾಗ ಈ ಗಲಭೆಯನ್ನು ಎದುರಿಸುತ್ತಾರೆ. ಗ್ರೀಕೋ ರೋಮನ್ ಲೋಕದಲ್ಲಿ, ನೈತಿಕತೆ, ಮನೆಗಳು, ಪಾಲಕರು ಮತ್ತು ವೈವಾಹಿಕ ಸಂಬಂಧಗಳೇ ಬದಲಾವಣೆಯ ಹಂತದಲ್ಲಿದ್ದವು. ವೇಶ್ಯಾವೃತ್ತಿ, ಗರ್ಭಪಾತ, ಭ್ರಮೆಯಲ್ಲಿ ಸಾಯುವದಕ್ಕೆ ಬಹಿರಂಗಪಡಿಸಿಕೊಳ್ಳುವದು, ವಿಚ್ಛೇದನ, ಅತೀಯಾದ ಬಡತನ ಮತ್ತು ದಾಸತ್ವ ಈ ವಿಷಯಗಳು ನೇರವಾಗಿ ಕುಟುಂಬಗಳ ಮೇಲೆ ಪರಿಣಾಮ ಬೀರಿದವು. ಕ್ರೈಸ್ತರಾಗುವದಕ್ಕೆ ವರ್ತನೆಯಲ್ಲಿ ಬದಲಾವಣೆ ಅಗತ್ಯವಾಗಿತ್ತು, ಆದರೆ ಎಷ್ಟರಮಟ್ಟಿಗೆ? ಒಬ್ಬನು ಎಲ್ಲಿಂದ ಪ್ರಾರಂಭಿಸಬೇಕು?

ಪೌಲನಿಗೆ ನೇರವಾಗಿ ಕರ್ತನಿಂದ ಉಲ್ಲೇಖ ದೊರೆತಾಗ, ಆತನು ಅದನ್ನು ಉಪಯೋಗಿಸಿದನು (7:10); ಅವನು ಉಪಯೋಗಿಸದೇ ಹೋದಾಗ, ಅವನು ಆತ್ಮನ ಮಾರ್ಗದರ್ಶನವನ್ನು ಅವಲಂಭಿಸಿದನು ಮತ್ತು ಪ್ರಸ್ತುತ ಸನ್ನಿವೇಶಕ್ಕೆ ಅನ್ವಯಿಸುವ ನೂತನ ಸೂಚನೆಗಳನ್ನು ನೀಡಿದನು. ಅಪೊಸ್ತಲನು ವಿಗ್ರಹಗಳ ವಿಚಾರ ಮತ್ತು ಕೆಲವೊಂದು ತತ್ವಗಳನ್ನು ಕೆಳಗೆಹಾಕುವದರ ಮೂಲಕ ಅಭ್ಯಾಸವನ್ನು ನೇರವಾಗಿ ನಿರ್ವಹಿಸಿದನು. ಅವರ ವೈವಾಹಿಕ ಸ್ಥಿತಿಯನ್ನು ಪರಿಗಣಿಸಿ, ಕ್ರೈಸ್ತರು ತಾವು ಹೇಗಿದ್ದಾರೋ ಹಾಗೆಯೇ ಇರಬೇಕು ಎಂದು ಹೇಳಿದನು (7:20). ದಂಪತಿಗಳು ತಮ್ಮ ಮೇಲೆ ಲೈಂಗೀಕವಾಗಿ ದೂರವಿರುವದನ್ನು ಹೇರಬಾರದು. ಒಬ್ಬ ಕ್ರೈಸ್ತನು ಅವಿಶ್ವಾಸಿಯನ್ನು ಮದುವೆಯಾಗುವಾಗ, ಕ್ರೈಸ್ತನು ವಿವಾಹವನ್ನು ನಿರ್ವಹಿಸಬೇಕು.

ಅಪೊಸ್ತಲನು ಮುಂದೆ ತನ್ನ ಗಮನವನ್ನು ವಿವಾಹಿತರೆಡೆಗೆ ತಿರುಗಿಸುತ್ತಾನೆ. ಅವನ ಉದ್ದೇಶ ಸಂಭಾಷಣೆಯ ರೂಪದ "ನೀವು ಹೀಗೆ ಮಾಡಬೇಕು" ಅಥವಾ "ನೀವು ಹೀಗೆ ಮಾಡಬಾರದು" ಎಂಬ ಆಜ್ಞೆಗಳನ್ನು ನೀಡಲಿಲ್ಲ. ಬದಲಾಗಿ ಅವನು 7:26ರಲ್ಲಿ ಸಲಹೆಯನ್ನು

ನೀಡುತ್ತಾನೆ ಮತ್ತು 7:28ರಲ್ಲಿ ವೈವಿಧತೆಯನ್ನು ಅನುಮತಿಸುತ್ತಾನೆ.

ಪೌಲನು ತನಗೆ ಕೊರಿಂಥದವರಿಂದ ಕಳುಹಿಸಲ್ಪಟ್ಟ ಪ್ರಶ್ನೆಗಳಿಗೆ ಉತ್ತರಿಸುತ್ತಿರುವ ಹಾಗೆ, ಅವನು ವಿವಾಹದಲ್ಲಿ ಲೈಂಗೀಕ ಸಂಬಂಧದಕ್ಕಿಂತ ದೂರವಿರುವದು ದೇವರಿಗೆ ಅಷ್ಟೊಂದು ಮೆಚ್ಚಿಕೆಯಾಗಿಲ್ಲ ಎಂಬುದನ್ನು ಅಲ್ಲಗಳೆಯುತ್ತಾನೆ, ಮತ್ತು ಪ್ರತಿಯೊಬ್ಬ ಕ್ರೈಸ್ತನಿಗೆ ಕ್ರಿಸ್ತನು ಅವರನ್ನು ಕರೆದಾಗ ಅವನು ಅವಳು ಇದ್ದ ವೈವಾಹಿಕ ಸ್ಥಿತಿಯಲ್ಲಿಯೇ ಇರಬೇಕು ಎಂದು ಸಲಹೆಯನ್ನು ನೀಡುತ್ತಾನೆ. ಅವನು ಈ ವಿಚಾರದ ಕುರಿತು ಮುಂದಿನ ಭಾಗದಲ್ಲಿ ವಿವರಿಸುತ್ತಾನೆ.

## "ನೀವು ಇದ್ದ ಹಾಗೆ ಇರ್ರಿ" (7:25-31)

**[25]ಕನ್ನಿಕೆಯರನ್ನು ಕುರಿತು ಕರ್ತನಿಂದ ಬಂದ ಆಜ್ಞೆ ನನಗೆ ಯಾವದೂ ಇಲ್ಲ; ಆದರೆ ನಂಬಿಗಸ್ತನಾಗಿರುವದಕ್ಕೆ ಕರ್ತನಿಂದ ಕರುಣೆಯನ್ನು ಹೊಂದಿದವನಾಗಿ ನನ್ನ ಅಭಿಪ್ರಾಯವನ್ನು ಹೇಳುತ್ತೇನೆ. [26]ಈಗಿನ ಕಷ್ಟಕಾಲದ ನಿಮಿತ್ತ ಜನರು ಇದ್ದ ಹಾಗೆ ಇರುವದು ಒಳ್ಳೇದೆಂದು ಭಾವಿಸುತ್ತೇನೆ. [27]ಹೆಂಡತಿಯನ್ನು ಕಟ್ಟಿಕೊಂಡಿದ್ದೀಯೋ? ಬಿಡುಗಡೆಯಾಗುವದಕ್ಕೆ ಪ್ರಯತ್ನಿಸಬೇಡ. ಹೆಂಡತಿಯನ್ನು ಕಟ್ಟಿಲ್ಲವನಾಗಿದ್ದೀಯೋ? ಹೆಂಡತಿಯನ್ನು ದೊರೆಕಿಸಿಕೊಳ್ಳುವದಕ್ಕೆ ಪ್ರಯತ್ನಿಸಬೇಡ. [28]ಒಂದುವೇಳೆ ನೀನು ಮದುವೆ ಮಾಡಿಕೊಂಡರೂ ಪಾಪವಿಲ್ಲ. ಕನ್ನಿಕೆಯು ಮದುವೆಮಾಡಿಕೊಂಡರೂ ಪಾಪವಿಲ್ಲ, ಆದರೆ ಮದುವೆ ಮಾಡಿಕೊಂಡವರಿಗೆ ಶರೀರಸಂಬಂಧವಾಗಿ ಕಷ್ಟ ಸಂಭವಿಸುವದು; ಇದು ನಿಮಗೆ ಉಂಟಾಗಬಾರದೆಂದು ನನ್ನ ಅಪೇಕ್ಷೆ, [29]ಸಹೋದರರೇ, ನಾನು ಹೇಳುವದೇನಂದರೆ - ಸಮಯವು ಸಂಕೋಚವಾದದ್ದರಿಂದ ಇನ್ನು ಮೇಲೆ ಹೆಂಡತಿಯುಳ್ಳವರು ಹೆಂಡತಿ ಯಿಲ್ಲದವರಂತೆಯೂ, ಅಳುವವರು ಅಳದವರಂತೆಯೂ, [30]ಸಂತೋಷಪಡುವವರು ಸಂತೋಷಪಡದವರಂತೆಯೂ, ಕೊಂಡುಕೊಳ್ಳುವವರೂ ಕೊಂಡದ್ದು ತಮ್ಮದೇ ಎಂದು ಹೇಳದವರಂತೆಯೂ, [31]ಲೋಕವನ್ನು ಅನುಭೋಗಿಸುವವರು ಅದನ್ನು ಪರಿಪೂರ್ಣವಾಗಿ ಅನುಭೋಗಿಸದವರಂತೆಯೂ ಇರಬೇಕು. ಯಾಕಂದರೆ ಈ ಪ್ರಪಂಚದ ತೋರಿಕೆಯು ಗತಿಸಿಹೋಗುತ್ತಾ ಅದೆ.**

**ವಚನ 25. ಕುರಿತು** ಎಂಬ ವಾಕ್ಯಾಂಗವು (περὶ δὲ, *peri de*) ಈಗ ಸಾಮಾನ್ಯವಾಗಿ ಕೊರಿಂಥದಲ್ಲಿರುವ ಕ್ರೈಸ್ತರು ಕೇಳಿದ ಪ್ರಶ್ನೆಗಳಿಗೆ ಪೌಲನ ಪ್ರತಿಕ್ರಿಯೆಯನ್ನು ಪರಿಚಯಿಸುವಂತದ್ದಾಗಿದೆ (7:1; 8:1; 12:1; 16:1), ಆದರೆ ಈ ವಿಷಯದಲ್ಲಿ ಪದಗಳು ಕೇವಲ ಗಮನವನ್ನು ಒತ್ತು ನೀಡುವದರ ಮೇಲೆ ಸ್ಥಳಾಂತರಿಸುತ್ತವೆ. ಸಭೆಯಿಂದ ಬಂದ ಪ್ರಶ್ನೆ ಬಹುಶಃ ಒಂದಕ್ಕಿಂತ ಹೆಚ್ಚು ಭಾಗಗಳನ್ನು ಹೊಂದಿರಬಹುದು, ಆದರೆ ಸಾಮಾನ್ಯವಾದ ಕಳಕಳಿ ಒಂದೇ ಆಗಿದೆ: ಕ್ರೈಸ್ತರಾಗಿರುವದು ಲೈಂಗೀಕತೆ ಮತ್ತು ವಿವಾಹದ ಕುರಿತಾಗಿ ಸ್ವೀಕರಿಸಲ್ಪಟ್ಟ ವಿಚಾರಗಳನ್ನು ತಿರಸ್ಕರಿಸುವದಾಗಿದೆಯೋ? ಪೌಲನು 7:17ರಲ್ಲಿ ತಾನು ಪ್ರಾರಂಭಿಸಿದ ಮುಖ್ಯ ವಿಷಯವನ್ನು ಗಮನದಲ್ಲಿ ಇಟ್ಟುಕೊಂಡು ". . . ಒಬ್ಬ ಮನುಷ್ಯನಿಗೆ ತಾನು ಇದ್ದ ಸ್ಥಿತಿಯಲ್ಲಿಯೇ ಇರುವದು ಉತ್ತಮ" ಎಂದು ಹೇಳುತ್ತಾನೆ (7:26).

ಗ್ರೀಕೋ ರೋಮನ್ ಲೋಕದಲ್ಲಿ, "ಕನ್ನಿಕೆಯು" ನಮ್ಮ ಸಮಯದಲ್ಲಿದ್ದಂತೆ,

ಸಾಮಾನ್ಯವಾಗಿ ಪುರುಷನೊಂದಿಗೆ ಆತ್ಮೀಯ ಸಂಬಂಧವನ್ನು ಹೊಂದದೇ ಇರುವ ಒಬ್ಬ ಯೌವನಸ್ಥ ಸ್ತ್ರೀಗೆ ಉಲ್ಲೇಖವಾಗಿದ್ದಾಳೆ, ಪುರುಷ ಪ್ರಧಾನ ಸಂಸ್ಕೃತಿಯು ಬೀರುವ ನಕಾರಾತ್ಮಕ ಪರಿಣಾಮಗಳು ನಮ್ಮ ಪ್ರಸ್ತುತ ಅಧ್ಯಯನದ ಕಾರ್ಯವ್ಯಾಪ್ತಿಯ ಮೇಲೆಯಲ್ಲಿ ಬರುವದಿಲ್ಲ. ಜೈವಿಕವಾಗಿ ಮತ್ತು ಸಂಸ್ಕೃತಿಕ ವಿಷಯಗಳು ಬಾಹ್ಯರೂಪದಲ್ಲಿ ಶೀರ್ಷವಾಗಿ ತೋರಿಬರುತ್ತವೆ.

ದೇವದೂತನು ಮರಿಯಳಿಗೆ ಕಾಣಿಸಿಕೊಂಡಾಗ, ಅವಳು "ಕನ್ನಿಕೆ" ಎಂದು ಗುರುತಿಸಲ್ಪಟ್ಟಳು (ಲೂಕ 1:27). ಕಥೆಯಲ್ಲಿ ಇದಕ್ಕೆ ಸಂಬಂಧಿಸಿದ ಯಾವ ಹೇಳಿಕೆಯೂ ಯೋಸೆಫನ ವಿಷಯದಲ್ಲಿ ಹೇಳಲಾಗಿಲ್ಲ (ನೋಡಿರಿ ಮತ್ತಾಯ 1:20-25). ಗ್ರೀಕ್ ದಂತಕಥೆಯಲ್ಲಿ ಮೂರು ದೇವತೆಗಳು Artemis, Athena, and Hestia. ಕನ್ನಿಕೆಯಾಗಿದ್ದರು, ಗೀಕ್‌ರ ಸರ್ವದೇವಮಂದಿರದಲ್ಲಿ ಇದಕ್ಕೆ ಸಂಬಂಧಿಸಿದ ಯಾವ ಕನ್ನಿಕೆಯಾಗಿರುವ ದೇವರುಗಳಿಲ್ಲ. ಅಂಶವನ್ನು ಕೊನೆಯಿಲ್ಲದಂತೆ ಸ್ಪಷ್ಟೀಕರಿಸಬಹುದು. ವಿರಳವಾಗಿ, **ಕನ್ನಿಕೆ** ಎಂಬ ಪದವು ಪುರುಷ ಮತ್ತು ಸ್ತ್ರೀ ಇಬ್ಬರನ್ನೂ ಒಳಗೊಂಡಿದೆ (ಪ್ರಕಟನೆ 14:4; KJV) ಆದರೆ ಪೌಲನು 7:25ರಲ್ಲಿ "ಕನ್ನಿಕೆಯರ ಕುರಿತು" ಬರೆಯುವಾಗ ಅವನು ಅವಿವಾಹಿತರು ಲೈಂಗೀಕವಾಗಿ ಚಟುವಟಿಕೆಯಿಲ್ಲದವರ ಕುರಿತು ಬರೆಯುತ್ತಿದ್ದಾನೆ (7:28, 36).[17]

ಕನ್ನಿಕೆಯರ ಕುರಿತು ಪೌಲನ ಕಳಕಳಿ ಅಮೂರ್ತವಾಗಿಲ್ಲ; ಅದು ವಿವಾಹದ ಸನ್ನಿವೇಶದೊಳಗೆ ಇದೆ. ಅವನು ಕ್ರೈಸ್ತ ವಿವಾಹದ ಪವಿತ್ರತೆಯ ಕುರಿತು ಪುರುಷ ಮತ್ತು ಸ್ತ್ರೀ ಇಬ್ಬರನ್ನೂ ಸಂಬೋಧಿಸುತ್ತಿದ್ದಾನೆ.

ವಿವಾಹಿತರಿಗೆ, ಪೌಲನು ಸಮಂಜಸವಾದ ಬೋಧನೆಯನ್ನು ಕರ್ತನಿಂದ ಮೊದಲು ಆಲಿಸಿದವರು ಹೇಳಿರುವದನ್ನು ತಿಳಿಸುತ್ತಾನೆ (7:10). ಅವನಿಗೆ ಇದಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ **ಕರ್ತನ ಆಜ್ಞೆ** ವಿವಾಹವಾಗಲು ಪ್ರಯತ್ನಿಸುತ್ತಿರುವ ಯಾವ ಯೌವನಸ್ಥ ಪುರುಷ ಮತ್ತು ಸ್ತ್ರೀಗೆ ಇಲ್ಲ, ಆದರೆ ಅಪೊಸ್ತಲನಾಗಿ ಅವನ ನಿಯೋಜನೆ ಅವನು ಹೆಚ್ಚಿನ ಪ್ರಕಟನೆಯನ್ನು ನೀಡುತ್ತೇನೆ ಎಂದು ಪ್ರಕಟಿಸುತ್ತಾನೆ. ಅಪೊಸ್ತಲನು ಇದನ್ನು ಸೇರಿಸುವಾಗ, **ನನ್ನ ಅಭಿಪ್ರಾಯವನ್ನು ಹೇಳುತ್ತೇನೆ** ಎಂದು ಹೇಳುತ್ತಾನೆ, ಅವನು ತನ್ನ ಸಲಹೆಗಳನ್ನು ಅಲಕ್ಷ ಮಾಡಿರಿ ಎಂದು ಅನುಮತಿಸುತ್ತಿಲ್ಲ. ಅವನು ಎರಡು ತತ್ವಗಳಿಗೆ ದೈವೀಕ ಅಧಿಕಾರವನ್ನು ಪ್ರಕಟಿಸುತ್ತಾನೆ: (1) ವಿವಾಹಿತ ದಂಪತಿಗಳ ಮಧ್ಯದಲ್ಲಿ ದೇವರು ಲೈಂಗೀಕ ಸಂಬಂಧವನ್ನು ಅನುಮತಿಸುತ್ತಾನೆ, ಮತ್ತು (2) ವಿವಾಹವು ಜೀವನದುದ್ದಕ್ಕೂ ಇರುವ ವಚನಬದ್ದತೆಯಾಗಿದೆ. ಅದರಿಂದಾಚೆಗೆ, ಅಪೊಸ್ತಲನು **ನಂಬಿಗಸ್ತನಾಗಿರುವದಕ್ಕೆ ಕರ್ತನಿಂದ ಕರುಣೆಯನ್ನು ಹೊಂದಿದವನಾಗಿ** ಮಾರ್ಗದರ್ಶನ ನೀಡುತ್ತಾನೆ (ನೋಡಿರಿ 7:40).

**ವಚನ 26.** ವಿವಾಹದ ಕುರಿತು ಪೌಲು ಏನು ಹೇಳಿದ್ದಾನೋ ಅದು ಸಾಮಾನ್ಯವಾಗಿ ವಿವಾಹವಾಗಲು ಪ್ರಯತ್ನಿಸುತ್ತಿರುವ ಎಲ್ಲರಿಗೂ ಸಮಾನವಾಗಿ ಅನ್ವಯಿಸುತ್ತದೆ. **ಈಗಿನ ಕಷ್ಟ ಕಾಲವನ್ನು** ದೃಷ್ಟಿಯಲ್ಲಿಟ್ಟುಕೊಂಡು ಅಪೊಸ್ತಲನು, ವಿವಾಹವಾಗದೇ ಇರುವವನು ವಿವಾಹವಾಗದೇ ತಾನು ಇದ್ದ ಸ್ಥಿತಿಯಲ್ಲಿಯೇ ಇರುವದು ಉತ್ತಮ. "ಈಗಿನ ಕಷ್ಟ ಕಾಲ" ಕೊರಿಂಥದವರ ಮೇಲೆ ಪರಿಣಾಮ ಬೀರುತಿತ್ತು ಎಂಬುದನ್ನು ಅಪೊಸ್ತಲನು ಹೇಳುವದಿಲ್ಲ.

ಅಂತರಂಗದ ಗಲಭೆ ಮತ್ತು ವಿರೋಧ ಕೊರಿಂಥದವರಿಗೆ ಸ್ವಯಂ-ಸಾಕ್ಷಿಯಾಗಿದ್ದವು. ವಿವರಣೆಯ ಅವಶ್ಯಕತೆಯಿಲ್ಲ.

**ವಚನ 27.** ಅವಿವಾಹಿತರಿಗೆ ಪೌಲನ ಎಚ್ಚರಿಕೆ, ವಿಶ್ವಾಸಿಗಳನ್ನು ಕರೆದಾಗ ಅವರು ಯಾವ ಸ್ಥಿತಿಯಲ್ಲಿ ಇರುತ್ತಾರೋ ಅದೇ ಸ್ಥಿತಿಯಲ್ಲಿ ಉಳಿಯುವದು ಎಂಬುದು ಆತನ ಸಾಮಾನ್ಯ ಅಂಶಕ್ಕೆ ಸರಿಹೊಂದುತ್ತದೆ. ಪುರುಷನು ಅಥವಾ ಸ್ತ್ರೀ ವಿವಾಹಿತರಾದ ಮೇಲೆ ಕ್ರೈಸ್ತರಾದರೆ ವಿವಾಹಿತರಾಗಿಯೇ ಉಳಿಯಬೇಕು **ಮತ್ತು ಬಿಡುಗಡೆಯಾಗುವದಕ್ಕೆ ಪ್ರಯತ್ನಿಸಬೇಡ. ಹೆಂಡತಿಯಿಂದ ಬಿಡುಗಡೆಹೊಂದಿದ ವಿಶ್ವಾಸಿಗಳು** ಎಂದಿಗೂ ವಿವಾಹವಾಗದೇ ಇರುವವರೊಂದಿಗೆ, ಸಂಗಾತಿಯನ್ನು ಕಳೆದು ಕೊಂಡವರೊಂದಿಗೆ ಮತ್ತು ವಿಚ್ಛೇದನ ಹೊಂದಿದವರೊಂದಿಗೆ ಸೇರಿಕೊಳ್ಳುತ್ತಾರೆ. "ಈಗಿನ ಕಷ್ಟ ಕಾಲವನ್ನು ದೃಷ್ಟಿಯಲ್ಲಿಟ್ಟುಕೊಂಡು" ಅವರು ವಿವಾಹವಾಗದೇ ಇರುವದು ಅವರಿಗೆ ಜಾಣತನವಾಗಿದೆ. ಪುರುಷರು ಸಾಮಾನ್ಯವಾಗಿ ವಿವಾಹವಾಗಲು ಮುಂದಾಗುತ್ತಾರೆ, ಆದರೆ ಅಪೊಸ್ತಲನು ಪುರುಷರಿಗೆ ಏನು ಹೇಳುತ್ತಾನೋ ಅದು ಸ್ತ್ರೀಯರಿಗೂ ಅನ್ವಯವಾಗುತ್ತದೆ.

**ವಚನ 28.** ಪೌಲನ "ಅಭಿಪ್ರಾಯದಲ್ಲಿ" ಅಧಿಕಾರದ ಹಂತ (7:25) ಅವನು ಮುಂದುವರೆಯುತ್ತಿರುವ ಹಾಗೆ ಸ್ಪಷ್ಟವಾಗುತ್ತದೆ; ಇದು ನಿಯಮವಲ್ಲ. ಅವನನ್ನು ಕರ್ತನು ನಂಬಿಕೆಗೆ ಅರ್ಹನೆಂದು ಎಣಿಸಿದ್ದಾಗ್ಯೂ ಅವನ ಶಿಫಾರಸ್ಸನ್ನು ಕೆಲವರು ಆಯ್ಕೆ ಮಾಡಿಕೊಳ್ಳುವ ಸಾಧ್ಯತೆಯಿಲ್ಲ ಎಂಬುದನ್ನು ಆತನು ಸ್ವೀಕರಿಸುತ್ತಾನೆ. ಪೌಲನ ಸಲಹೆಯನ್ನು ತಿರಸ್ಕರಿಸಿ ವಿವಾಹವಾಗಲು ನಿರ್ಧರಿಸಿದವರಿಗೆ ಅಪೊಸ್ತಲನು ಬರೆಯುತ್ತಾನೆ, **ನೀವು ಪಾಪ ಮಾಡುತ್ತಿಲ್ಲ.** ಅವನು ತನ್ನ ಸ್ವಂತ ಅಪೊಸ್ತಲರ ಅಧಿಕಾರ ಅಥವಾ ವೇದವಾಕ್ಯದ ಅಧಿಕಾರವನ್ನು ಇಂತಹ ನಿರ್ಧಾರದಲ್ಲಿ ಸಂಧಾನ ಮಾಡಿಕೊಳ್ಳುವದನ್ನು ಆತನು ನಂಬುತ್ತಿಲ್ಲ. ಪೌಲನು ತನ್ನ ಓದುಗರಿಗೆ ಅವರ ಅಪಾಯಕಾರಿ ಸನ್ನಿವೇಶದ ಮೂಲಕ ಮಾರ್ಗದರ್ಶನ ನೀಡಲು ಜಾಣ ತೀರ್ಪನ್ನು ನೀಡುತ್ತಾನೆ, ಆದರೆ ಅವನು ಅಂತಿಮ ನಿರ್ಧಾರವನ್ನು ಪ್ರತಿಯೊಬ್ಬ ವ್ಯಕ್ತಿಗೆ ಬಿಡುತ್ತಾನೆ. ಆದಾಗ್ಯೂ ಆತನು ತನ್ನ ಸಲಹೆಯಲ್ಲಿ ದೃಢವಾಗಿದ್ದಾನೆ. ಅದೇ ಸಮಯದಲ್ಲಿ ಕ್ರೈಸ್ತರು ಈ ವಿಷಯದಲ್ಲಿ ತಮ್ಮ ಮನಸಾಕ್ಷಿ ಹೇಳುವದನ್ನು ಕೇಳುವದಕ್ಕೆ ಸ್ವತಂತ್ರರಾಗಿದ್ದಾರೆ, ವಿವಾಹವಾದವರು **ಈ ಜೀವಿತದಲ್ಲಿ ಕಷ್ಟವನ್ನು ಅನುಭವಿಸುವರು** ಎಂಬುದರ ಕುರಿತು ಪೌಲನು ದೃಢನಿಧಾರವುಳ್ಳವನಾಗಿದ್ದಾನೆ. ಅವನು ತನ್ನ ಓದುಗರಿಗೆ, **ನಾನು ನಿಮ್ಮನ್ನು ಉಳಿಸಬೇಕೆಂದು ಪ್ರಯತ್ನಿಸುವವನಾಗಿದ್ದೇನೆ** ಎಂದು ಮರುಭರವಸೆಯನ್ನು ನೀಡುತ್ತಾನೆ. ಪೌಲನು ವಿವಾಹವು ಪರಿಶುದ್ಧತೆಯ ಜೀವಿತವಾಗಿದೆ ಆದರೆ ಅದೇ ಸಮಯದಲ್ಲಿ ಕ್ರೈಸ್ತರು "ಈಗಿನ ಕಷ್ಟ ಕಾಲದ ನಿಮಿತ್ತ" ವಿವಾಹದ ವಿಷಯದಲ್ಲಿ ಎಚ್ಚರಿಕೆಯಾಗಿರಬೇಕು. ಇನ್ನೊಬ್ಬ ವ್ಯಕ್ತಿಯನ್ನು ಪ್ರೀತಿಸಲು ವಚನಬದ್ಧರಾಗುವದರ ಮೂಲಕ, ಒಬ್ಬನು ಕರ್ತನಿಂದ ದೂರಹೋಗುವ ಒತ್ತಡಕ್ಕೆ ಒಳಗಾಗುತ್ತಾನೆ ಎಂಬ ಕಾರಣವನ್ನು ನೀಡುತ್ತಾನೆ (7:32-35ರಲ್ಲಿರುವ ವಿಮರ್ಶೆಯನ್ನು ನೋಡಿರಿ).

**ವಚನ 29.** ಪೌಲನು ಹೇಳುತ್ತಾನೆ, **ಸಮಯವು ಸಂಕೋಚವಾದದ್ದರಿಂದ ಇನ್ನು ಮೇಲೆ ಹೆಂಡತಿಯುಳ್ಳವರು ಹೆಂಡತಿ ಯಿಲ್ಲದವರಂತೆಯೂ ಇರಲಿ.** ಈ ವಚನದ ಪ್ರಾರಂಭದ ಭಾಗವು ಅಪೊಸ್ತಲನು ಪ್ರಸ್ತುತ ಕಾಲದ ಅಂತ್ಯವು ಬೇಗನೆ ಬರಲಿಕ್ಕಿದೆ ಎಂಬುದನ್ನು

ಸೂಚಿಸುತ್ತದೆ. ಪೌಲನು ಕರ್ತನ ಬರೋಣದ ಕುರಿತು ಹೇಳುತ್ತಿಲ್ಲ ಎಂಬುದು ಸ್ಪಷ್ಟವಾಗಿದೆ, ಅಲ್ಲದೇ ಕ್ರಿಸ್ತನು ತನ್ನ ಸ್ವಂತ ಜೀವಿತದ ಅವಧಿಯಲ್ಲಿ ಅಥವಾ ತನ್ನ ಓದುಗರ ಜೀವಿತದ ಅವಧಿಯಲ್ಲಿ ತಿರುಗಿ ಬರುತ್ತಾನೆ ಎಂದು ಬೋಧಿಸುವದಿಲ್ಲ. ಕರ್ತನ ಬರೋಣಕ್ಕೆ ಸಿದ್ಧರಾಗಿರುವದು ಅವನ ಬರೋಣದ ಕುರಿತು ಊಹಿಸುವದಕ್ಕೆ ಸಮನಾಗಿಲ್ಲ. ಅಪೇಕ್ಷೆಯಂತೆ ಜೀವಿಸುವದು ಆತನ ಬರೋಣಕ್ಕೆ ಸಿದ್ಧರಾಗಿರುವದು ಎಂದು ಅರ್ಥ. ಪೌಲನು ಈ ಸಹೋದರರಿಗೆ[18] ಕಡಿಮೆಯಾಗಿದೆ ಎಂಬುದನ್ನು ತಿಳಿದಿದ್ದನು, ಆದಾಗ್ಯೂ ಪೌಲನು ಕೊರಿಂಥದವರಿಗೆ ಬೋಧಿಸಿ ಶತಮಾನಗಳೇ ಗತಿಸಿಹೋದವು.

ಆದಿ ಕ್ರೈಸ್ತರು ಪ್ರಧಾನ ದೇವದೂತನ ಮತ್ತು ತುತೂರಿ ಧ್ವನಿಯೊಂದಿಗೆ ದೇವರು ಅವರ ಜೀವಿತಕಾಲದಲ್ಲಿ ಒಂದುಗೂಡಿಸುವನು ಎಂಬ ವಿಚಾರದಲ್ಲಿ ಜೀವಿಸಿದ್ದರು (1 ಥೆಸಲೋನಿಕ 4:15). ಪೌಲ, ಯಾಕೋಬ ಮತ್ತು ಪೇತ್ರ ಇದನ್ನು ತಪ್ಪಾಗಿ ತಿಳಿದಿದ್ದರೋ? ಅಪೊಸ್ತಲರ ಸಿದ್ಧಾಂತ ಕರ್ತನು ತಕ್ಷಣದಲ್ಲಿ ಕಾಣಿಸಿಕೊಳ್ಳುವನು ಎಂದು ಹೇಳುತ್ತದೆ ಆದರೆ ಅಪೊಸ್ತಲರು ಸಮಯವನ್ನು ನಿರ್ಧರಿಸಲಿಲ್ಲ. ಕರ್ತನ ಬರೋಣವನ್ನು ಮುಂದಾಗಿ ಗ್ರಹಿಸುವದು ಲೋಕವನ್ನು - ನಂಬಿಕೆಯ, ಕರುಣೆಯ ಮತ್ತು ಮೌಲ್ಯಗಳ ಜೀವಿತಕ್ಕಾಗಿ ಉತ್ತಮ ಸ್ಥಳವನ್ನಾಗಿ ಮಾಡಲು ಸತ್ಕಾರ್ಯಗಳನ್ನು ಮಾಡಲು ಕರೆನೀಡುವದಾಗಿದೆ. ಯಾಕಂದರೆ ಕರ್ತನ ದಿನವು ಸಮೀಪವಾಗಿದೆ, ಕ್ರೈಸ್ತರಿಗೆ ತಾವು ಮೊದಲು ತಿಳಿಯದೇ ಇರುವ ಲೋಕವನ್ನು ಇದ್ದಂತೇ ನೋಡುವ ದೃಷ್ಟಿ ಇದೆ.

ಪ್ರತಿಯೊಂದು ಕ್ಷಣ “ಹೆಂಡತಿಯಿದ್ದವರು ಹೆಂಡತಿಯಲ್ಲದವರಂತೆ ಇರಬೇಕು” ಎಂಬ ಸಮಯವನ್ನು ಸಮೀಪಕ್ಕೆ ತರುತ್ತಿದೆ. ಅವಿವಾಹಿತರ ಕುರಿತು ಪೌಲನ ಸಲಹೆಯಲ್ಲಿ ಕೊರಿಂಥದ ವಿಶ್ವಾಸಿಗಳು ಏನಾದರೂ ಒರಟುತನವನ್ನು ಓದಿದ್ದರೆ, ಎಲ್ಲಾ ಲೌಕಿಕ ಸಂಗತಿಗಳಿಗೆ ಕೊನೆಯಿದೆ ಎಂಬ ತಿಳುವಳಿಕೆ ಅದನ್ನು ಮೃದುಗೊಳಿಸುತ್ತದೆ. ಕರ್ತನು ತಿರುಗಿ ಬರುತ್ತಾನೆ ಎಂಬುದರ ತಿಳುವಳಿಕೆ ಅವರು ಯೋಚಿಸುವ ಮತ್ತು ಜೀವಿಸುವ ವಿಧಾನದ ಮೇಲೆ ಪ್ರಾಯೋಗಿಕ ಪರಿಣಾಮವನ್ನು ಬೀರುತ್ತದೆ. ಅವರು ಆ ಸಮಯವು ಶೀಘ್ರವಾಗಿ ಅವರ ಮೇಲೆ ಬರಲಿದೆ ಎಂಬುದನ್ನು ನಂಬಿದ್ದರು; ಅದು ಯಾವಾಗಲೂ ಕ್ರೈಸ್ತರ ಮೇಲೆ ಬೇಗನೇ ಬರಲಿಕ್ಕಿದೆ. ಕೆಲವು ಕೊರಿಂಥದವರು ಈ ಜೀವಿತದ ಸಂಗತಿಗಳಲ್ಲಿ ಮುಳುಗಿಹೋಗಿದ್ದರು, ಆದರೆ ಪೌಲನು ಅವರ ಗಮನವನ್ನು ಪರಲೋಕದ ಕಡೆಗೆ ನಿರ್ದೇಶಿಸುತ್ತಾನೆ. ಅನ್ಯಜನರಿಗೆ ಅಪೊಸ್ತಲನಾಗಿರುವದರಿಂದ ಕರ್ತನ ಬರೋಣವು ಬಹುಬೇಗನೇ ಆಗಲಿದೆ ಎಂದು ನಿರೀಕ್ಷಿಸಬೇಕು. Richard E. Oster, Jr., ಅವರು ಈ ರೀತಿಯಲ್ಲಿ ಹೇಳುತ್ತಾರೆ. “ವಿಶ್ವಾಸಿಗಳ ನಿಜವಾದ ಸ್ವಂತಿಕೆಯು ಕಾಣದೇ ಇರುವ ಲೋಕದ ಮೌಲ್ಯಗಳನ್ನು ನೈಜ್ಯತೆಯಲ್ಲಿ ತೊಡಗಿಸಿದೆ. ಯಾಕಂದರೆ ಅದೊಂದೇ ಲೋಕವು ಶಾಶ್ವತವಾದದ್ದು ಮತ್ತು ಯಾವುದು ನಶ್ವರವೋ ಅದನ್ನು ಜೀವವು ನುಂಗಿಹಾಕುತ್ತದೆ”[19] (2 ಕೊರಿಂಥ 5:4).

**ವಚನ 30.** ಕೊರಿಂಥದ ವಿಶ್ವಾಸಿಗಳು ದೇವರನ್ನು ತಿಳಿದುಕೊಂಡಿರುವ ಹಂತದಲ್ಲಿ ಮತ್ತು ರಕ್ಷಕನ ಬರೋಣದ ನಿರೀಕ್ಷೆಯಲ್ಲಿ, ಅವರು ತಮ್ಮ ವಿವಾಹದ ದೃಷ್ಟಿಕೋನವನ್ನು ಮತ್ತು ಲೋಕದ ಇತರ ಸಂಗತಿಗಳನ್ನು ಮತ್ತೆ ಕ್ರಮಪಡಿಸುತ್ತಾರೆ. ಅಪೊಸ್ತಲನು ತಪ್ಪಿಸಿಕೊಳ್ಳುವ ಮನೋಸ್ಥಿತಿಯ ಸಲಹೆ ನೀಡುವದಿಲ್ಲ; ಅವನು ಸಹೋದರರು ನಾಲ್ಕು

ಗೋಡೆಗಳ ಮಧ್ಯದಲ್ಲಿ ಸೇರಿಬಂದು ಕರ್ತನು ಬರುವವರೆಗೆ ಸಂಗೀತಗಳನ್ನು ಹಾಡಬೇಕು ಎಂದು ಸೂಚಿಸುವದಿಲ್ಲ. ಜೀವವಿರುವಾಗ ದೇವ ಜನರು **ಅಳುತ್ತಾರೆ, ಹರ್ಷಿಸುತ್ತಾರೆ ಕೊಂಡುಕೊಳ್ಳುತ್ತಾರೆ ಮತ್ತು ಹೊಂದಿಕೊಳ್ಳುತ್ತಾರೆ**; ಆದರೆ ಪ್ರತಿನಿತ್ಯದ ಜೀವಿತದ ಲೌಕಿಕ ಸಂಗತಿಗಳು ಹೊಸ ಉದ್ದೇಶವನ್ನು ಹೊಂದಿಕೊಳ್ಳುತ್ತವೆ. ಕ್ರೈಸ್ತರು ದೇವರು ಲೋಕವನ್ನು ಉನ್ನತವಾದ ಸ್ಥಿತಿಗೆ ನಡೆಸುತ್ತಿದ್ದಾನೆ ಎಂಬುದನ್ನು ಗುರುತಿಸಬೇಕು. ಆ ಸಮಯದ ವರೆಗೆ, ಲೋಕವು ಕೊರಿಂಥದ ವಿಶ್ವಾಸಿಗಳಲ್ಲಿ ಮಾಡಿದಂತೆ ಜೀವಿತವನ್ನು ಕಠಿಣಪಡಿಸುತ್ತದೆ, ಕುಟುಂಬ ಜೀವಿತದ ಮೇಲಿನ ಒತ್ತಡಗಳ ಮುನ್‌ಸೂಚನೆಗಳು ಅಪೊಸ್ತಲನ ದೃಷ್ಟಿಕೋನದಲ್ಲಿ, ವಿವಾಹವು ಒಂದು ಜಟಿಲತೆಯಾಗಿದೆ ಎಂಬ ತೀರ್ಪನ್ನು ನೀಡುತ್ತದೆ. ಕ್ರೈಸ್ತರು ದೂರವಿರಿಸಲು ಬಯಸಬಹುದು. ಪೌಲನ ಮಾತುಗಳು ಅದೇ ರೀತಿಯ ತೀವ್ರತೆಯನ್ನು ಹಳೆ ಒಡಂಬಡಿಕೆಯ ಪ್ರವಾದಿಗಳ ಎಚ್ಚರಿಕೆಗಳಲ್ಲಿ ಕಾಣುತ್ತಾನೆ. ದೇವರ ದಿನವು ಅವರ ಮೇಲೆ ಬಂದಿದೆ.

**ವಚನ 31.** ಪೌಲನು ಮುಂದಕ್ಕೆ ಹೇಳುತ್ತಾನೆ, **ಲೋಕವನ್ನು ಅನುಭೋಗಿಸುವವರು ಅದನ್ನು ಪರಿಪೂರ್ಣವಾಗಿ ಅನುಭೋಗಿಸದವರಂತೆಯೂ ಇರಬೇಕು ಯಾಕಂದರೆ ಈ ಪ್ರಪಂಚದ ತೋರಿಕೆಯು ಗತಿಸಿಹೋಗುತ್ತಾ ಅದೆ.** ಅವಿವಾಹಿತರಾದ ಕೊರಿಂಥದ ವಿಶ್ವಾಸಿಗಳು ವಿವಾಹದ ಸಲಹೆಯನ್ನು ಅವಲೋಕಿಸುತ್ತಾರೆ, ಪೌಲನು ದೈಹೀಕ ಲೋಕದ ನಶ್ವರ ಸ್ವರೂಪವನ್ನು ಅವರಿಗೆ ಜ್ಞಾಪಿಸುತ್ತಾನೆ. ಅಪೊಸ್ತಲನು ಆಯ್ದುಕೊಂಡ ಗ್ರೀಕ್‌ರ ಕ್ರಿಯಾಪದವ (παράγει, *paragei*) ಪ್ರಗತಿಯಲ್ಲಿರುವ ಚಟುವಟಿಕೆಯ ಸಲಹೆಯನ್ನು ನೀಡುತ್ತದೆ. ಲೋಕವು ನಿಧಾನವಾಗಿ ಮುಕ್ತಾಯವಾಗುತ್ತದೆ ಎಂಬುದು ವಿಚಾರವಲ್ಲ, ಆದರೆ ಪ್ರಕ್ರಿಯೆಯು ಈಗಾಗಲೆ ಪ್ರಾರಂಭವಾಗಿದೆ. ಪಾಪ ಮತ್ತು ದೇವರ ವಿರೋಧವಾಗಿ ತಿರುಗಿ ಬೀಳುವದು ಬಲೂನಿನಲ್ಲಿ ಗಾಳಿಯನ್ನು ಒತ್ತಡ ಪೂರ್ವಕವಾಗಿ ತುಂಬಿದಂತಿರುತ್ತದೆ. ಮನುಷ್ಯರ ಪಾಪಗಳಿಗಾಗಿ ಸಾಯುವದಕ್ಕೆ ದೇವರು ಕಳುಹಿಸಿದ ರಕ್ಷಕನನ್ನು ಅಂಗೀಕರಿಸಲು ತಿರಸ್ಕರಿಸಿದ ಅನೇಕರು ಒತ್ತಡವನ್ನು ಹೆಚ್ಚಿಸಿದ್ದಾರೆ; ಒಡೆದು ಹೋಗುವ ಹಂತವು ಭವಿಷ್ಯತ್ತಿನಲ್ಲಿ ಬಹಳ ದೂರವೇನಿಲ್ಲ ಎಂದು ತೋರಿಬರುತ್ತದೆ. ನಮ್ಮ ಸುತ್ತಲೂ ಒಂದು ನೋಟ ಈ ಕ್ರೈಸ್ತರಿಗೆ “ಲೋಕದ ರಚನೆಯು ಗತಿಸಿಹೋಗುತ್ತಾ ಇದೆ” ಎಂಬುದನ್ನು ಪ್ರದರ್ಶಿಸುತ್ತದೆ. ಯೋಹಾನ ಇದೇ ಕ್ರಿಯಾಪದವನ್ನು ಮತ್ತು ಇದೇ ಕಾಲವನ್ನು ಅವನು ತನ್ನ ಓದುಗರಿಗೆ ಇದೇ ಎಚ್ಚರಿಕೆಯನ್ನು ನೀಡುವಾಗ ಆಯ್ದುಕೊಳ್ಳುತ್ತಾನೆ. “ಲೋಕವು ಅದರ ಆಶೆಗಳು ಗತಿಸಿಹೋಗುತ್ತವೆ” ಅವನು ಪ್ರಕಟಿಸುತ್ತಾನೆ, “ಆದರೆ ದೇವರ ಚಿತ್ತವನ್ನು ಅನುಸರಿಸುವವನು ಎಂದೆಂದಿಗೂ ಇರುವನು” (1 ಯೋಹಾನ 2:17).

## “ನಿಮ್ಮನ್ನು ನೀವು ದೇವರಿಗೆ ಸಮರ್ಪಿಸಿಕೊಳ್ಳಿರಿ” (7:32-35)

**32ಆದರೆ ನೀವು ಚಿಂತೆಯಿಲ್ಲವರಾಗಿರಬೇಕೆಂದು ನನ್ನ ಇಷ್ಟ. ಮದುವೆಯಿಲ್ಲದವನು ತಾನು ಕರ್ತನನ್ನು ಹೇಗೆ ಮೆಚ್ಚಿಸಬೇಕೆಂದು ಕರ್ತನ ಕಾರ್ಯಗಳನ್ನು ಕುರಿತು ಚಿಂತಿಸುತ್ತಾನೆ.**
**33ಮದುವೆಯಾದವನು ತನ್ನ ಹೆಂಡತಿಯನ್ನು ಹೇಗೆ ಮೆಚ್ಚಿಸಬೇಕೆಂದು ಪ್ರಪಂಚದ ಕಾರ್ಯಗಳನ್ನು ಕುರಿತು ಚಿಂತಿಸುತ್ತಾನೆ. 34ಅದರಂತೆ ಮುತ್ತೈದೆಗೂ ಕನ್ನಿಕೆಗೂ ವ್ಯತ್ಯಾಸವುಂಟು. ಮದುವೆಯಿಲ್ಲದವಳು ತಾನು ದೇಹಾತ್ಮಗಳಲ್ಲಿ ಪವಿತ್ರಳಾಗಿರಬೇಕೆಂದು**

**ಕರ್ತನ ಕಾರ್ಯಗಳನ್ನು ಕುರಿತು ಚಿಂತಿಸುತ್ತಾಳೆ; [35]ಆದರೆ ಮದುವೆಯಾದವಳು ತನ್ನ ಗಂಡನನ್ನು ಹೇಗೆ ಮೆಚ್ಚಿಸಬೇಕೆಂದು ಪ್ರಪಂಚದ ಕಾರ್ಯಗಳನ್ನು ಕುರಿತು ಚಿಂತಿಸುತ್ತಾಳೆ. ನಾನು ನಿಮಗೆ ಉರ್ಲು ಹಾಕಬೇಕೆಂದು ಇದನ್ನು ಹೇಳುವದಿಲ್ಲ, ನೀವು ಸಜ್ಜನರಿಗೆ ತಕ್ಕಹಾಗೆ ನಡೆದು ಭಿನ್ನಭಾವವಿಲ್ಲದೆ ಕರ್ತನಿಗೆ ಪಾದ ಸೇವೆಯನ್ನು ಮಾಡುವವರಾಗಬೇಕೆಂದು ನಿಮ್ಮ ಹಿತಕ್ಕೋಸ್ಕರವೇ ಹೇಳುತ್ತೇನೆ.**

**ವಚನ 32.** ಪೌಲನು ತನ್ನ ಓದುಗರಲ್ಲಿ ತನಗೆ ಸಾಧ್ಯವಾದಷ್ಟು ಕೂತುಹಲವನ್ನು ಉಳಿಸಲು ಬಯಸುತ್ತಾನೆ. "ಈಗಿನ ಕಷ್ಟಕಾಲದ ನಿಮಿತ್ತ" (7:26) ವಿವಾಹವಾದವರು ಕಷ್ಟಪಡುವದಕ್ಕೆ ಕಾರಣವಾಗುತ್ತದೆ; ಅದು ಅವರ ಪ್ರೀತಿಪಾತ್ರರ ಮೇಲೆ ಸಹ ಕಷ್ಟವನ್ನು ತರುವ ಸಂಭವವಿದೆ. ವಿವಾಹಿತನಾದ ಪುರುಷನು ದೇವರನ್ನು ಮೆಚ್ಚಿಸಲು ಪ್ರಯಾಸಪಡುತ್ತಾನೆ ಯಾಕಂದರೆ ಅವನು ಕುಟುಂಬದ ಸಂಗತಿಗಳಿಂದ ದೂರವಾಗಿರುತ್ತಾನೆ. ಕೊರಿಂಥದಲ್ಲಿರುವ ಕ್ರೈಸ್ತರ ಅತಿರೇಕದ ಪರಿಸ್ಥಿತಿಗಳು ಗಂಡಂದಿರು ಮತ್ತು ಹೆಂಡತಿಯರು ತೆಗೆದುಕೊಳ್ಳುವ ಪರಸ್ಪರ ಸಾಮಾನ್ಯ ಕಾಳಜಿಯನ್ನು ಜಟಿಲವಾಗಿಸುತ್ತದೆ ಎಂಬುದನ್ನು ಅಪೊಸ್ತಲನು ನಿರ್ವಹಿಸುತ್ತಾನೆ. ಅವಿವಾಹಿತ ಕ್ರೈಸ್ತರು ಅವಿವಾಹಿತರಾಗಿಯೇ ಉಳಿಯಬೇಕು ಎಂಬುದಕ್ಕೆ ಆತನು ನೀಡುವ ಕಾರಣ **ನೀವು ನೀವು ಚಿಂತೆಯಿಲ್ಲವರಾಗಿರಬೇಕೆಂದು ನನ್ನ ಇಷ್ಟ** ಎಂದು ಶಿಫಾರಸ್ಸು ಮಾಡುವದಾಗಿದೆ. ಗಂಡಂದಿರು ಮತ್ತು ಹೆಂಡತಿಯರು ಪರಸ್ಪರರ ಕುರಿತು ಚಿಂತಿಸುವದು ಸಾಮಾನ್ಯ ಮತ್ತು ಉತ್ತಮವಾಗಿದೆ. ಒಂದು ವೇಳೆ ಗಂಡನ ಅಥವಾ ಹೆಂಡತಿಯ ಜೀವಿತವು ಅಪಾಯದಲ್ಲಿದ್ದರೆ ಅಥವಾ ಸಂಗಾತಿಯು ಸೆರೆಮನೆವಾಸ ಅಥವಾ ಹಿಂಸೆಯನ್ನು ಅನುಭವಿಸುತ್ತಿದ್ದಲ್ಲಿ, ಸಂಗಾತಿಯನ್ನು ಇಂಥಹ ಕಷ್ಟದಿಂದ ಉಳಿಸಲು ಕ್ರಿಸ್ತನನ್ನು ಅಲ್ಲಗಳೆಯುವ ಶೋಧನೆ ಮಿತೀಮೀರಿದ್ದಾಗಿರಬಹುದು.

ಕೆಲವೊಂದು ಧಾರ್ಮಿಕ ಗುಂಪುಗಳಲ್ಲಿ, ಸಭಾಸೇವಕರು ಅವಿವಾಹಿತರಾಗಿ ಉಳಿಯುತ್ತಾರೆ ಕೊರಿಂಥದವರಿಗೆ ಬರೆದ ಈ ಪತ್ರದಲ್ಲಿ ಪೌಲನು ನಿರಾಕರಿಸಿರುವ ಕಾರಣದಿಂದಾಗಿ. ಒಂದು ವಿಚಾರವೆಂದರೆ ಅವಿವಾಹಿತನಾದ ಮನುಷ್ಯನು ಕುಟುಂಬದ ಅಡೆತಡೆಗಳಿಲ್ಲದೇ ತನ್ನ ಶಕ್ತಿಯನ್ನು ಸೇವೆಗೆ ನೀಡಬಹುದು. ಎರಡನೆಯದಾಗಿ, ಕೆಲವರು ಲೈಂಗೀಕತೆಯು ಅನುವಂಶಿಕವಾಗಿ ದುರಾಶೆಯದ್ದಾಗಿದೆ ಆದುದರಿಂದ ಪಾಪದಿಂದ ತುಂಬಿದ್ದಾಗಿದೆ ಎಂದು ನಂಬುತ್ತಾರೆ. ಎರಡೂ ಅಂಶಗಳನ್ನು ಪೌಲನು ಬೆಂಬಲಿಸುವದಿಲ್ಲ. 7:32ರಲ್ಲಿ ಉಪಯೋಗಿಸಿದ ಬ್ರಹ್ಮಚರ್ಯದ ಪ್ರೋತ್ಸಾಹ ಮೊದಲನೆಯ ವಾದವನ್ನು ಬೆಂಬಲಿಸುವದಕ್ಕಾಗಿ, ಆದರೆ ವೃತ್ತಿಯಲ್ಲಿ ಸಭಾ ಸೇವಕರು ಎಂದು ಪೌಲನ ಭಾಷೆಯಲ್ಲಿ ಎಲ್ಲಿಯೂ ಸೂಚಿಸಲಾಗಿಲ್ಲ. ಅವನು ನೀಡಿದ ಸಲಹೆ ಕೊರಿಂಥದಲ್ಲಿರುವ ಎಲ್ಲಾ ಕ್ರೈಸ್ತರಿಗಾಗಿ. ಮುಂದಕ್ಕೆ, ಇದನ್ನು ಸಭೆಯಲ್ಲಿ ಭಯವನ್ನು ಹುಟ್ಟಿಸುವ ಸಾಮಾನ್ಯ ವೇದನೆಯನ್ನು ಪರಿಗಣಿಸಿ ನೀಡಲಾಗಿದೆ.

**ವಚನ 33.** ಪೌಲನ ಬರಹಗಳಲ್ಲಿ "ಲೋಕ" (κόσμος, *kosmos*) ಅನೇಕಾವರ್ತಿ ಪ್ರಸ್ತುತ ಕಾಲದಲ್ಲಿರುವ ಕೆಟ್ಟ ಸಂಗತಿಗಳನ್ನು ಉಲ್ಲೇಖಿಸುತ್ತದೆ (ನೋಡಿರಿ ಎಫೆಸ 2:2). ಯೋಹಾನನು ಮೇಲಿಂದ ಮೇಲೆ ಕ್ರಿಸ್ತನನ್ನು ವಿರೋಧಿಸುವ ಪ್ರತಿಯೊಂದು ಸಂಗತಿಗೆ "ಲೋಕ" ಎಂದು ಉಪಯೋಗಿಸುತ್ತಾನೆ (ನೋಡಿರಿ ಯೋಹಾನ 8:23). ಹೆಚ್ಚು

ಸಾಮಾನ್ಯವಾಗಿ, "ಲೋಕ" ಅದರಲ್ಲಿ ವಾಸಿಸುವ ಜನರನ್ನು ಉಲ್ಲೇಖಿಸುತ್ತದೆ; ಆದರೆ ಪೌಲನು **ಮದುವೆಯಾವನು ತನ್ನ ಹೆಂಡತಿಯನ್ನು ಹೇಗೆ ಮೆಚ್ಚಿಸಬೇಕೆಂದು ಪ್ರಪಂಚದ ಕಾರ್ಯಗಳನ್ನು ಕುರಿತು ಚಿಂತಿಸುತ್ತಾನೆ** ಎಂದು ಹೇಳುವಾಗ ಅವನು ಒಬ್ಬನ ಸಂಗಾತಿ ಮತ್ತು ಕುಟುಂಬ ಎಂದು ಅರ್ಥೈಸುತ್ತಾನೆ. "ಲೋಕದ ಸಂಗತಿಗಳಲ್ಲಿ" ಚಿಂತೆಯುಳ್ಳವನು ಎಂಬ ಎರಡನೆಯ ಶತಮಾನದ ಪ್ರಾರಂಭದ ವಿರಕ್ತ ತತ್ವಜ್ಞಾನಿಯ ಚರ್ಚೆಯ ವಿಷಯವಾಗಿದೆ. ಧೀರ್ಘವಾದ ಪ್ಯಾರಾದಲ್ಲಿ, ಅವನು ವಿವಾಹಿತ ಮನುಷ್ಯನಿಗೆ ಎದುರಾಗುವ ಅಡೆತಡೆಗಳನ್ನು ಸೂಚಿಸುತ್ತಾನೆ. ಅವನು ಹೀಗೆ ಬರೆಯುತ್ತಾನೆ,

> . . . ಅವನು ತನ್ನ ಮಾವನಿಗೆ, ಹೆಂಡತಿಯ ಉಳಿದ ಸಂಬಂಧಿಗಳಿಗೆ, ಕೊನೆಯದಾಗಿ ಸ್ವತಃ ತನ್ನ ಹೆಂಡತಿಗೆ ಕೆಲವೊಂದು ಸೇವೆಯನ್ನು ಮಾಡಬೇಕು; ಕೊನೆಯದಾಗಿ ಅವನು, ತನ್ನ ಸ್ವಂತ ಕುಟುಂಬಕ್ಕೆ ದಾಯಿಯಾಗಲು ಮತ್ತು ಅವರಿಗೆ ಒದಗಿಸಲು ತನ್ನ ವೃತ್ತಿಯಿಂದ ತೆಗೆಯಲ್ಪಡಬೇಕು . . . ತನ್ನ ಮಗುವಿಗೆ ನೀರನ್ನು ಕಾಯಿಸಲು ಕೆಟಲ್‌ನ್ನು ತರಬೇಕು, ಅವನ ಸ್ನಾನದ ಗುಂಡಿಯನ್ನು ತೊಳೆಯಬೇಕು, ಅವಳಿಗೆ ಮಗುವಾದಾಗ ತನ್ನ ಹೆಂಡತಿಗೆ ಉಣ್ಣೆಯನ್ನು, ಎಣ್ಣೆಯನ್ನು, ಮಂಚವನ್ನು, ಬಟ್ಟಲವನ್ನು ತಂದುಕೊಡಬೇಕು (ಪಾತ್ರೆಗಳು ಹೆಚ್ಚೆಚ್ಚಾಗಿ ಅಗಣಿತವಾಗುತ್ತವೆ); ಅವನು ತನ್ನ ಉಳಿದ ವ್ಯಾಪಾರ ಮತ್ತು ವೇದನೆಯ ಕುರಿತು ಮಾತನಾಡಬಾರದು.[20]

ಅಡೆತಡೆಗಳನ್ನು ಪರಿಗಣಿಸಿ, Epictetusನು, ಕನಿಷ್ಠಪಕ್ಷ ತತ್ವಜ್ಞಾನಿಗಳು ಮದುವೆಯಾಗಬಾರದು ಎಂದು ಶಿಫಾರಸ್ಸು ಮಾಡುತ್ತಾನೆ.

Epictetusನು ಪಟ್ಟಿಮಾಡಿದ ಚಿಂತನೆಗಳು ಪೌಲನವುಗಳಲ್ಲ, ಆದರೆ ಅವು ಅದರಂತೆ ಇವೆ. ಅವು ಪೌಲನು ದರ್ಶನದಲ್ಲಿ ಹೊಂದಿದ ದೈಹೀಕ ಮತ್ತು ಭಾವನಾತ್ಮಕ ವೇದನೆಗಳ ಸ್ವಲ್ಪ ಮುಂದೆ ಕಾಣಿಸಿಕೊಳ್ಳುತ್ತವೆ. ಕೊರಿಂಥದಲ್ಲಿರುವ ಕ್ರೈಸ್ತರಿಗೆ ಕುಟುಂಬದ ವಿಷಯಗಳು ತತ್ವಜ್ಞಾನಿಯಾದ Epictetusನಿಗಿಂತ ಹೆಚ್ಚು ಒತ್ತಡವನ್ನು ತರುತ್ತವೆ. ಕ್ರಿಸ್ತನ ಕುರಿತಾದ ಅರಿಕೆ ಸಂಗಾತಿಗೆ ಮತ್ತು ಮಕ್ಕಳಿಗೆ ಪರಿಣಾಮವನ್ನು ಹೊಂದಿರುತ್ತದೆ. ಪೌಲನು ಗಂಡಂದಿರು ಮತ್ತು ಹೆಂಡತಿಯರು ಕ್ರಿಸ್ತನನ್ನು ಅರಿಕೆ ಮಾಡುವದು ಮತ್ತು ತಮ್ಮ ಪ್ರೀತಿಪಾತ್ರರನ್ನು ಸಂರಕ್ಷಿಸುವದರಲ್ಲಿ ಕಠಿಣವಾದ ಆಯ್ಕೆಯನ್ನು ಮಾಡಲು ಒತ್ತಾಯಪಡಿಸುವ ಸಂಭವವಿರುತ್ತದೆ. ಒಂದುವೇಳೆ ಪೌಲನು ವಿವಾಹಿತನಾಗಿದ್ದಲ್ಲಿ, ಉದಾಹರಣೆಗೆ, ಅವನ ಅಪೊಸ್ತಲಿಕ ಕಾರ್ಯದ ಕಷ್ಟ (ನೋಡಿರಿ 2 ಕೊರಿಂಥ 11:22–29) ಖಂಡಿತವಾಗಿ ಅವನ ಕುಟುಂಬ ಜೀವಿತದ ಮೇಲೆ ಪರಿಣಾಮಬೀರುತಿತ್ತು.

**ವಚನ 34.** 7:33, 34ರಲ್ಲಿ "ಚಿಂತಿಸುವದು" (μεριμνᾶ, *merimna*) ಎಂಬ ಕ್ರಿಯಾಪದವು ಏಕವಚನದಲ್ಲಿದೆ.[21] ಆದಾಗ್ಯೂ ಒಬ್ಬನು ಈ ಸಂಯುಕ್ತ ವಿಷಯವನ್ನು (ವಾಸ್ತವವಾಗಿ "ಅವಿವಾಹಿತ ಸ್ತ್ರೀ ಮತ್ತು ಕನ್ನಿಕೆ") ಬಹುವಚನ ಕ್ರಿಯಾಪದವನ್ನಾಗಿ ನಿರೀಕ್ಷಿಸಬಹುದು, ಇಲ್ಲಿ ಅದು ವಿಷಯವಲ್ಲ. ಒಂದು ರೀತಿಯಲ್ಲಿ ಇದನ್ನು ವಿವರಿಸುವದು "ಕನ್ನಿಕೆ" ಎಂಬ ಪದವನ್ನು "ಅವಿವಾಹಿತ ಸ್ತ್ರೀಯನ್ನು" ವಿವರಿಸುವದಕ್ಕಾಗಿ ಎಂದು ತಿಳಿದುಕೊಳ್ಳಬಹುದು. ಅರ್ಥ "ಅವಿವಾಹಿತ ಸ್ತ್ರೀ, ಅವಳನ್ನೇ ಕನ್ನಿಕೆ ಎಂದು ಪರಿಗಣಿಸಿರುವದು" ಎಂಬುದಾಗಿರಬಹುದು. ಅದು ಹ್ಯಾಗೂ, ವಿವರಿಸುವಕ್ಕೆ ಅವಮಾನಕರ "ಮತ್ತು" (καί, *kai*) ಎಂಬ ಪದವನ್ನು ಬಿಡುತ್ತದೆ. ಉತ್ತಮವಾದ ವಿವರವೆಂದರೆ ಗ್ರೀಕ್

ಭಾಷೆಯು ಯಾವಾಗಲೂ ವಿಷಯ ಮತ್ತು ಕ್ರಿಯಾಪದ ಒಪ್ಪಂದವನ್ನು ಇಂಗ್ಲೀಷನಂತೆ ಸ್ಥಿರವಾಗಿ ಇರುವದನ್ನು ಗುರುತಿಸುವದಿಲ್ಲ. ನಿಜವಾದ ಗ್ರೀಕ್ ಅವತರಣಿಕೆ ಒಂದು ರೀತಿಯ "ಅವಿವಾಹಿತ ಸ್ತ್ರೀ (ಕನ್ನಿಕೆಯೂ ಸಹ) ಎಂಬುದನ್ನು ಪರಿಗಣಿಸುತ್ತದೆ." NASB ವಾಕ್ಯದ ಕುರಿತು ಉತ್ತಮವಾದ ತಿಳುವಳಿಕೆಯನ್ನು ನೀಡುತ್ತದೆ: **ಮದುವೆಯಿಲ್ಲದವಳು . . . ಮತ್ತು ಕನ್ನಿಕೆ, ತಾನು ದೇಹಾತ್ಮಗಳಲ್ಲಿ ಪವಿತ್ರಳಾಗಿರಬೇಕೆಂದು ಕರ್ತನ ಕಾರ್ಯಗಳನ್ನು ಕುರಿತು ಚಿಂತಿಸುತ್ತಾಳೆ.** NIV ಯಲ್ಲಿ "ಒಬ್ಬ ಅವಿವಾಹಿತ ಸ್ತ್ರೀ ಅಥವಾ ಕನ್ನಿಕೆ ಚಿಂತಿಸುತ್ತಾಳೆ . . ." ಪೌಲನು ಉಲ್ಲೇಖಿಸಿರುವ ಎರಡೂ ಅನುವಾದಗಳು ಎರಡು ಗುಂಪಿನ ಜನರನ್ನು ಸೂಚಿಸುತ್ತವೆ. ಸ್ತ್ರೀ ಒಂದು ಗುಂಪಾದರೆ ವಿಧವೆಯಪಟ್ಟ ಅಥವಾ ವಿಚ್ಛೇದನ ಹೊಂದಿ ಅವಿವಾಹಿತಳಾಗಿರುವವರು ಇನ್ನೊಂದು ಗುಂಪಿನಲ್ಲಿ ಒಟ್ಟಾರೆ ವಿವಾಹವಾಗದೇ ಇರುವವರು. ಅರ್ಥೈಸುವಿಕೆ ಸನ್ನಿವೇಶಕ್ಕೆ ಉತ್ತಮವಾಗಿ ಹೊಂದಿಕೆಯಾಗುತ್ತದೆ. ಕನ್ನಿಕೆ ಕನ್ನಿಕೆಯರು ಅವಿವಾಹಿತ ಸ್ತ್ರೀಯರಲ್ಲಿ ಒಂದೇ ಒಂದು ಭಾಗ ಮಾತ್ರ, ಆದರೆ ಇದು ವಿಶೇಷವಾಗಿ ಉಲ್ಲೇಖಿಸುವದಾಗಿದೆ.

ಪೌಲನ ವಾದವೆಂದರೆ ಆ ವ್ಯಕ್ತಿ - ಪುರುಷ (7:33) ಅಥವಾ ಸ್ತ್ರೀ (7:34) - ವೈವಾಹಿಕ ಜೀವಿತದ ಜವಾಬ್ದಾರಿಯನ್ನು ತೆಗೆದುಕೊಂಡಿರುವವರು ತನ್ನ ಶಕ್ತಿಯನ್ನು ತಮ್ಮ ಸಂಗಾತಿ ಅಥವಾ ಮಕ್ಕಳಿಗೆ ವಿಸ್ತರಿಸುತ್ತಾರೆ. ಅವಿಶ್ವಾಸಿಗಳು ಕ್ರೈಸ್ತ ಸಾಮಾನ್ಯ ಕುಟುಂಬದ ಚಿಂತೆನೆಯಲ್ಲಿ ಸೇರಿಸಿದಾಗ, ಅವನು ಅಥವಾ ಅವಳು ಕರ್ತನಿಗೆ ವಿಧೇಯರಾಗುವದರಿಂದ ವಿಮುಖರಾಗಬಹುದು. ಅಪೊಸ್ತಲನು ವಿಶ್ವಾಸಿಗಳು ಸಾಮಾನ್ಯವಾಗಿ "ಲೋಕದ ಸಂಗತಿಗಳ ವಿಷಯದಲ್ಲಿ" ಚಿಂತಿಸಬಾರದು ಎಂದು ವಾದಿಸುತ್ತಿಲ್ಲ. ಅವನು ಯೂದಾಯದಲ್ಲಿ ಬಡವರಾದವರಿಗಾಗಿ ಸಂಗ್ರಹಿಸುತ್ತಿರುವಾಗ (1 ಕೊರಿಂಥ 16:1) ಲೋಕದ ಸಂಗತಿಗಳ ಕುರಿತು ಅವನಿಗಿರುವ ಚಿಂತೆಯನ್ನು ಪ್ರದರ್ಶಿಸುತ್ತವೆ. ಬದಲಾಗಿ, ಅವನು ಕ್ರಿಸ್ತನಿಗೆ ವಿಧೇಯರಾಗುವದನ್ನು ಪರಿಗಣಿಸುತ್ತಾನೆ. **ಅದರೊಟ್ಟಿಗೆ ದೇಹಾತ್ಮಗಳಲ್ಲಿ ಪವಿತ್ರಳಾಗಿರಬೇಕೆಂದು** ಕ್ರೈಸ್ತರ ಪ್ರಥಮ ಆಧ್ಯತೆಯಾಗಿರಲೇಬೇಕು. ಅವನನ್ನು ಆ ಕೇಂದ್ರಿಕರಿಸುವಿಕೆಯಿಂದ ಮಾರ್ಗತಪ್ಪಿಸುವದನ್ನು ದೂರವಿರಿಸಬೇಕು.

**ವಚನ 35.** ಅವಿವಾಹಿತರು ಕೊರಿಂಥದ ಪರಿಸ್ಥಿತಿಯಲ್ಲಿ ವಾಸಿಸುತ್ತಿದ್ದ ಕ್ರೈಸ್ತರಿಗೆ ವಿವಾಹವು ವಿಶಿಷ್ಟವಾಗಿದೆ ಎಂದು ಪರಿಗಣಿಸುವ ಅವಿವಾಹಿತರಿಗೆ ಪೌಲನ ಸೂಚನೆಗಳು. ಆ ಕಾರಣದಿಂದ, ಅವನು ಎಚ್ಚರವಾಗಿದ್ದಾನೆ. ವಿಷಯವನ್ನು 7:25ರಲ್ಲಿ ಮಂಡಿಸಿದ ನಂತರ, ಅವನು ಹೇಳುತ್ತಾನೆ, "ಈಗಿನ ಕಷ್ಟಕಾಲವನ್ನು ದೃಷ್ಟಿಯಲ್ಲಿಟ್ಟುಕೊಂಡು ನಾನು ಇದು ಉತ್ತಮವೆಂದು ಯೋಚಿಸುತ್ತೇನೆ" ಎಂದು ಹೇಳುತ್ತಾನೆ (7:26). ಅವನ ವಾಕ್ಯಾಂಗಗಳು ಬದಲಿಸಲಾರದ ಸ್ಥಾನವನ್ನು ಸೂಚಿಸುವದಿಲ್ಲ. **ಇದನ್ನು ನಿಮ್ಮ ಹಿತಕ್ಕೋಸ್ಕರವೇ ಹೇಳುತ್ತೇನೆ. ನಿಮಗೆ ಉರ್ಲು ಹಾಕಬೇಕೆಂದು ಇದನ್ನು ಹೇಳುವದಿಲ್ಲ** [βρόχον, *brochon*] ಎಂದು ಪೌಲನು ಸೇರಿಸುತ್ತಾನೆ. ಈ ವಾಕ್ಯಾಂಗದ ಹೆಚ್ಚು ವಾಸ್ತವಿಕವಾದ ಮತ್ತು ಅಲಂಕಾರಿಕವಾದ ಅನುವಾದ "ನಿಮ್ಮ ಸುತ್ತಲೂ ಉರುಲನ್ನು ಹಾಕುವದಕ್ಕಾಗಿ ಅಲ್ಲ."

ಈ ವಿಷಯದಲ್ಲಿ ಅವಶ್ಯವಿರುವ ಸಿದ್ಧಾಂತಗಳು (ಉದಾಹರಣೆ, ಗಲಾತ್ಯ 5:1-3) ಅಥವಾ ನೈತಿಕತೆ (ಉದಾಹರಣೆ, 1 ಕೊರಿಂಥ 6:9, 10) ಪೌಲನು ಸಂಧಾನಮಾಡಿಕೊಳ್ಳುವ ವಿಷಯಗಳಾಗಿವೆ. ಹ್ಯಾಗೂ, ಈ ಸನ್ನಿವೇಶದಲ್ಲಿ ವಯಕ್ತಿಕ ಪರಿಸ್ಥಿತಿಗಳಲ್ಲಿ ಮತ್ತು

ಸುವಾರ್ತೆಯಲ್ಲಿ ಅಡಕವಾಗಿರುವ ತತ್ವಗಳನ್ನು ತಮ್ಮ ವಿಶಿಷ್ಟವಾದ ಸಂಗತಿಯಲ್ಲಿ ಅಳವಡಿಸಿಕೊಳ್ಳುವಲ್ಲಿ ವಿಶ್ವಾಸಿಗಳು ಜಾಣರಾಗಿರಬೇಕು. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ಅವನು ಕೊರಿಂಥದಲ್ಲಿರುವ ಕ್ರೈಸ್ತರಿಗೆ ತನ್ನ ಉತ್ತಮವಾದ ಸಲಹೆಯನ್ನು ನೀಡುತ್ತಾನೆ. ಅವನು ವ್ಯಕ್ತಿಯ ಮನಸಾಕ್ಷಿಯು ವಿವಾಹದ ವಿಷಯದಲ್ಲಿ ಪ್ರೇರೆಪಿಸುವದು ಈ ವಿಷಯದಲ್ಲಿ ಅಂತಿಮ ನಿರ್ಣಯ ನಿರ್ಣಾಯಕನದಾಗಿದೆ. **ನೀವು ಸಜ್ಜನರಿಗೆ ತಕ್ಕಹಾಗೆ ನಡೆದು ಭಿನ್ನಭಾವವಿಲ್ಲದೆ ಕರ್ತನಿಗೆ ಪಾದ ಸೇವೆಯನ್ನು ಮಾಡುವವರಾಗಬೇಕೆಂದು** ಅಪೊಸ್ತಲನು ತನ್ನ ಓದುಗರಿಗೆ ಬೇಡಿಕೊಳ್ಳುತ್ತಿದ್ದಾನೆ.

## "ಈ ವಿಷಯದಲ್ಲಿ ನೀವು ಬಯಸಿದಂತೆ ಮಾಡಿರಿ" (7:36-38)

**36ಒಬ್ಬನು ತನ್ನ ಮಗಳಿಗೆ ಮದುವೆಯಿಲ್ಲದಿರುವದು ಮರ್ಯಾದೆಯಲ್ಲವೆಂದು ಭಾವಿಸಿದರೆ
ಮತ್ತು ಆಕೆಗೆ ಪ್ರಾಯ ಕಳೆದುಹೋಗುತ್ತದಲ್ಲಾ, ಮದುವೆಯಾಗುವದು ಅವಶ್ಯವೆಂದು ಅವನಿಗೆ
ಕಂಡರೆ ತನ್ನಿಷ್ಟದಂತೆ ಮಾಡಲಿ. ಅವನು ಪಾಪ ಮಾಡುವದಿಲ್ಲ. ಮದುವೆಮಾಡಿಕೊಡಲಿ.
37ಆದರೆ ಒಬ್ಬನು ದೃಢಚಿತ್ತನಾಗಿದ್ದು ಬಲವಂತವೇನೂ ಇಲ್ಲದೆ ತನ್ನಿಷ್ಟವನ್ನು ನಡಿಸುವದಕ್ಕೆ
ಹಕ್ಕುಳ್ಳವನಾಗಿ ತನ್ನ ಮಗಳನ್ನು ಮದುವೆ ಮಾಡಿಕೊಡುವದಿಲ್ಲವೆಂದು ತನ್ನೊಳಗೆ
ನಿರ್ಣಯಿಸಿಕೊಂಡರೆ ಅವನು ಹಾಗೆ ಮಾಡುವದು ಒಳ್ಳೇದು. 38ಹಾಗಾದರೆ ತನ್ನ ಮಗಳನ್ನು
ಮುದುವೆಮಾಡಿಕೊಡುವವನು ಒಳ್ಳೇದನ್ನು ಮಾಡುತ್ತಾನೆ. ಮದುವೆಮಾಡಿಕೊಡದೆ
ಇರುವವನು ಇನ್ನೂ ಒಳ್ಳೇದನ್ನು ಮಾಡುತ್ತಾನೆ.**

**ವಚನ 36.** 7:36ಅ KJV, "ಒಬ್ಬನು ತನ್ನ ಮಗಳಿಗೆ ಮದುವೆಯಿಲ್ಲದಿರುವದು ಮರ್ಯಾದೆಯಲ್ಲವೆಂದು ಭಾವಿಸಿದರೆ." ಎಂದು ಅನುವಾದಿಸುತ್ತದೆ. ಇದರೊಟ್ಟಿಗೆ ಓದುಗರನ್ನು "ಸಾಮಾನ್ಯವಲ್ಲದ" ಎಂಬ ಪದಕ್ಕೆ ಅಖಚಿತವಾದ ಅರ್ಥಕ್ಕೆ ಬಿಟ್ಟು ಈ ಹೇಳಿಕೆಯು "ಅವನ" ಮೊದಲು ಸಂಭವಿಸಿದ ಘಟನೆಗಳಿಗೆ ಅಸ್ಪಷ್ಟವಾಗಿದೆ. ವಚನದ ಅರ್ಥವು ಸ್ತ್ರೀಯೆಡೆಗೆ ಅಸಮಂಜಸವಾದ ರೀತಿಯಲ್ಲಿ ವರ್ತಿಸುತ್ತಿರಬಹುದಾದ ಪುರುಷನ ವ್ಯಕ್ತಿತ್ವವನ್ನು ತಿರುಗಿಸುತ್ತದೆ. NIV2011 ಅವನು ನಿಶ್ಚಿತಾರ್ಥ ಮಾಡಿಕೊಂಡ ಕನ್ನಿಕೆ" ಈ ವ್ಯಾಕ್ಯಾಂಗದಿಂದ ವೇದಭಾಗವನ್ನು ಸ್ಪಷ್ಟೀಕರಿಸುತ್ತದೆ; NRSV1989 ಅದೇ ವಿಚಾರವನ್ನು "ಅವನ ಪ್ರಿಯತಮೆ" ತಿಳಿಸುತ್ತದೆ. ಪೌಲನ ಅಪಾದನೆಯನ್ನು, ಈ ರೀತಿ ತಿಳಿದುಕೊಳ್ಳುವಾಗ, ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀ ಲೈಂಗೀಕ ಆಕರ್ಷಣೆಯನ್ನು ತಡೆಯುವದು ಕಠಿಣ ಎಂದುಕೊಂಡ ಪಕ್ಷದಲ್ಲಿ ವಿವಾಹವಾಗಬೇಕು.

NASB ಅನುವಾದಕರು ವಚನವನ್ನು ವಿಭಿನ್ನವಾಗಿ ಅರ್ಥೈಸಿಕೊಂಡಿದ್ದಾರೆ. ಅವರು ಸೂಚಿಸಿರುವ 7:36ಅ, **ಒಬ್ಬನು ತನ್ನ ಮಗಳಿಗೆ ಮದುವೆಯಿಲ್ಲದಿರುವದು ಮರ್ಯಾದೆಯಲ್ಲವೆಂದು ಭಾವಿಸಿದರೆ ಮತ್ತು** ಎಂದು ತಿಳಿದಿದ್ದರೆ, ಈ ವಾಕ್ಯಾಂಗವು ಕೊರಿಂಥದಲ್ಲಿರುವ ಪುರುಷ ಪ್ರಾಧಾನ್ಯ ಸಂಸ್ಕೃತಿಯಲ್ಲಿ ತನ್ನ ಮಗಳು ವಿವಾಹವಾಗುವ ಪೂರ್ವದಲ್ಲಿ ಅವಿವಾಹಿತ ಯೌವನಸ್ಥ ಸ್ತ್ರೀಗೆ ಅನುಮತಿಯನ್ನು ನೀಡಬೇಕು ಎಂಬುದನ್ನು ಕಲ್ಪಿಸುತ್ತದೆ. ಅದು ಸಂಗತಿಯಾಗಿರುವಾಗ, ಪೌಲನು ತಂದೆಗಳು ತಮ್ಮ ಹೆಣ್ಣುಮಕ್ಕಳನ್ನು ವಿವಾಹವಾಗುವದರಿಂದ ನಿಷೇಧಿಸುವಾಗ ತಾವು ಸರಿಯಾಗಿ ವರ್ತಿಸುತ್ತಿದ್ದೇವೋ ಇಲ್ಲವೋ

ಎಂಬುದನ್ನು ಪರಿಗಣಿಸಬೇಕು. "ಈಗಿನ ಕಷ್ಟಕಾಲದ ನಿಮಿತ್ತ" ಏನೇ ಅಗಿರಲಿ (7:26) ಕುಟುಂಬದಲ್ಲಿ ಸಮಾಧಾನ ಮತ್ತು ಕನ್ನಿಕೆಯ ಆಶೆಗಳನ್ನು ಪರಿಗಣಿಸುವದು ಬದಲಿಸಲಾರದ ನಿಷೇಧಗಳಿಗಿಂತ ಪ್ರಾಮುಖ್ಯವಾಗಿದೆ. ಪ್ರತಿಯೊಬ್ಬ ತಂದೆತಾಯಿಗಳು ಮಾಡುವ ನಿರ್ಧಾರಗಳನ್ನು ಗೌರವಿಸಬೇಕು. ಫಲಿತಾಂಶದಲ್ಲಿರುವ ವ್ಯತ್ಯಾಸವನ್ನು ಸಹಿಸಿಕೊಳ್ಳಬೇಕು.

1970ರಲ್ಲಿ ಮುದ್ರಿಸಿದ NEB ಮೂರನೇಯ ಆಯ್ಕೆಯನ್ನು ನೀಡುತ್ತದೆ: "ಒಬ್ಬ ಮನುಷ್ಯನಿಗೆ ಬ್ರಹ್ಮಚರ್ಯದಲ್ಲಿ ಸಂಗಾತಿ ಇದ್ದಲ್ಲಿ" (7:36ಅ). ಈ ಅಭ್ಯಾಸವು ಎಷ್ಟು ವಿಶಾಲವಾಗಿ ಹರಡಿತ್ತು ಎಂಬುದನ್ನು ಅಂದಾಜು ಮಾಡಲು ಸಾಧ್ಯವಿಲ್ಲ; ಆದರೆ ಎರಡನೆಯ ಶತಮಾನದಲ್ಲಿ, ವಿವಾಹಕ್ಕಿಂತ ಬ್ರಹ್ಮಚರ್ಯವು ಬಹಳ ಪರಿಶುದ್ಧವಾದ ಹಂತವಾಗಿದೆ ಎಂದು ಕೆಲವು ಕ್ರೈಸ್ತರು ಮನದಟ್ಟುಮಾಡಿಕೊಂಡಿದ್ದರು. ವಿವಾಹವಾಗಲು ಸಮಾಜಿಕ ಒತ್ತಡದ ಅಡಿಯಲ್ಲಿ, ದಂಪತಿಗಳು ಒಂದೇ ಮಾಳಿಗೆಯ ಕೆಳಗೆ ಇರಲು ಒಪ್ಪಿಕೊಳ್ಳುತ್ತಿದ್ದರು ಆದರೆ ಲೈಂಗೀಕ ಅನ್ಯೋನ್ಯತೆಯಿಂದ ದೂರವಾಗಿರುತ್ತಿದ್ದರು. NEBಯ ವಾಕ್ಯಾಂಗವು ಪೌಲನು ಸಹ ಮನಸ್ಸಿನಲ್ಲಿ ಇಂಥಹ "ಕನ್ನಿಕಾ ವಿವಾಹ" ಆಗಿರಬಹುದು ಎಂದು ಸೂಚಿಸುತ್ತದೆ. ಹಾಗೂ, ಕೊರಿಂಥದವರಿಗೆ ಬರೆದ ಪತ್ರಿಕೆಯಲ್ಲಿ ಅಥವಾ ಮತ್ತೆಲ್ಲಿಯೂ ಪೌಲನ ಓದುಗರ ಕಾಲದಲ್ಲಿ ಇಂಥಹ ಅಭ್ಯಾಸ ರೂಡಿಯಲ್ಲಿತ್ತು ಎಂಬುದಕ್ಕೆ ಯಾವುದೇ ಸಾಕ್ಷಿಯಿಲ್ಲ. ಒಬ್ಬನು ಈ ವಿಚಾರವನ್ನು ಸರಳವಾಗಿ ಅಲ್ಲಗಳೆಯಬಹುದು. REB 1989ರಲ್ಲಿ ಮುದ್ರಿತವಾದ NEBಯ ಉತ್ತರಾಧಿಕಾರಿಯು ಈ ಅರ್ಥೈಸುವಿಕೆಯನ್ನು ತೊರೆದುಬಿಡುತ್ತದೆ; NIV ಮತ್ತು NRSV ಯೊಂದಿಗೆ "ತನಗೆ ನಿಶ್ಚಿತಾರ್ಥ ಮಾಡಿದ ಹುಡುಗಿಯೊಂದಿಗೆ" ಒಪ್ಪಂದಮಾಡಿಕೊಳ್ಳುವದು.

"ತಿಳಿಯದೇ ಇದ್ದವನಂತೆ ವರ್ತಿಸಿದ್ದಲ್ಲಿ" (ἀσχημονεῖν, *aschēmonein*) ಎಂದರೆ ಅರ್ಥವೇನು? ಪ್ರಶ್ನಿಸಲ್ಪಡುತ್ತಿರುವ ಮನುಷ್ಯನು ಕನ್ನಿಕೆಯನ್ನು ಮದುವೆಯಾಗುವದು ಅಥವಾ ಮದುವೆ ಮಾಡಿಕೊಡುವದನ್ನು ಪರಿಗಣಿಸುತ್ತಿದ್ದಾನೋ ಇಲ್ಲವೋ ಅದನ್ನು ಆಧರಿಸಿದೆ. ಯಾರು, ಪೌಲನು ತಂದೆಯು ತನ್ನ ಮಗಳನ್ನು ಮದುವೆ ಮಾಡಿಕೊಡಬೇಕೋ ಬೇಡವೋ ನಿರ್ಧರಿಸುತ್ತಿದ್ದಾನೆ ಎಂದು ವಾದಿಸುತ್ತಾರೋ ವಚನ 38ನ್ನು ಸೂಚಿಸುತ್ತಾರೆ. ಅದೇ ವ್ಯಕ್ತಿಯು ಪರಿಗಣಿಸುವದಕ್ಕಿರವಂತೆ ತೋರಿದ್ದಲ್ಲಿ ವಚನ 36ರಲ್ಲಿ ಪೌಲನು γαμέω (*gameō*, "to marry") ಎಂಬ ಕ್ರಿಯಾಪದವನ್ನು ಉಪಯೋಗಿಸುತ್ತಾನೆ. ವಚನ 38ರಲ್ಲಿ ಆತನು γαμίζω (*gamizō*) ಎಂಬ ಕ್ರಿಯಾಪದವನ್ನು ಉಪಯೋಗಿಸುತ್ತಾನೆ. ಅದು ಸಾಮಾನ್ಯವಾಗಿ "ವಿವಾಹ ಮಾಡಿಕೊಡುವದು" ಎಂಬ ಅರ್ಥವನ್ನು ಸೂಚಿಸುತ್ತದೆ (ಮತ್ತಾಯ 22:30; 24:38). ತಂದೆಯು ಪ್ರಿಯಕರನಲ್ಲ, ತನ್ನ ಮಗಳನ್ನು ಮದುವೆ ಮಾಡಿಕೊಡುವದರಿಂದ, ಎರಡೂ ವಚನಗಳಲ್ಲಿ ತಂದೆಯು ವಿಷಯವಾಗಿದ್ದಾನೆ. ಒಂದುವೇಳೆ ಅವನು **ಆಕೆಗೆ ಪ್ರಾಯ ಕಳೆದುಹೋಗುತ್ತದಲ್ಲಾ** (ᾗ ὑπέρακμος, *ē huperakmos*; 7:36) ಮದುವೆಯಾಗುವದನ್ನು ಮತ್ತು ಕುಟುಂಬವನ್ನು ಪ್ರಾರಂಭಿಸಲು ನಿಷೇಧಿಸಿದಲ್ಲಿ ಮನುಷ್ಯನು "ತಿಳಿಯದೇ ಇದ್ದವನಂತೆ ವರ್ತಿಸಿದ್ದಲ್ಲಿ" ಎಂದು ತಿಳಿದುಕೊಳ್ಳಬಹುದು.

"ತಾನು ನಿಶ್ಚಿತಾರ್ಥ ಮಾಡಿಕೊಂಡ ಕನ್ನಿಕೆಯ" (NIV) ಕುರಿತು ಸ್ವಲ್ಪ ವ್ಯತ್ಯಾಸವಿದೆ

ಎಂದು ವಾದಿಸುವವರಲ್ಲಿ ಸಹ ಬಲವಾದ ಕಾರಣವಿದೆ. ಮೊದಲನೆಯದು NASB ಯನ್ನು ಅದು γαμείτωσαν (*gameitōsan*) ರೀತಿಗಾಗಿ ಪ್ರಶ್ನಿಸಬಹುದು, "ಅವಳು ಮದುವೆಯಾಗಲಿ" (7:36). ಇದು ತೃತೀಯ ಪುರಷ ಬಹುವಚನ ಆಜ್ಞೆಯಾಗಿದೆ. ಯಾಕೆ "ಅವರು ಮದುವೆಯಾಗಲಿ" ಎಂದು ಅನುವಾದಿಸಬಾರದು? ಮುಂದೆ, ವಚನ 36ರಲ್ಲಿ γαμέω (*gameō*, "to marry") ಕ್ರಿಯಾಪದ ಮತ್ತು ವಚನ 38ರಲ್ಲಿ γαμίζω (*gamizō*, "to give in marriage") ಅದಲುಬದಲಾಗಿ ಉಪಯೋಗಿಸಬಹುದು. ಒಂದು ವಿಶಾಲವಾಗಿ ಮತ್ತು ಹೆಚ್ಚಾಗಿ ಗೌರವವನ್ನು ಹೊಂದಿರುವ ಶಬ್ದಕೋಶವಾಗಿದೆ. ಹಳೆ ಒಡಂಬಡಿಕೆಯ ಗ್ರೀಕ್-ಇಂಗ್ಲೀಷ ಶಬ್ದಕೋಶ ಮತ್ತು ಆದಿ ಕ್ರೈಸ್ತ ಸಾಹಿತ್ಯಗಳು, ಈ ಎರಡೂ ಕಿಯಾಪದಗಳನ್ನು ಈ ಸನ್ನಿವೇಶದಲ್ಲಿ ಒಂದೇ ಅರ್ಥವಿರುವ ಕ್ರಿಯಾಪದಗಳೆಂದು ಉಪಯೋಗಿಸುವಾಗ ಸನ್ನಿವೇಶವು ಉತ್ತಮವಾಗಿ ತೋರಿಬರುತ್ತದೆ.[22] ಆ ಸಂದರ್ಭದಲ್ಲಿ, ಒಬ್ಬನು "ತಿಳಿಯದೇ ಇದ್ದವನಂತೆ ವರ್ತಿಸಿದ್ದಲ್ಲಿ" ಅವನು ಮದುವೆಯಾಗಲು ಬಯಸುವ ಮನುಷ್ಯನಾಗಿದ್ದಾನೆ.

"ಅವಳ ಪ್ರಾಯ ಕಳೆದುಹೋಗುತ್ತಿರುವಾಗ" ಎಂಬ ವಾಕ್ಯಾಂಗವು ಹೆಚ್ಚಿನ ಜಟಿಲತೆಯನ್ನು NASBಯಲ್ಲಿ ಸೇರಿಸುತ್ತದೆ. ಗೀಕ್-ಕ್ರಿಯಾಪದ ತೃತೀಯ ವ್ಯಕ್ತಿ ಎಕವಚನದ ಲಿಂಗದಲ್ಲಿ ಯಾವುದೇ ರೀತಿಯ ವ್ಯತ್ಯಾಸವನ್ನು ತೋರಿಸದೇ ಇರುವದರಿಂದ, ಅನುವಾದವು "ಅವಳು" ಮತ್ತು "ಅವನು" ಎರಡೂ ಸಮಾನವಾಗಿರುವ ಸಾಧ್ಯತೆಯಿದೆ. NIVಯಲ್ಲಿ "ಒಂದುವೇಳೆ ಅವಳ ಪ್ರಾಯವು ಕಳೆದುಹೋಗುತ್ತಿದ್ದಲ್ಲಿ" ಎಂದಿದೆ ಆದರೆ NRSVಯಲ್ಲಿ "ಒಂದುವೇಳೆ ಆತನ ಭಾವೋದ್ರೇಕ ಬಲವಾಗಿದ್ದಲ್ಲಿ" ಎಂದಿದೆ. ಹೆಚ್ಚಾದ ಸನ್ನಿವೇಶ NRSVಯನ್ನು ಬೆಂಬಲಿಸುತ್ತದೆ. ಮೊದಲಿನ ವಚನದಲ್ಲಿರುವ ಕಳಕಳಿ ಲೈಂಗೀಕ ಇಚ್ಛೇ ಮತ್ತು ವಿವಾಹದ ಬಯಕೆಯಾಗಿದೆ, ಒಬ್ಬ ಯೌವನಸ್ಥನು ಯಾವ ವಯಸ್ಸಿನಲ್ಲಿ ಮದುವೆಯಾಗಬೇಕು ಎಂಬುದನ್ನು ಸೂಚಿಸುವಂಥದಲ್ಲ. ಓದುಗರು ವಿಷಯದಲ್ಲಿ ಸ್ವಲ್ಪ ಮುಂದುವರೆಯುವಿಕೆ ಇರಲಿ ಎಂದು ಬಯಸುತ್ತಾರೆ.

ಆದರೆ ಅರ್ಥೈಸುವಿಕೆಯಲ್ಲಿ ಸೂಕ್ಷ್ಮವ್ಯತ್ಯಾಸ ವಿಭಿನ್ನವಾಗಿದೆ ಮತ್ತು ಆದುದರಿಂದ ಪರಿಗಣಿಸುವದಕ್ಕೆ ಯೋಗ್ಯವಾಗಿವೆ, ಇಂದಿನ ಸಭೆಗಳು ಅಳವಡಿಸುವದಕ್ಕೆ ಪ್ರಾಯೋಗಿಕ ಪ್ರತಿಫಲ ಮಹತ್ತರವಾಗಿಲ್ಲ. ಬೇರೆ, ವಿಷಯದಲ್ಲಿ, ಪೌಲನು ಆಸಕ್ತಿಯಿರುವ ಪಂಗಡಗಳಿಗೆ ವಿವಾಹವು ಸ್ವೀಕರಿಸಲು ಯೋಗ್ಯವಾಗಿದೆ ಎಂದು ಸಲಹೆಯನ್ನು ನೀಡುತ್ತಾನೆ. ಉತ್ತಮವಾದ ಅರ್ಥೈಸುವಿಕೆ ಪೌಲನ ಎಚ್ಚರಿಕೆ, ತನ್ನ ಮಗಳನ್ನು ವಿವಾಹ ಮಾಡಿಕೊಡುವ ವ್ಯಕ್ತಿಯನಲ್ಲ, ವಿವಾಹವಾಗಲು ಪ್ರಯತ್ನಿಸುತ್ತಿರುವ ವ್ಯಕ್ತಿಯನ್ನು ಗುರಿಯಾಗಿಟ್ಟುಕೊಂಡಿದೆ ಎಂಬುದಾಗಿದೆ. ವಚನ 37 ಮತ್ತು 38 ಈ ನಿರ್ಧಾರವನ್ನು ಬಲಪಡಿಸುತ್ತವೆ.

**ವಚನ 37.** ವಿಶ್ವಾಸಿಗಳು ಅನೇಕಾವರ್ತಿ ನೈತೀಕ ಅಳವಡಿಸುವಿಕೆಯ ನಿರ್ಧಾರಮಾಡುವದನ್ನು ಎದುರಿಸುತ್ತಾರೆ ಅದರಲ್ಲಿ ಸರಳವಾದ "ನೀವು ಮಾಡಬೇಕು" "ನೀವು ಮಾಡಾರದು" ಎಂಬುದರ ಮೂಲಕ ಉತ್ತಮವಾದ ಕಾರ್ಯವಿಧಾನವನ್ನು ನಿರ್ಧರಿಸುವದು ಸಾಧ್ಯವಿಲ್ಲ. ಕೊರಿಂಥದಲ್ಲಿ ವಿವಾಹವನ್ನು ಪರಿಗಣಿಸುವ ಸಭೆಯವರು ವಿಷಯವು ಇದೇ ಆಗಿತ್ತು. ತೊಡಗಿಸಿಕೊಂಡಿರುವ ಜನರನ್ನು, ವಿಷಯದಲ್ಲಿ ಮತ್ತು ಆಚರಿಸುವ ಸಂಪ್ರದಾಯಗಳಲ್ಲಿ ಇರುವ ದಾಹವನ್ನು ಅವಲಂಭಿಸಿ, ಕೆಲವರಿಗೆ

ಉತ್ತಮವಾಗಿರುವ ನಿರ್ಧಾರ ಕೆಲವರಿಗೆ ಉತ್ತಮವಾಗಿರಲಿಕ್ಕಿಲ್ಲ. ಆದಾಗ್ಯೂ, 7:36ರರಲ್ಲಿ ಒಬ್ಬನು ಅರ್ಥೈಸುವ ವಿಷಯವನ್ನು ನಿರ್ಧರಿಸುತ್ತಾನೆ, ಅಪೊಸ್ತಲನು, ಮುನ್ನಡೆಯುವದಕ್ಕೆ ವಿವಾಹವು ಒಂದು ಉತ್ತಮವಾದ ಮಾರ್ಗವಾಗಿರಬಹುದಾದ ಸಾಧ್ಯತೆಯಿದೆ ಎಂಬುದನ್ನು ಅನುಮತಿಸುತ್ತಾನೆ.

ಸಂಭವನೀಯತೆಯನ್ನು ಸ್ವೀಕರಿಸುತ್ತಾ, ಅಪೊಸ್ತಲನು ತನ್ನ ಮೊದಲಿನ ಸಲಹೆಗೆ ಮರಳುತ್ತಾನೆ, ಆದರೆ ಪರಿಮಿತಿಯೊಂದಿಗೆ. ಪೌಲನು ನೀಡಿದ ಮಾರ್ಗದರ್ಶಿ "ಒಬ್ಬನು ಈಗಿನ ಕಷ್ಟಕಾಲದ ನಿಮಿತ್ತ" (7:26) ವಿವಾಹವಾಗುವದಕ್ಕಿಂತ ಹಾಗೇ ಉಳಿಯುವದು ಉತ್ತಮವೆಂದು ಸಲಹೆ ನೀಡುತ್ತದೆ. ಆದಾಗ್ಯೂ ಕೊರಿಂಥದ ಕ್ರೈಸ್ತರು ಕಾಲವು ಗತಿಸಿಹೋಗುತ್ತಾ ಇದೆ ಎಂಬ ಅಖಚಿತತೆಯನ್ನು ದೃಷ್ಟಿಸುತ್ತಿಲ್ಲ (7:31). ಬ್ರಹ್ಮಚರ್ಯ **ದೃಢಚಿತ್ತನಾಗಿದ್ದು** ನಿಂತಿರುವವನಿಗೆ ಉತ್ತಮವಾದ ಆಯ್ಕೆಯಾಗಿದೆ. ವಿಭಿನ್ನವಾಗಿ ಹೇಳುವಾಗ, ಯಾರಿಗೆ ಸ್ವ-ನಿಗ್ರಹವಿರುತ್ತದೋ (**ತನ್ನಿಷ್ಟವನ್ನು ನಡಿಸುವದಕ್ಕೆ ಹಕ್ಕುಳ್ಳವನಾಗಿ**) ಮತ್ತು ಅದನ್ನು **ತನ್ನೊಳಗೆ ನಿರ್ಣಯಿಸಿಕೊಂಡರೆ** ವಿವಾಹವನ್ನು ತ್ಯಜಿಸುವದು ಜಾಣತನವಾಗಿದೆ**.**

ಪುರುಷ ಪ್ರಧಾನ ಶೈಲಿಯಲ್ಲಿ, ಪೌಲನು ಸ್ತ್ರೀಯರೆಡೆಗೆ ಸ್ವಲ್ಪ ಗಮನವನ್ನು ನೀಡುತ್ತಾನೆ. ನಿರ್ಧಾರವು ಪುರುಷನದಾಗಿದೆ. ಅವನು ವಿವಾಹವನ್ನು ಎಚ್ಚರಿಕೆಯಿಂದ ಪರಿಗಣಿಸಬೇಕು, ತನ್ನ ಇಚ್ಛೆಯನ್ನು ಪರಿಗಣಿಸಬೇಕು, ಇಚ್ಛೆಯನ್ನು ಸ್ವ-ನಿಗ್ರಹದೊಂದಿಗೆ ಸಂಧಾನಮಾಡಿಕೊಳ್ಳಬೇಕು, "ತನ್ನ ಕನ್ಯತ್ವವನ್ನು" ಸರಿಯಾಗಿ ಪರಿಗಣಿಸಬೇಕು, ಗತಿಸಿಹೋಗುತ್ತಿರುವ ಕಾಲವನ್ನು ಪರಿಗಣಿಸಿ ವಿಷಯವನ್ನು ತೂಕಮಾಡಬೇಕು (7:31), ನಂತರ ವಿವಾಹವಾಗುವದೋ ಉತ್ತಮವೋ ಇಲ್ಲವೋ ಎಂಬುದನ್ನು ನಿರ್ಧರಿಸಬೇಕು. **ಅವನು ಹಾಗೆ ಮಾಡುವದು ಒಳ್ಳೇದು** ಎಂದು ಪೌಲನು ಹೇಳುತ್ತಾನೆ. ಸಾಮಾಜಕ ಒತ್ತಡವಿಲ್ಲ, **ಬೇರೆಯಾವ ರೀತಿಯಿಂದಲೂ ಬಲವಂತವೇನೂ ಇಲ್ಲ,** ಅವನು ತನ್ನ ಸ್ಥಿರತೆಯ ಆಧಾರದ ಮೇಲೆ ನಿರ್ಧರಿಸಬೇಕು. ಅವನು ತನಗೂ ಮತ್ತು ಪ್ರಿಯತಮೆಗೂ ಉತ್ತಮವಾಗಿರುವ ನಿರ್ಧಾರವನ್ನು ಅವನು ಮಾತ್ರ ಮಾಡಬೇಕು. ಒಂದುವೇಳೆ ಈ ಅರ್ಥೈಸುವಿಕೆ ಸರಿಯಾಗಿದ್ದಲ್ಲಿ, NASB ಅನುವಾದಕರು ಸೇರಿಸಿದ **ಮಗಳು** ಎಂಬ ಪದವು ತಪ್ಪಾದ-ಸಲಹೆಯಾಗಿದೆ. ವಿಷಯದಲ್ಲಿ ಪುರುಷನು ಹೆಂಡತಿಯನ್ನು ಸ್ವೀಕರಿಸುವ ವಿಷಯವನ್ನು ಪರಿಗಣಿಸುವವನಾಗಿದ್ದಾನೆ, ವಿವಾಹದಲ್ಲಿ ತನ್ನ ಮಗಳನ್ನು ನೀಡುವ ತಂದೆಯಲ್ಲ.

**ವಚನ 38.** ಸಾರಾಂಶದ ಹೇಳಿಕೆಯೊಂದಿಗೆ, ಪೌಲನು 7:25ರಲ್ಲಿ ಪರಿಚಯಿಸಿದ ಚರ್ಚೆಯನ್ನು ಮುಕ್ತಾಯ ಮಾಡುತ್ತಾನೆ. ಅದೇ ಸಮಯದಲ್ಲಿ, ಅವನು ತನ್ನ ವಿಷಯವನ್ನು ಸಂಕ್ಷಿಪ್ತಗೊಳಿಸುತ್ತಾನೆ, ಒಬ್ಬ ಹೊಸ ವಿಶ್ವಾಸಿಗೆ ತಾನು ಇದ್ದ ಸ್ಥಿತಿಯಲ್ಲಿ ಇರುವದು ಉತ್ತಮ (7:20). ಉದಾಸೀನ ಮಾಡುವದಲ್ಲ, ಇದನ್ನೇ ಪೌಲನು ಕ್ರೈಸ್ತರ ಪ್ರಶ್ನೆಗೆ ಸಹಾಯಮಾಡಲು ನೀಡುವ ಸಾರ್ವತ್ರಿಕವಲ್ಲದ "ಸರಿ" ಉತ್ತರವಾಗಿದೆ. ಅನೇಕ ನೈತಿಕ ಆಯ್ಕೆಗಳು ಸ್ಪಷ್ಟವಾದ ಸರಿ ಮತ್ತು ತಪ್ಪು ಪರ್ಯಾಯ ವ್ಯವಸ್ಥೆಗಳಾಗಿವೆ; ಆದರೆ ವಿವಾಹವಾಗುವದನ್ನು ಆಯ್ದುಕೊಳ್ಳುವಲ್ಲಿ ಮತ್ತು ಬಹಳ ಮಟ್ಟಿಗೆ ಇತರ ವಿಷಯಗಳಲ್ಲಿ, ಪರಿಸ್ಥಿತಿ ಮತ್ತು ವಯಕ್ತಿಕ ಆಯ್ಕೆ ದೈವೀಕ ನಿರ್ಧಾರಗಳ ಮೌಲ್ಯಮಾಪನ ಮಾಡುತ್ತಿರುವ ಹಾಗೆ ಅವನು

ಅಂತಿಮವಾಗಿ ಅವನು ತೆಗೆದುಕೊಳ್ಳುವ ಕಾರ್ಯವಿಧಾನಕ್ಕಿಂತ ಆಯ್ಕೆಯ ಸಮಂಜಸತೆ ತಿಳಿದುಬರುತ್ತದೆ.

ಆದಾಗ್ಯೂ, ಅನುವಾದಿಸಿದ ಕ್ರಿಯಾಪದ "ಮದುವೆ ಮಾಡಿಕೊಡಲಿ" (γαμίζω, *gamizō*) ಪೌಲನ ಬರಹದಲ್ಲಿ ಮಾತ್ರ ಕಂಡುಬರುತ್ತದೆ, ಇದನ್ನು ಯೇಸು ಸ್ವಾಮಿ ಆರು ಬಾರಿ ಉಪಯೋಗಿಸಿದ್ದಾರೆ. ಆತನ ಹೇಳಿಕೆಗಳಲ್ಲಿ, "ಮದುವೆ ಮಾಡಿಕೊಡಲಿ" ಎಂಬ ಪದವು ನಿರಂತರವಾಗಿ ಅರ್ಥವನ್ನು ಹೊಂದಿದೆ (ಮತ್ತಾಯ 24:38) ಅಥವಾ, ಕರ್ಮಣಿ ಕ್ರಿಯಾಪದವಾಗಿ "ಮದುವೆ ಮಾಡಿಕೊಡುವದು" (ಮತ್ತಾಯ 22:30; ಮಾರ್ಕ 12:25; ಲೂಕ 17:27; 20:34, 35). ಪದವು ಹೊಸ ಒಡಂಬಡಿಕೆಯ ಪೂರ್ವದ ಗ್ರೀಕ್ ಸಾಹಿತ್ಯದಲ್ಲಿ ಎಲ್ಲಿಯೂ ಕಂಡುಬರುವದಿಲ್ಲ. ಇಲ್ಲಿ ಅದರ ಉಪಯೋಗವು 7:36 ಮತ್ತು 7:38 ಅನುವಾದ "ಕನ್ನಿಕೆಯರ" ಪರವಾಗಿ ಬಲವಾದ ವಿವಾದಕ್ಕೆ ಗುರಿಯಾಗಿದೆ. ಹಾಗೂ, ಹೊಸ ಒಡಂಬಡಿಕೆಯಲ್ಲಿ ಮತ್ತು ಎಲ್ಲೆಡೆಯಲ್ಲಿ ಈ ಕ್ರಿಯಾಪದದ ಕೊರತೆಯು, ಸನ್ನಿವೇಶದೊಂದಿಗೆ, ಪೌಲನು ಕೇವಲ ತಾನು 7:26ರಲ್ಲಿ ಪರ್ಯಾಯ ರೀತಿಯಲ್ಲಿ ತಾನು ಈಗಾಗಲೇ ಹೇಳಿದ ಸಲಹೆಯನ್ನು ನೀಡುತ್ತಾನೆ. ಅದರ ಅರ್ಥ ಅವನು ಸದ್ಯದ ಸ್ಥಿತಿ ಮದುವೆಯನ್ನು ಮಾಡಿಕೊಳ್ಳುವದು ಸಲಹೆಗೆ ಯೋಗ್ಯವಲ್ಲ ಎಂಬುದನ್ನು ಪುನರಾವರ್ತಿಸುತ್ತಾನೆ ಆದರೆ ಈಗಾಗಲೇ ಮದುವೆಯಾದವರು ಹ್ಯಾಗೂ ಪಾಪವನ್ನು ಮಾಡುತ್ತಿಲ್ಲ.

## "ಮರುಮದುವೆಗೆ ಪ್ರಯತ್ನಿಸಬೇಡಿರಿ" (7:39, 40)

**39ಮುತ್ತೈದೆಯು ತನ್ನ ಗಂಡನು ಜೀವದಿಂದಿರುವ ತನಕ ಅವನಿಗೆ ಬದ್ಧಳಾಗಿದ್ದಾಳೆ; ಗಂಡನು ಸತ್ತಿದ್ದರೆ ಆಕೆಯು ಬೇಕಾದವನನ್ನು ಮದುವೆಮಾಡಿಕೊಳ್ಳುವದಕ್ಕೆ ಸ್ವತಂತ್ರಳಾಗಿದ್ದಾಳೆ.**
**40ಆದರೆ ಈ ಕಾರ್ಯವು ಕರ್ತನ ಶಿಷ್ಯರಿಗೆ ತಕ್ಕಂತೆ ನಡೆಯಲಿ, ಆದರೂ ಮದುವೆಮಾಡಿಕೊಳ್ಳುವದಕ್ಕಿಂತಲೂ ಇದ್ದ ಹಾಗೆಯೇ ಇರುವದು ಆಕೆಗೆ ಸುಖವೆಂದು ತನ್ನ ಅಭಿಪ್ರಾಯ; ನನಗೂ ದೇವರ ಆತ್ಮವುಂಟೆಂದು ನೆನಸುತ್ತೇನೆ.**

**ವಚನ 39.** ಪೌಲನು ವಿವಾಹದ ಕುರಿತಾಗಿ ಹೇಳಿರುವ ಪ್ರಥಮ ಸಂಗತಿಗಳಲ್ಲಿ ಒಂದು ಯಾವದೆಂದರೆ ಕ್ರೈಸ್ತರು ತಮ್ಮ ಸಂಗಾತಿಯನ್ನು ಬಿಡಬಾರದು (7:10, 11). ಈ ವಿಷಯಲ್ಲಿ ಆತನು ಯಾವುದೇ ರೀತಿಯ ಮೀಸಲಾತಿಯನ್ನು ನೀಡಲಿಲ್ಲ. ವಿವಾಹದ ಕುರಿತಾದ ವಿಷಯದ ಕೊನೆಯಲ್ಲಿ ತಾನು ಮೊದಲು ಹೇಳಿರುವದನ್ನು ಪುನರಾವರ್ತಿಸುತ್ತಾನೆ: ಹೆಂಡತಿಯು ತನ್ನ ಗಂಡನು ಜೀವಿಸುವವರೆಗೆ ಆತನಿಗೆ ಬದ್ಧಳಾಗಿದ್ದಾಳೆ. **ಮುತ್ತೈದೆಯು ತನ್ನ ಗಂಡನು ಜೀವದಿಂದಿರುವ ತನಕ ಅವನಿಗೆ ಬದ್ಧಳಾಗಿದ್ದಾಳೆ** ಎಂದು ನಾವು ಊಹಿಸಬಹುದು. ಪೌಲನು ತನ್ನ ಪ್ರಾರಂಭದ ಅಂಶಕ್ಕೆ ಹಿಂತಿರುಗುತಿದ್ದಾನೆ (ರೋಮಾ 7:2).

7:25-38ರಲ್ಲಿರುವ ಸಲಹೆಗಳು ವಿವಾಹವಾಗಲು ಪ್ರಯತ್ನಿಸುತ್ತಿರುವ ಯೌವನಸ್ಥ ಪುರುಷನನ್ನು ಸಂಬೋಧಿಸುತ್ತವೆ. ವಚನ 7:39, 40ರಲ್ಲಿ ಪೌಲನು ತನ್ನ ಗಮನವನ್ನು ಇದೇ ನಿರ್ಧಾರವನ್ನು ಪರಿಗಣಿಸುತ್ತಿರುವ ವಿಧವೆಯ ಕಡೆಗೆ ತಿರುಗಿಸುತ್ತಾನೆ. ಕೆಲವೊಮ್ಮೆ ಚಿಕ್ಕ ವಯಸ್ಸಿನಲ್ಲಿ ಸಂಗಾತಿ ಮರಣ ಹೊಂದುವಾಗ, ಯೌವನಸ್ಥ ವಿಧವೆ ಅಥವಾ ವಿಧುರನನ್ನು ಹಿಂದೆ ಬಿಟ್ಟುಹೋಗುವಾಗ, ಜೀವಿಸಿರುವ ಸಂಗಾತಿಯು ಮರಣಹೊಂದಿದವರ ಮೇಲಿನ

ಗೌರವದಿಂದ ಸೆಳೆಯಲ್ಪಟ್ಟು ಪ್ರೀತಿ ಮತ್ತು ಶ್ರದ್ಧೇಯಿಂದ ಜೀವನದುದ್ದಕ್ಕೂ ಯಾರನ್ನೂ ವಿವಾಹವಾಗದೇ ಇರುವ ನಿರ್ಧಾರವನ್ನು ತನ್ನ ಮೇಲೆ ಹೇರಿಕೊಳ್ಳಬಹುದು. ಪೌಲನಿಗೆ ಇಂಥಹ ನಿರ್ಧಾರದ ಕುರಿತು ಯಾವುದೇ ಆಕ್ಷೇಪಣೆ ಇರುವದಿಲ್ಲ ಆದರೆ ಆತನು ದೇವರಿಗೆ ನಂಬಿಗಸ್ತರಾಗಿರಲು ಇಂಥಹ ಪ್ರತಿಜ್ಞೆಯ ಅವಶ್ಯಕತೆಯಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾನೆ.

ಸಂಗಾತಿಯು ಮರಣ ಹೊಂದಿದಾಗ, ಜೀವಿಸಿರುವ ಸಂಗಾತಿಯು ಎರಡನೆಯ ಸಾರಿ ವಿವಾಹವಾಗಲು ಸ್ವತಂತ್ರರಾಗಿದ್ದಾರೆ ಪೌಲನು ಒಂದು ನಿರ್ಭಂದವನ್ನು ನೀಡುತ್ತಾನೆ: ವಿಧವೆ **ಕರ್ತನಲ್ಲಿ ಮಾತ್ರ** ವಿವಾಹವಾಗಬೇಕು. **ಮರಣಹೊಂದಿದ** (κοιμάομαι, *koimaomai*) ಎಂಬ ಪದವು ವಾಸ್ತವದಲ್ಲಿ "ನಿದ್ರೆಹೋದಾಗ" ಎಂಬ ಅರ್ಥವನ್ನು ನೀಡುತ್ತದೆ. ಇನ್ನೊಂದು ಸನ್ನಿವೇಶದಲ್ಲಿ ಪೌಲನು ಈ ಪದವನ್ನು ವಿಶೇಷವಾಗಿ ಕೇವಲ ವಿಶ್ವಾಸಿಗಳ ಮರಣಕ್ಕೆ ಉಪಯೋಗಿಸುತ್ತಾನೆ. ಇಲ್ಲಿ ಆತನು, ಅನೇಕ ಸಂಗತಿಗಳಲ್ಲಿ, ಕ್ರೈಸ್ತ ವಿಧವೆ ಕ್ರೈಸ್ತ ಪತಿಯನ್ನು ವಿವಾಹವಾಗಿರುವ ಕಲ್ಪನೆಯನ್ನು ಮಾಡಿಕೊಳ್ಳುತ್ತಿರಬಹುದು.

"ಕರ್ತನಲ್ಲಿ" ಎಂಬ ವಾಕ್ಯಾಂಗವು, ಮೊದಲು ದೃಷ್ಟಿಯಲ್ಲಿ ವಿಧವೆಯು ಸಹವಿಶ್ವಾಸಿಯನ್ನು ಹೊರತುಪಡಿಸಿ ಯಾರನ್ನೂ ವಿವಾಹವಾಗಬಾರದು ಎಂದು ಸಲಹೆ ನೀಡುತ್ತದೆ ಆದರೆ ಕೆಲವು ವಿಭಿನ್ನವಾದ ಅರ್ಥವಿದೆ ಎಂದು ವಾದಿಸುತ್ತಾರೆ. ಬಹುಶಃ ಪೌಲನು ವಿಧವೆಗೆ, ವಿಶ್ವಾಸಿಯಾಗಿ, ಅವಳು ಮದುವೆಯಾಗುವುದಾದರೆ ಕ್ರೈಸ್ತ ತತ್ವಗಳ ಮಾರ್ಗದರ್ಶನವನ್ನು ಹೊಂದಬೇಕು ಎಂಬುದನ್ನು ಜ್ಞಾಪಿಸುತ್ತಿರಬಹುದು. ಆ ಸಾಧ್ಯತೆಯನ್ನು ಅನುಮತಿಸುತ್ತಾ, ಒಬ್ಬನು ಕ್ರೈಸ್ತ ವಿಧವೆಯು ತನ್ನ ಆಧ್ಯತೆಗಳನ್ನು ಕ್ರಮಪಡಿಸಿಕೊಳ್ಳಬೇಕು ಇದರಿಂದಾಗಿ ವಿಶ್ವಾಸಿಗೆ ಮೊದಲ ಆಧ್ಯತೆಯನ್ನು ನೀಡಲು ಸಹಾಯವಾಗುತ್ತದೆ. ಪೌಲನು ನಾರ್ಕಿಸನ ಕುಟುಂಬದವರ ಕುರಿತು (ರೋಮಾ 16:11) "ಕರ್ತನಲ್ಲಿ" ಎಂಬ ಪದವನ್ನು ಉಪಯೋಗಿಸುವಾಗ, ಕುಟುಂಬದ ಎಲ್ಲರನ್ನಲ್ಲ, ಅವನು ಸ್ಪಷ್ಟವಾಗಿ ಕುಟುಂಬದಲ್ಲಿ ಯಾರು ಕ್ರೈಸ್ತರಾಗಿದ್ದಾರೋ ಅವರನ್ನು ಮಾತ್ರ. ವಚನ 7:39ರಲ್ಲಿರುವ ವಾಕ್ಯಾಂಗದಿಂದ ಇದು ಸ್ಪಷ್ಟವಾಗುತ್ತದೆ.

**ವಚನ 40.** ಪೌಲನು ಯೌವನಸ್ಥ ಪರುಷರಿಗೆ ವಿವಾಹವನ್ನು ಮುಂದೂಡುವದು ಅಥವಾ ಒಟ್ಟಾರೆ ವಿವಾಹದಿಂದ ದೂರವಿರುವದು ಜಾಣತನವಾಗಿದೆ ಎಂದು ಸಲಹೆಯನ್ನು ನೀಡುತ್ತಿದ್ದಾನೆ ಯಾಕಂದರೆ ಕಷ್ಟಕಾಲದ ನಿಮಿತ್ತ (7:26) ಮತ್ತು ಲೋಕದ ಸ್ಥಿತ್ಯಂತರ ಸ್ವರೂಪದಿಂದಾಗಿ (7:31). ಹಾಗೂ, ಅಪೊಸ್ತಲನು ವಿವಾಹವನ್ನು ನಿಷೇಧಿಸುವದಿಲ್ಲ. ಅದರಂತೆ, ಪೌಲನು ವಿಧವೆ ತಿರುಗಿ ವಿವಾಹವಾಗುವದು ಪಾಪವೇನಲ್ಲ ಎಂಬದನ್ನು ಸ್ಪಷ್ಟಪಡಿಸುತ್ತಾನೆ. ಇದಕ್ಕೆ ಸೇರಿಸುತ್ತಾ, **ಮದುವೆಮಾಡಿಕೊಳ್ಳುವದಕ್ಕಿಂತಲೂ ಇದ್ದ ಹಾಗೆಯೇ ಇರುವದು ಆಕೆಗೆ ಸುಖವೆಂದು ತನ್ನ ಅಭಿಪ್ರಾಯ** ಎಂಬುದನ್ನು ಹೇಳುತ್ತಾನೆ. ಇದೇ ಅಂಶವು ಅವನನ್ನು ಯೌವನಸ್ಥ ಪುರುಷರಿಗೂ ವಿಧವೆಯರಿಗೆ ಅನ್ವಯಿಸಿದಂತೆ ಸಮಾನವಾಗಿ ಅನ್ವಯಿಸುತ್ತದೆ ಎಂಬ ಸಲಹೆಯನ್ನು ನೀಡುವತ್ತ ನಡೆಸುತ್ತದೆ. ಅವಳು ಸಂತೋಷವಾಗಿರುತ್ತಾಳೆ, ಯಾಕಂದರೆ ಕ್ರೈಸ್ತನು "ಈಗಿನ ಕಷ್ಟಕಾಲದ ನಿಮಿತ್ತ" ಅವಿಶ್ವಾಸಿಗಳಿಂದ ಎದುರಿಸಲ್ಪಡುವಾಗ ಅವಳು ತನ್ನ ಗಂಡನ ಕುರಿತಾದ ಚಿಂತೆಯ ಒತ್ತಡದಲ್ಲಿ ಬೀಳುವದಿಲ್ಲ ಇದಕ್ಕೂ ಹೆಚ್ಚಾಗಿ, ಅವಳು ತನ್ನ ಬಲವನ್ನು ಕರ್ತನ ಸೇವೆಯಲ್ಲಿ ಯಾವುದೇ ಅಡೆತಡೆಯಿಲ್ಲದೇ ಸಮರ್ಪಿಸಲು ಸಾಧ್ಯವಾಗುತ್ತದೆ.

ವಿವಾಹವಾಗಲು ಪ್ರಯತ್ನಿಸುತ್ತಿರುವ ಒಬ್ಬ ಯೌವನಸ್ಥನಿಗೆ ಸಲಹೆಯನ್ನು ನೀಡುತ್ತಿರುವಾಗ, ಪೌಲನು "ನಾನು ನನ್ನ ಅಭಿಪ್ರಾಯವನ್ನು ನೀಡುತ್ತೇನೆ" ಎಂಬ ಪದವನ್ನು ಉಪಯೋಗಿಸುತ್ತಾನೆ (7:25). ವಿಧವೆಯರಿಗೆ ಹೋಲಿಸಬಹುದಾದ ಅರ್ಹತೆಯನ್ನು ನೀಡಿದ್ದಾನೆ: "ನನ್ನ ಅಭಿಪ್ರಾಯದಲ್ಲಿ." ಈ ಸಾರಿ, ಆತನು **ನನಗೂ ದೇವರ ಆತ್ಮವುಂಟೆಂದು ನೆನಸುತ್ತೇನೆ** ಎಂಬುದನ್ನು ಈ ವಾಕ್ಯಾಂಗದಲ್ಲಿ ಸೇರಿಸುತ್ತಾನೆ. ಪೌಲನ ಅಭಿಪ್ರಾಯದಲ್ಲಿ ಈ ವಿಷಯಗಳಲ್ಲಿ ಸಾಮಾನ್ಯ ಹೇಳಿಕೆಗಳಿಗಿಂತ ಹೆಚ್ಚಾಗಿವೆ, ಆದಾಗ್ಯೂ, ಅವನು ತನ್ನ ಅಭಿಪ್ರಾಯ ನೀಡುವಲ್ಲಿ ಮತ್ತು ದೇವರ ನಿಯಮವನ್ನು ಸೂಚಿಸುವಲ್ಲಿ ವ್ಯತ್ಯಾಸವನ್ನು ಮಾಡುತ್ತಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ. ಅವನು ". . . ಹೆಂಡತಿಯು ಗಂಡನನ್ನು ಬಿಟ್ಟು ಅಗಲಬಾರದು" (7:10) ಎಂದು ತನ್ನ ಅಭಿಪ್ರಾಯ ಎಂದು ಹೇಳಲಿಲ್ಲ. ಅವನು ತನ್ನ ಅಭಿಪ್ರಾಯದ ಪದಗಳನ್ನು ಹೆಸರಿಸುವಾಗ, ಪೌಲನು ಸಂಪೂರ್ಣವಾಗಿ ಸರಿ ಅಥವಾ ತಪ್ಪಾದ ಸನ್ನಿವೇಶಗಳ ಕುರಿತು ಮಾತನಾಡುತ್ತಿಲ್ಲ.

ಇನ್ನೂ, ಕ್ರೈಸ್ತರಿಗೆ ಉತ್ತಮವಾದ ಕ್ರಿಯಾವಿಧಾನ ಸಂಪೂರ್ಣವಾದ ಉದಾಸೀನತೆಯ ವಿಷಯವಲ್ಲ. ಒಬ್ಬನು ವೃತ್ತಿಯಲ್ಲಿ ಅಗಸ ಅಥವಾ ಅಥವಾ ಬಡಿಗನಾಗಿರುವದು, ಉದಾಹರಣೆಗೆ, ವಿಶ್ವಾಸಿಗಳಿಗೆ ಸಾಮಾನ್ಯ ಸಂಗತಿಗಳಲ್ಲಿ ಉದಾಸೀನತೆಯ ವಿಷಯವಾಗಿದೆ. ಇದಕ್ಕೆ ವಿರೋಧವಾಗಿ, ಒಬ್ಬನ ವೈವಾಹಿಕ ಸ್ಥಿತಿ, ಕೊರಿಂಥದ ಸನ್ನಿವೇಶದಲ್ಲಿ ನೀಡಿರುವ ಪ್ರಕಾರ, ಗುಣಮಟ್ಟದ ಮೇಲೆ ಪರಿಣಾಮವನ್ನು ಬೀರುವ ಪರಿಣಾಮಗಳು ಅವನ ಅಥವಾ ಅವಳ ಕ್ರೈಸ್ತ ಜೀವಿತದ ಮೇಲೆ ಬೀಳಬಹುದು. ಪೌಲನು ತನ್ನ ಸ್ವಂತ ಅಭಿಪ್ರಾಯದ ಧ್ವನಿಯನ್ನು ಕೊರಿಂಥದವರ ಮೇಲೆ ಎತ್ತುವಾಗ, ಅವರು ಅದನ್ನು ಗಂಭೀರವಾಗಿ ಸ್ವೀಕರಿಸಬೇಕು ಯಾಕಂದರೆ "ದೇವರ ಆತ್ಮನು" ಇದನ್ನು ಅವನ ಸಲಹೆಯ ಮಾತುಗಳಲ್ಲಿ ಪ್ರಕಟಿಸಿದ್ದಾನೆ.

# ಅಳವಡಿಸಿಕೊಳ್ಳುವದು

## ಆಯ್ಕೆ ಮತ್ತು ಬುದ್ಧಿವಂತಿಕೆ

ವೇದವಾಕ್ಯವನ್ನು ವಿಧೇಯರಾಗುವದಕ್ಕಾಗಿ ಇರುವ ಆಜ್ಞೆಗಳ ಸರಣಿಯ ಮಟ್ಟಕ್ಕೆ ಇಳಿಸುವವರಿಗೆ ಪೌಲನ ಸಲಹೆಗಳು ನೆಮ್ಮದಿಯನ್ನು ತರಲಾರವು. ಕೊರಿಂಥದಲ್ಲಿರುವ ಅಪೊಸ್ತಲರಿಗೆ ವಿವಾಹದ ಕುರಿತಾದ ಸಲಹೆಗಳು ತಕ್ಷಣದ ಸನಿವೇಶವನ್ನು ದಾಟಿ ಹೋಗುತ್ತವೆ. ವಿವಿಧ ಪರಿಸ್ಥಿತಿಗಳಲ್ಲಿ ಕ್ರೈಸ್ತರನ್ನು ವಿವಿಧ ಮಾರ್ಗಗಳಲ್ಲಿ ವರ್ತಿಸಲು ಕರೆಯನ್ನು ನೀಡುತ್ತವೆ. ಜನರು ಆಯ್ಕೆ ಮಾಡಿದ "ಜಾಣತನದ" ಅಥವಾ "ಮೂಢತನದ," "ಸರಿ" ಅಥವಾ "ತಪ್ಪು" ಅಲ್ಲದ ನಿರ್ಧಾರಗಳನ್ನು ಎದುರಿಸುತ್ತಾರೆ. ಎಂಬುದನ್ನು ಅವರು ಆಯ್ಕೆ ಮಾಡಿದ ಕಾರ್ಯ ವರ್ಣಿಸುತ್ತದೆ. ಕೊರಿಂಥದಲ್ಲಿರುವ ಕ್ರೈಸ್ತರ ಸನ್ನಿವೇಶವನ್ನು ನೀಡಿ, ಅವಿವಾಹಿತ ಪುರುಷರಿಗೆ ಮತ್ತು ಸ್ತ್ರೀಯರಿಗೆ ವಿವಾಹವಾಗದೇ ಹಾಗೇ ಉಳಿಯುವದು ಜಾಣತನ ಆದರೆ ಅವರು ವಿವಾಹವಾಗುವದು ತಪ್ಪೇನಲ್ಲ. ಈ ವಿಷಯದಲ್ಲಿ, ಅಪೊಸ್ತನಲು ಪ್ರತಿಯೊಂದು ಸನ್ನಿವೇಶದಲ್ಲಿ ಸರಿಹೊಂದುವ ಯಾವುದೇ ನಿಯಮವನ್ನು ನೀಡುವದಿಲ್ಲ.

ಕ್ರೈಸ್ತರಿಗೆ ನಿಯಮಗಳು ಬೇಕು. ಸುಳ್ಳು ಹೇಳುವದು ತಪ್ಪು, ಕಳ್ಳತನ ಮಾಡುವದು

ಅಥವಾ ವ್ಯಭಿಚಾರ ಮಾಡುವದು ಈ ಕ್ರಿಯೆಗಳು ಸ್ವ-ಸೇವೆಯನ್ನು ಮಾಡುವದರಿಂದ. ಹಾಗೂ, ವಿಶ್ವಾಸಿಗಳು ಅಸಂಖ್ಯಾತ ಸನ್ನಿವೇಶಗಳಲ್ಲಿ ಅಳವಡಿಸಿಕೊಳ್ಳಲು ತಮ್ಮ ವೇದವಾಕ್ಯದ ತತ್ವಗಳಲ್ಲಿ ಎದುರಿಸುತ್ತಾರೆ ಆದರೆ ಬದಲಾಯಿಸಲಾಗದ ನಿಯಮಗಳನಲ್ಲ. ವಿವಾಹವಾಗಲು ಪ್ರಯತ್ನಿಸುತ್ತಿರುವ ಕೊರಿಂಥದಲ್ಲಿರುವ ಕ್ರೈಸ್ತರು ಇಂಥಹ ಸನ್ನಿವೇಶದಲ್ಲಿ ಇದ್ದಾರೆ. ಈ ವಿಷಯದಲ್ಲಿ ಪೌಲನ ಸಮಾಲೋಚನೆ ನೀಡಿರುವ ಕಾರ್ಯವಿಧಾನ, ಪರಿಸ್ಥಿತಿಯನ್ನು ಆಧರಿಸಿ ಸರಿ ಅಥವಾ ತಪ್ಪಾಗಿರಬಹುದು ಎಂಬುದನ್ನು ಸ್ಪಷ್ಟೀಕರಿಸುತ್ತದೆ. ಸತ್ಯವೇದ ಆಧಾರಿತ ಸೂಚನೆಗಳೊಂದಿಗೆ, ವಿಶ್ವಾಸಿಗಳು ಕೆಲವೊಮ್ಮೆ ತಮ್ಮ ಸಹ ಕ್ರೈಸ್ತರಿಂದ, ಕುಟುಂಬದ ಸದಸ್ಯರಿಂದ ಮತ್ತು ವಿಶ್ವಸನೀಯ ಸ್ನೇಹಿತರಿಂದ ಸಲಹೆಯ ಅವಶ್ಯಕತೆಯನ್ನು ಹೊಂದಿರುತ್ತಾರೆ; ಆದರೆ ಇಂಥಹ ಸಲಹೆಗಳು ಸತ್ಯವೇದವು ಏನು ಹೇಳುತ್ತದೋ ಅದನ್ನು ಎಂದಿಗೂ ತಿರಸ್ಕರಿಸುವದಿಲ್ಲ. ದೇವಜನರು ವೇದವಾಕ್ಯದ ಬೋಧನೆಯನ್ನು ತಮ್ಮ ದಿನ ನಿತ್ಯದ ಜೀವಿತದಲ್ಲಿ ಅಳವಡಿಸಿಕೊಳ್ಳುವ ತಮ್ಮ ಉತ್ತಮವಾದ ತೀರ್ಮಾನವನ್ನು ಉಪಯೋಗಿಸಿಕೊಳ್ಳಬೇಕು.

## ವಿವಾಹ, ಜೀವಿತದುದ್ದಕ್ಕೂ ಇರುವ ವಚನಬದ್ಧತೆಯಾಗಿದೆ

ವಿವಾಹವು ಪುರುಷ ಮತ್ತು ಸ್ತ್ರೀಯ ಮಧ್ಯದಲ್ಲಿರುವ ರೋಮಾಂಚಕ ಪ್ರೀತಿಯ ಮೇಲೆ ಕಟ್ಟಲ್ಪಡಬೇಕು ಎಂಬ ವಿಚಾರವು ಲೋಕದಲ್ಲಿ ನಿಜವಾಗಿಯೂ ಹೊಸ ವಿಚಾರವಾಗಿದೆ. ಇಸಾಕನ ಸೇವಕನು ಹಿಂತಿರುಗಿ ಬಂದು ರೆಬ್ಬೆಕ್ಕಳನ್ನು ತನ್ನ ಯಜಮಾನನಿಗೆ ಪರಿಚಯಿಸಿದಾಗ, ಸತ್ಯವೇದವು ಹೇಳುತ್ತದೆ, “ಆಕೆಯು ಅವನ ಹೆಂಡತಿಯಾದಳು ಮತ್ತು ಆತನು ಅವಳನ್ನು ಪ್ರೀತಿಸಿದನು” (ಆದಿಕಾಂಡ 24:67). ಪ್ರೀತಿಯು ವಿವಾಹವನ್ನು ಅನುಸರಿಸುವದು, ಇದು ಕ್ರಮವಾಗಿತ್ತು: ವಚನಬದ್ಧತೆ ಮೊದಲು ಬರುತ್ತದೆ; ನಂತರ ಪ್ರೀತಿಯು ಅನುಸರಿಸುತ್ತದೆ. ಒಬ್ಬನು ಪ್ರೀತಿಸುವದನ್ನು ಆಯ್ಕೆ ಮಾಡಿದ್ದಲ್ಲಿ, ಅವನು ಅಥವಾ ಅವಳು ಜೀವಿತದುದ್ದಕ್ಕೂ ತಮ್ಮ ಸಂಗಾತಿಗೆ ಕೇವಲ ವಚನಬದ್ಧತೆಯನ್ನು ನಿರ್ವಹಿಸುವದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಪ್ರೀತಿಯು ಒಬ್ಬನ ತನ್ನ ಸಾಮಥ್ರ್ಯಕ್ಕಿಂತ ಇನ್ನೊಬ್ಬ ವ್ಯಕ್ತಿಯು ಕಾಳಜಿಯನ್ನು ವಹಿಸುವದಕ್ಕಿಂತ ಒಬ್ಬನು ತನ್ನ ಗಂಡನಿಗಾಗಲಿ ಅಥವಾ ಹೆಂಡತಿಗಾಗಲಿ ಸಲ್ಲಿಸುವ ಗೌರವಕ್ಕಿಂತ ಹೆಚ್ಚಾದದ್ದನ್ನು ಮಾಡುವದಾಗಿದೆ. ಸಾಮಾನ್ಯವಾಗಿ, ಒಬ್ಬ ಪುರುಷನಾಗಲಿ ಅಥವಾ ಒಬ್ಬ ಸ್ತ್ರೀಯಾಗಲಿ ತನ್ನ ಸಂಗಾತಿಗೆ ವಿಚ್ಛೇಧನವನ್ನು ನೀಡಿದಾಗ, ಅದು ಬಹುಶಃ ಅವನ ಅಥವಾ ಅವಳ ಪ್ರೀತಿಸುವ ಸಾಮರ್ಥ್ಯಕ್ಕಿಂತ ಹೆಚ್ಚಾಗಿ ವಿಚ್ಛೇದಿತ ಸಂಗಾತಿಗೆ ತನ್ನ ಪ್ರೀತಿಯ ಗುಣಗಳಿಗಿಂತ ಹೆಚ್ಚಿನದನ್ನು ಹೇಳುತ್ತದೆ. ಪೌಲನು ಗಂಡಂದಿರು ತಮ್ಮ ಹೆಂಡತಿಯರನ್ನು ಪ್ರೀತಿಸಬೇಕು ಎಂದು ಸೂಚಿಸುವಾಗ (ಎಫೆಸ 5:25), ಅವನು ಮೋಹಪರವಶತೆಯ ಆಕರ್ಷಣೆಗಿಂತ ಅಗಾಧವಾದ ಏನನ್ನೋ ಆಜ್ಞಾಪಿಸುತ್ತಾನೆ.

ವ್ಯಾಖ್ಯಾನದಿಂದ, ಸತ್ಯವೇದವು ಮದುವೆಯು ಜೀವಿತದುದ್ದಕ್ಕೂ ಇರುವ ವಚನಬದ್ಧತೆಯಾಗಿದೆ. ಈ ವಚನಬದ್ಧತೆಯನ್ನು ಮೂರು ಕ್ಷೇತ್ರಗಳಲ್ಲಿ ಇರಿಸಲಾಗಿದೆ. *ಮೊದಲನೆಯದಾಗಿ, ಮದುವೆಯಾಗುವ ಇಬ್ಬರು ಕ್ರೈಸ್ತರು ತಮ್ಮ ಪರವಾಗಿ ದೇವರಲ್ಲಿ ನಿಷ್ಠೆಯನ್ನು ತೆಗೆದುಕೊಳ್ಳುತ್ತಾರೆ.* ಪ್ರಾರಂಭದಲ್ಲಿ ದೇವರು ಹೇಳಿದನು, “ಈ ಕಾರಣದಿಂದ

ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಸಿಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗಿರುವರು" (ಆದಿಕಾಂಡ 2:24). ಪಿತೃಗಳ ಕಥೆಗಳಲ್ಲಿ ಮಾತೃಗಳ ಕುರಿತಾದ ಕಥೆಗಳೂ ಸಹ ಆಗಿವೆ. ಗಂಡ ಮತ್ತು ಹೆಂಡತಿ ಯಾರು ದೇವರ ಮಾರ್ಗದರ್ಶನವನ್ನು ಅನುಸರಿಸುತ್ತಾರೋ ಪರಸ್ಪರರನ್ನು ಗೌರವಿಸುತ್ತಾರೆ ಮತ್ತು ಪ್ರತಿಯೊಬ್ಬರು ಇನ್ನೊಬ್ಬರ ಮೇಲೆ ಇರುವ ಅವಲಂಭನೆಯೊಂದಿಗೆ ಸೂಕ್ಷ್ಮವಾಗಿ ವ್ಯವಹರಿಸುತ್ತಾರೆ; ಅವರು ಪ್ರೀತಿಸುವವರಿಂದ ದ್ವೇಷಕ್ಕೆ ಒಳಗಾಗುವ ಅವಮಾನದ ಕುರಿತು ಕರುಣೆಯುಳ್ಳವರಾಗಿರುತ್ತಾರೆ.

*ಎರಡನೆಯದಾಗಿ ಇಬ್ಬರೂ ವ್ಯಕ್ತಿಗಳು ಪರಸ್ಪರರೊಂದಿಗೆ ಪ್ರತಿಜ್ಞೆಯನ್ನು ಮಾಡಿಕೊಳ್ಳುತ್ತಾರೆ.* ಪ್ರತಿಯೊಬ್ಬ ಸ್ತ್ರೀ ಕನಿಷ್ಠ ಒಬ್ಬ ವ್ಯಕ್ತಿಯು ನನ್ನನ್ನು ನಿಜವಾಗಿಯೂ ನನ್ನಲ್ಲಿ ಬಲಹೀನತೆಗಳಿದ್ದಾಗಲೂ ನನ್ನನ್ನು ತಿಳಿದಿದ್ದಾನೆ ಮತ್ತು ನನ್ನನ್ನು ಪ್ರೀತಿಸುತ್ತಾನೆ ತಿಳಿದಿದ್ದಾನೆ ಎಂಬುದನ್ನು ನಂಬುವದು ಅವಶ್ಯವಾಗಿದೆ. ಪ್ರತಿಯೊಬ್ಬ ಪುರುಷನು ಯಾರಾದರು ತನ್ನ ಪ್ರೀತಿಸಲಿ ಮತ್ತು ಯಾವುದೇ ಶರತ್ತಿಲ್ಲದೆ ಗೌರವಿಸಲಿ ಎಂದು ಬಯಸುತ್ತಾರೆ. ವಿವಾಹಿತ ಸಂಗಾತಿಯೊಂದಿಗೆ ವಚನಬದ್ದರಾಗಿರುವದು ಅಂದರೆ ಅವನು ತನ್ನ ಹೆಂಡತಿಗೆ ಲೋಕದಲ್ಲಿ ಬಹಳ ಪ್ರಾಮುಖ್ಯ ವ್ಯಕ್ತಿಯಾಗಿದ್ದಾನೆ ಅಥವಾ ಅವಳು ತನ್ನ ಗಂಡನ ಜೀವಿತದಲ್ಲಿ ಬಹಳ ಅತ್ಯಮೂಲ್ಯಳಾಗಿದ್ದಾಳೆ.

*ಮೂರನೆಯದಾಗಿ, ವಿವಾಹವು ನಾವು ವಾಸಿಸುವ ವಿಶಾಲವಾದ ಸಮಾಜಕ್ಕೆ ವಚನಬದ್ಧತೆಯಾಗಿದೆ:* ವಿಸ್ತರಿತ ಕುಟುಂಬಗಳು, ನೆರೆಹೊರೆಯವರು, ಸಮಾಜ, ದೇಶ ಮತ್ತು ವಿಶ್ವ. ಇದು ಹಿಂದಿನ ಮತ್ತು ಇಂದಿನ ಜನಾಂಗಕ್ಕೆ ವಚನಬದ್ಧತೆಯಾಗಿದೆ. ಇನ್ನು ಮುಂದಕ್ಕೆ, ಅದು ದೇವರೊಂದಿಗೆ ಒಡಂಬಡಿಕೆಯಾಗಿದೆ. ಪೌಲನು ಕ್ರೈಸ್ತ ದಂಪತಿಗಳು ಯಾರೇ ಆಗಿರಲಿ ವಿಚ್ಛೇದನಕ್ಕೆ ಮುಂದಾಗಬಾರದು ಎಂದು ಆಜ್ಞಾಪಿಸುತ್ತಾನೆ (7:10, 11) ಇದರಲ್ಲಿ ಸಮುದಾಯದ ಅಂಶವಿದೆ. ವಿಶ್ವದುದ್ದಕ್ಕೂ ಶತಮಾನಗಳಿಂದ ವಿವಾಹವು ಸಾರ್ವಜನಿಕ ಪ್ರಕಟನೆಯನ್ನು ಒಳಗೊಂಡಿದೆ. ವಿವಾಹವು ಪರಸ್ಪರ ಸಂಬಂಧಿಸಿರುವದಕ್ಕೆ, ಒಡಂಬಡಿಕೆಗೆ ಮತ್ತು ವಿಶ್ವಾಸಕ್ಕೆ ಮುಖ್ಯ ಮೂಲೆಗಲ್ಲಾಗಿದೆ ಯಾಕಂದರೆ ಜನರು ಮದುವೆಯ ಆಧಾರವಾಗಿರುವ ಒಟ್ಟಾಗಿ ಮಾಡುವ ಪ್ರತಿಜ್ಞೆಯನ್ನು ಗೌರವಿಸುತ್ತಾರೆ. ಪ್ರತಿಯೊಂದು ವಿವಾಹವು ಕೆಲವೊಂದು ಅಳತೆಯಲ್ಲಿ ವಿಫಲವಾದಲ್ಲಿ ಅಸ್ತಿತ್ವದಲ್ಲಿರುವ ಪ್ರತಿಯೊಂದು ವಿವಾಹಗಳಿಗೆ ಭಯವನ್ನು ಹುಟ್ಟಿಸುತ್ತದೆ. ಸಮಾಜವು ಯಶಸ್ವಿ ವಿವಾಹದ ಮೂಲಕ ಲಾಭವನ್ನು ಹೊಂದುತ್ತದೆ.

## ಪ್ರೀತಿ, ಗೌರವ ಮತ್ತು ಪೋಷಣೆ (7:1-24)

ಕಳೆದ ಎರಡು ಸಾವಿರ ವರ್ಷಗಳಿಂದ, ಸತ್ಯವೇದ ಬೋಧನೆಯಲ್ಲಿ ಬದಲಾವಣೆಯಾಗಿಲ್ಲ, ಅದೇ ಸಮಯದಲ್ಲಿ ವಾಕ್ಯವು ದೊಡ್ಡ ವ್ಯವಹಾರಗಳನ್ನು ಬದಲಾಯಿಸಿದೆ. ಸಾಮಾಜಿಕ ಮೌಲ್ಯಗಳು, ಜನರು ಜೀವಿಸಲು ಮಾಡಿಕೊಳ್ಳುವ ವಿಧಾನಗಳು, ಮಕ್ಕಳನ್ನು ಹೆರುವದು ಮತ್ತು ಕುಟುಂಬದ ಆಚಾರಗಳು ಬದಲಾಗಿವೆ. ಸತ್ಯವೇದದ ಬೋಧನೆ ಅದೇ ರೀತಿಯಲ್ಲಿದೆ, ಆದರೆ ಸತ್ಯವೇದದ ಬೋಧನೆಯ ನಿರ್ದಿಷ್ಟವಾದ ಭಾಗಗಳಿಗೆ ನೀಡುವ ಒತ್ತುಗಳು ಸಮಯಕ್ಕನುಗುಣವಾಗಿ ಮತ್ತು ಸ್ಥಳದಿಂದ

ಸ್ಥಳಕ್ಕೆ ವ್ಯತ್ಯಾಸವಾಗುತ್ತವೆ. ಒಬ್ಬ ಕ್ರೈಸ್ತ ಬೋಧಕನ ಕಾರ್ಯವೆಂದರೆ ಪ್ರಸ್ತುತ ಜನಾಂಗದ ಆತ್ಮೀಕ ಅವಶ್ಯಕತೆಗಳನ್ನು ಪೂರೈಸುವ ಸಂದೇಶವನ್ನು ಸತ್ಯವೇದದ ಭಾಗದಿಂದ ಸಂಬೋಧಿಸುವದು ಕ್ರೈಸ್ತ ಶಿಕ್ಷಕನ ಕಾರ್ಯವಾಗಿದೆ. ಇದು ಜಟಿಲವಾದ ಕಾರ್ಯವಾಗಿದೆ.

ಪ್ರಸ್ತುತ ಜನಾಂಗಕ್ಕೆ ಯಾವ ಸತ್ಯವೇದದ ಬೋಧನೆ ಬಹಳ ಅವಶ್ಯವಾಗಿದೆ? ಅನೇಕ ಜ್ಞಾನಸಂಪನ್ನ ಮತ್ತು ದೈವೀಕ ವಿಶ್ವಾಸಿಗಳು ಹೇಳುವ ಈ ಜನಾಂಗಕ್ಕೆ ಅತ್ಯಂತ ಅವಶ್ಯವಿರುವ ಆತ್ಮೀಕ ಅವಶ್ಯಕತೆಗಳೆಂದರೆ ವಿವಾಹ, ಮನೆ ಮತ್ತು ಕುಟುಂಬವಾಗಿವೆ. ಆದಿಯಲ್ಲಿ ದೇವರು ಒಬ್ಬ ಪುರುಷನನ್ನು ಮತ್ತು ಒಬ್ಬ ಸ್ತ್ರೀಯನ್ನು ಜೀವಿತದಲ್ಲಿ ಸಂಗಾತಿಗಳಾಗಿರಲೆಂದು ಸೃಷ್ಟಿಸಿದನು. ಅದು ಹೀಗೆಯೇ ಇರಬೇಕು, ಆದರೆ ಅನೇಕ ದೈವೀಕ ಜನರು ಇಂದು ಲೋಕದಲ್ಲಿ ಲೈಂಗೀಕ ನಡತೆಯ ಮೇಲೆ ಸತ್ಯವೇದ ಪ್ರಾಭಾವ ಎಲ್ಲಿಯೋ ಕಡಿಮೆಯಾಗಿದೆ ಮತ್ತು ಅಸ್ತಿತ್ವದಲ್ಲಿ ಇಲ್ಲ ಎಂಬುದನ್ನು ತಿಳಿದುಕೊಂಡಿದ್ದಾರೆ. ಪುರುಷ ಮತ್ತು ಸ್ತ್ರೀ ವಿವಾಹವನ್ನು ತಿರಸ್ಕರಿಸುವಾಗ ಅಥವಾ ವಿವಾಹದಲ್ಲಿ ಆದ ಪ್ರತಿಜ್ಞೆಗಳನ್ನು ಹಗುರವಾಗಿ ತೆಗೆದುಕೊಳ್ಳುವಾಗ, ಪರಿಣಾಮ ಜೀವಿತದ ಸಂಪೂರ್ಣ ಕ್ಷೇತ್ರಗಳಲ್ಲಿ ಹರಡಿಕೊಳ್ಳುತ್ತದೆ.

ಒಂದುವೇಳೆ ಪರಿಣಾಮ ವಿಫಲ ವಿವಾಹಗಳಾಗುವಾಗ ಅದನ್ನು ಸಹಿಸಿಕೊಳ್ಳುವವರು ಕೇವಲ ಯಾರು ತಮ್ಮ ಪ್ರತಿಜ್ಞೆಯನ್ನು ಅಗೌರವಿಸುತ್ತಾರೋ ಅವರು, ಪ್ರತಿಯೊಬ್ಬ ವ್ಯಕ್ತಿ ತಾನು ಯಾವುದಕ್ಕೆ ಅರ್ಹನಾಗಿದ್ದಾನೋ ಅದನ್ನೇ ಹೊಂದಿಕೊಂಡನು ಎಂದು ಮುಕ್ತಾಯಗೊಳಿಸಬಹುದು.

ವಿವಾಹದ ಜಟಿಲತೆಗಳು ಕೇವಲ ದೊಡ್ಡ ಪಟ್ಟಣಗಳಿಗೆ ಅಥವಾ ದೂರವಿರುವ ಸ್ಥಳಗಳಿಗೆ ಮಾತ್ರ ಸೀಮಿತವಾಗಿಲ್ಲ. ಗ್ರಾಮೀಣ ಯುಎಸ್ ಸಮುದಾಯದಲ್ಲಿ ನಾಲ್ಕನೇ ವರ್ಗದಲ್ಲಿರುವ ಬಹಳ ಕಡಿಮೆ ಮಕ್ಕಳು ತಮ್ಮ ಜೈವೀಕ ತಂದೆ ಮತ್ತು ತಾಯಿಯೊಂದಿಗೆ ಇರುತ್ತಾರೆ. ಈ ಲೆಕ್ಕಾಚಾರ ಭಯ ಹುಟ್ಟಿಸುವಂತದ್ದಾಗಿದೆ. ಜೈವೀಕ ತಂದೆತಾಯಿಗಳಿಂದ ದೂರ ಇರುವವರು ಹೆಚ್ಚಾಗಿ ಶಾಲೆಯನ್ನು ಬಿಡುವವರಾಗಿದ್ದಾರೆ; ಬಡತನದಲ್ಲಿ ಬೆಳೆಯುತ್ತಾರೆ; ವಿವಾಹವಿಲ್ಲದೇ ತಂದೆತಾಯಿಗಳಾಗಿರುವವರು; ವ್ಯಸನಿಗಳೂ ಆಗುತ್ತಾರೆ, ಅಪರಾಧಿಗಳಾಗುತ್ತಾರೆ, ಮಧ್ಯಸೇವಿಸುವವರಾಗುತ್ತಾರೆ. ಲೈಂಗೀಕ ತೃಪ್ತಿಪಡಿಸುವಿಕೆಯು ತಾತ್ಕಾಲಿಕ ಒಪ್ಪಂದವಾಗುವಾಗ, ಪರಿಣಾಮ ಸಮಾಜದುದ್ದಕ್ಕೂ ಆಗುತ್ತದೆ.

ಸಮಾಜ ತಜ್ಞರು ಸಂಪುಟಗಳಷ್ಟು ಅಂಕಿಸಂಖ್ಯೆಗಳ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಈ ಅಂಕಿ ಸಂಖ್ಯೆಗಳ ಪ್ರಕಾರ ಮನೆಗಳು ಸ್ಥಿರವಾಗಿಲ್ಲದೇ ಇರುವಾಗ, ಆಕಸ್ಮಿಕ ಮರಣಗಳು ಹೆಚ್ಚಾಗುತ್ತವೆ; ಮೇಲಿಂದ ಮೇಲೆ ದಿವಾಳಿಖೋರತನ ಸಂಭವಿಸುತ್ತವೆ; ಬಡತನ, ಕೊಲೆ, ಹಿಂಸೆ ಮತ್ತು ಕಳ್ಳತನ ಹೆಚ್ಚಾಗುತ್ತವೆ. ಅಪರಾಧದಿಂದ ತುಂಬಿದ ನೆರೆಹೊರೆಯಲ್ಲಿ ಎಷ್ಟು ವಿವಾಹಗಳು ಸ್ಥಿರವಾಗಿ ನಿರ್ವಹಿಸಲ್ಪಡುತ್ತವೆ? ವಿವಾಹದಲ್ಲಿರುವ ವಚನಬದ್ಧತೆಯು ಬೆಲೆಯಿಲ್ಲದಿರುವಾಗ, ಮನುಷ್ಯನ ಜೀವೀತದ ಮೌಲ್ಯಗಳಿಗೆ ಸಹ ಬೆಲೆಯಿರುವದಿಲ್ಲ. ತಾತ್ಕಾಲಿಕ ಜೀವಿತದ ವ್ಯವಸ್ಥೆಯಲ್ಲಿ, ಸಾಮಾನ್ಯ ಲೈಂಗೀಕತೆಯ ಮತ್ತು ಗರ್ಭಪಾತದ ಸಂಖ್ಯೆಯ ಮಧ್ಯದಲಿ ಪರಸ್ಪರ ಸಂಬಂಧವಿರುತ್ತದೆ ಎಂಬುದು ನಮಗೆ ಖಚಿತವಾಗಿದೆ.

ಕ್ರೈಸ್ತರು ತಮ್ಮನ್ನು ತಾವು ಮೋಸಗೊಳಿಸಿಕೊಳ್ಳುವದನ್ನು ಬಯಸುತ್ತಾರೆ. ವಿಶ್ವಾಸಿಗಳು

ಹೀಗೆ ಯೋಚಿಸಲು ಬಯಸುತ್ತಾರೆ, ಪಶ್ಚಿಮಾತ್ಯ ಲೋಕದುದ್ದಕ್ಕೂ ಮನೆಗಳಲ್ಲಿ ಹೊಂದಾಣಿಕೆ ಇಲ್ಲದೇ ಇರುವಾಗ, ಸಭೆಗಳು ಸ್ಥಿರವಾದ ವಿವಾಹಗಳಿಗೆ ಸ್ವರ್ಗವಾಗಿವೆ. ಅಂಕಿಸಂಖ್ಯೆ ಹೇಳುತ್ತದೆ ಅದು ಬೇರೆಯಾಗಿರುತ್ತದೆ. ಸಂಪ್ರದಾಯಿಕ ಕ್ರೈಸ್ತರ ಮಧ್ಯದಲ್ಲಿ ವಿಚ್ಛೇಧನದ ಪ್ರಮಾಣವು ಸಾಮಾನ್ಯ ಜನಸಂಖ್ಯೆಯಲ್ಲಿ ಇರುವಷ್ಟೇ ಇರುತ್ತದೆ ಎಂದು ಹೇಳುತ್ತಾರೆ.

ನಾವು ಏನು ಮಾಡಬೇಕಾಗಿದೆ? ಕ್ರೈಸ್ತ ಸಂದೇಶವು ಜಟಿಲತೆಯನ್ನು ಹೇಗೆ ಸಂಬೋಧಿಸುತ್ತದೆ? ಸತ್ಯವೇದದ ಯಾವ ಬೋಧನೆಗೆ ಒತ್ತನ್ನು ನೀಡಬೇಕು? ಮೊದಲನೆಯದಾಗಿ, ಒಂದುವೇಳೆ ನಾವು ಸತ್ಯವೇದವು ಏನು ಮಾಡುತ್ತದೆ ಎಂಬುದನ್ನು ಬೋಧಿಸಲು ಹೋಗುವಾಗ ಸ್ಪಷ್ಟವಾಗಿ *ವಿವಾಹವು ಜೀವಿತದುದ್ದಕ್ಕೂ ಇರುವ ಒಡಂಬಡಿಕೆಯಾಗಿದೆ* ಎನ್ನುವದನ್ನು ಹೇಳುವದು ಅವಶ್ಯವಾಗಿದೆ. ಮದುವೆಯನ್ನು ಮುರಿದುಕೊಳ್ಳುವದು ಪಾಪ. ಪೌಲನ ಮಾತುಗಳು ಸ್ಪಷ್ಟವಾಗಿವೆ:

> ಮದುವೆ ಮಾಡಿಕೊಂಡಿರುವವರಿಗೆ ನನ್ನ ಅಪ್ಪಣೆ ಮಾತ್ರವಲ್ಲದೆ ಕರ್ತನ ಅಪ್ಪಣೆಯು ಏನಂದರೆ ಹೆಂಡತಿಯು ಗಂಡನನ್ನು ಬಿಟ್ಟು ಅಗಲಬಾರದು; ಒಂದುವೇಳೆ ಅಗಲಿದರೂ ಹೆಂಡತಿಯನ್ನು ಬಿಡಬಾರದು (7:10, 11).

ನಿಜವಾದ ಆಕರ್ಷಣೆಯನ್ನು ಉಂಟುಮಾಡುವ ಪ್ರತ್ಯೇಕವಾದ ಹಾರ್ಮೋನಗಳ ಸಮಸ್ಯೆಯಿರುವ ಯೌವನಸ್ಥ ಸ್ತ್ರೀ ಅಥವಾ ಯೌವನಸ್ಥ ಪುರುಷನ ಮೇಲಿರುವ ಮೋಹಪರವಶತೆಯಿಂದ ಪ್ರೀತಿಯು ಪ್ರಾರಂಭವಾಗುತ್ತದೋ? ನಿವಾಗಿಯೂ, ನಿಜವಾದ ಪ್ರೀತಿಯು ಅವರು ಉಪದೇಶಕರ ಮುಂದೆ ಜೊತೆಯಾಗಿ ನಿಲ್ಲುವಾಗ ಮತ್ತು ತಮ್ಮ ಪ್ರತಿಜ್ಞೆಗಳನ್ನು ಪುರುಚ್ಚರಿಸುವಾಗ ಪ್ರಾರಂಭವಾಗುತ್ತದೆ. ಈ ದೃಷ್ಟಿಕೋನದಲ್ಲಿ ವಿವಾಹವು, ನಿಜವಾದ ಪ್ರೀತಿಯ ಪ್ರಾರಂಭವಾಗಿದೆ. Robert Louis Stevenson ಅವರು ಇದನ್ನು ಉತ್ತಮವಾಗಿ ಹೇಳಿದ್ದಾರೆ:

> ಪ್ರೀತಿಸುವದು ಮತ್ತು ಪ್ರೀತಿಯನ್ನು ಜಯಿಸುವದು ಅನೇಕಾವರ್ತಿ ಉದ್ದಟತನ ಮತ್ತು ಕ್ರಾಂತಿಕಾರಿ ಆತ್ಮಗಳಿಗೆ ಕಠಿಣವಾದ ಕಾರ್ಯಗಳಾಗಿವೆ; ಆದರೆ ಪ್ರೀತಿಯನ್ನು ಕಾಪಾಡಿಕೊಳ್ಳುವದು ಸಹ ಕೆಲವು ಪ್ರಾಮುಖ್ಯತೆಗಳ ವ್ಯವಹಾರವಾಗಿದೆ, ಅದರಲ್ಲಿ ಪುರುಷ ಮತ್ತು ಹೆಂಡತಿ ಇಬ್ಬರೂ ಕರುಣೆ ಮತ್ತು ಸದ್ಭಾವನೆಯನ್ನು ಇಟ್ಟುಕೊಳ್ಳಲೇಬೇಕು. ನಿಜವಾದ ಪ್ರೀತಿಯ ಕಥೆಯು ವೇದಿಯ ಹತ್ತಿರ ಪ್ರಾರಂಭವಾಗುತ್ತದೆ, ಆ ಸಮಯದಲ್ಲಿ ವಿವಾಹಿತ ಜೋಡಿಯ ಮುಂದೆ ಅತ್ಯಂತ ಸುಂದರವಾದ ಜ್ಞಾನ ಮತ್ತು ಧಾರಾಳತೆಯ ಸ್ಪರ್ದೆ ಇರುತ್ತದೆ . . .[23]

ವೇದಿಯು ನಿಜವಾದ ಪ್ರೀತಿಯ ಮುಕ್ತಾಯವಲ್ಲ; ಅದು ಪ್ರಾರಂಭವಾಗಿದೆ. ನಿಜವಾದ ಪ್ರೀತಿಯು ಜ್ಞಾನಿಗಳಿಗೆ, ನಿಸ್ವಾರ್ಥಿಗಳಿಗೆ ಮತ್ತು ಪ್ರಭುದ್ದರಿಗೆ ದೇವರ ವರದಾನವಾಗಿದೆ.

ಸುವಾರ್ತೆಯು ಪೌಲನ ಬೋಧನೆ ಕರ್ತನ ಬೋಧನೆ ಒಂದೇ ಆಗಿದೆ ಎನ್ನುವದನ್ನು ಸಮರ್ಥಿಸುತ್ತದೆ. ವಿಶ್ವಾಸಿಗಳು ಸಂದೇಹಪಡುವ ಅವಶ್ಯಕತೆಯಿಲ್ಲ. ಯೇಸು ಗಂಡ ಮತ್ತು ಹೆಂಡತಿ ಮಾಡುವ ಒಡಂಬಡಿಕೆಯ ಶಾಶ್ವತತೆಯನ್ನು ಬೋಧಿಸಿದ್ದಾನೆ:

ದೇವರಾದರೋ ಸೃಷ್ಟಿಯ ಮೊದಲಿನಿಂದಲೇ ಮನುಷ್ಯರನ್ನು ಗಂಡುಹೆಣ್ಣಾಗಿ ನಿರ್ಮಿಸಿದನೆಂತಲೂ ಈ ಕಾರಣದಿಂದ ಪುರುಷನು ತನ್ನ ತಂದೆ ತಾಯಿಗಳನ್ನು ಬಿಟ್ಟು, ತನ್ನ ಹೆಂಡತಿಯನ್ನು ಸೇರಿಕೊಂಡು ಅವರಿಬ್ಬರು ಒಂದೇ ಶರೀರ ವಾಗಿರುವರೆಂತಲೂ ಬರೆದದೆ. ಹೀಗಿರುವಲ್ಲಿ ಅವರು ಇನ್ನು ಇಬ್ಬರಲ್ಲ, ಒಂದೇ ಶರೀರ ವಾಗಿದ್ದಾರೆ. ಆದದರಿಂದ ದೇವರು ಕೂಡಿಸಿದ್ದನ್ನು ಮನುಷ್ಯರು ಅಗಲಿಸಬಾರದು ಎಂದು ಹೇಳಿದನು (ಮಾರ್ಕ 10:6-9).

ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ. ಒಬ್ಬ ಮನುಷ್ಯನು ತನ್ನ ಹೆಂಡತಿಯನ್ನು ದೂಷಿಸದರೇನು? ಒಬ್ಬ ಸಂಗಾತಿಯು ಪ್ರೀತಿಸುವವರನ್ನು ಹೊಂದಿಕೊಂಡರೇನು? ಕೆಲವು ಸಂಗತಿಗಳಲ್ಲಿ, ದೂಷಿತರಾದ ಸಂಗಾತಿ ತನ್ನ ವಿವಾಹಿತ ಸಂಗಾತಿಯನ್ನು ತ್ಯಜಿಸುವದು ಉತ್ತಮ; ಆದರೆ ಪೌಲನು ಹೇಳುತ್ತಾನೆ ಇಂಥಹ ಸಂದರ್ಭದಲ್ಲಿ ಅವನು ಅಥವಾ ಅವಳು ಅವಿವಾಹಿತರಾಗಿ ಉಳಿಯಬೇಕು. ಈ ಪರಿಗಣಿಸುವಿಕೆ ಕೆಲವರಿಗೆ ಮರುಪರಿಗಣಿಸಲು ಕಾರಣವಾಗುತ್ತದೆ ಯಾಕಂದರೆ ವಿವಾಹವನ್ನು ಕೈಬಿಡುವದು ಸರಳವಾದ ಆಯ್ಕೆಯಾಗಿ ತೋರಿಬರುತ್ತದೆ. ಜನರು ವಿಚ್ಛೇಧನವನ್ನು ಮಾಡಿಕೊಳ್ಳುವದಕ್ಕೆ ಇಷ್ಟಂತೂ ಖಂಡಿತ ಯಾಕಂದರೆ ಒಬ್ಬನು ಅಥವಾ ಇಬ್ಬರೂ ಇನ್ನೊಬ್ಬರನ್ನು ಮದುವೆಯಾಗಲು ಬಯಸುವದು ದೇವರ ದೃಷ್ಟಿಯಲ್ಲಿ ಪಾಪವಾಗಿದೆ. ವಿವಾಹದಲ್ಲಿ ಪ್ರತಿಯೊಬ್ಬ ಸಂಗಾತಿಯು ಅವನಾಗಲಿ ಅಥವಾ ಅವಳಾಗಲಿ ಇನ್ನೊಬ್ಬರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವ ಆಯ್ಕೆ ಮಾಡಿರುತ್ತಾರೆ. ಪೌಲನು ಈ ಸಲಹೆಯನ್ನು ನೀಡುತ್ತಾನೆ. ನಿಮ್ಮ ವಿವಾಹವು ಉರ್ಜಿತವಾಗಿರಲಿ. ಕ್ರಿಸ್ತನು ನಿಮ್ಮ ಕರ್ತನಾಗಿದ್ದಲ್ಲಿ, ಒಂದುವೇಳೆ ನೀವು ನಿಮ್ಮನ್ನು ಪ್ರೀತಿಸಿವವರ ಮತ್ತು ಬೆಂಬಲಿಸುವವರ ಕುರಿತು ನೀವು ಕಾಳಜಿವಹಿಸುವದಾದಲ್ಲಿ, ನೀವು ಮಾಡಿದ ಪ್ರತಿಜ್ಞೆಗಳು ಅಥವಾ ಮಾಡಲಿಕ್ಕಿರುವ ಪ್ರತಿಜ್ಞೆಗಳು ನಿಮಗೆ ಪ್ರಾಮುಖ್ಯವಾಗಿದ್ದಲ್ಲಿ, ನಿಮ್ಮಲ್ಲಿರುವ ಶಕ್ತಿಯ ಪ್ರತಿಯೊಂದು ಹನಿಯನ್ನು ಬಲಿಷ್ಟವಾದ ವಿವಾಹವನ್ನು ಕಟ್ಟುವದಕ್ಕಾಗಿ ಉಪಯೋಗಿಸಿರಿ.

ಒಂದು ದಿನ ಬರುತ್ತದೇ ಆಗ ಲೋಕವು ಕ್ರಿಸ್ತನ ಸಭೆಗಳನ್ನು ನೋಡುತ್ತವೆ ಎಂದು ಕ್ರೈಸ್ತರು ಪ್ರಾರ್ಥಿಸುತ್ತಾರೆ, “ಜನರಲ್ಲಿರುವ ಈ ಜ್ಞಾನಕ್ಕೆ ಯಾವುದು ಮೂಲವಾಗಿದೆ? ಅವರ ಸಂತೋಷಭರಿತವಾದ ಕುಟುಂಬಗಳಿಗೆ ಯಾವುದು ಮೂಲವಾಗಿದೆ? ಅವರ ಮಕ್ಕಳು ಬೆಳೆಯುತ್ತಾ ಹೋದಹಾಗೆ ಏಕೆ ಸಂತೋಷದ ಮನೆಗಳಾಗಿ ಬೆಳೆಯುತ್ತಾರೆ?” ಒಬ್ಬ ಹಾದಿಹೋಕನು ಉತ್ತರಿಸುತ್ತಾನೆ, “ಈ ಜನರು ದೇವರನ್ನು ಮೊದಲು ಗೌರವಿಸುತ್ತಾರೆ ನಂತರ ಅವರು ಪರಸ್ಪರರನ್ನು ಗೌರವಿಸುತ್ತಾರೆ. ಅವರ ವಿವಾಹ ಮತ್ತು ಅವರ ಮನೆಗಳ್ಯುವರಿಗೆ ಆದ್ಯತೆಗಳಾಗಿವೆ.” ದೇವರು ವಿವಾಹದ ಕತೃವಾಗಿದ್ದಾನೆ. ಅವನು ವಿವಾಹವನ್ನು ಉತ್ತಮತೆಗೆ ಮತ್ತು ತನ್ನ ಸೃಷ್ಟಿಯ ಸಂತೋಷಕ್ಕಾಗಿ ವಿವಾಹವನ್ನು ಒದಗಿಸಿದ್ದಾನೆ. ಪುರುಷ ಮತ್ತು ಸ್ತ್ರೀ ಜೀವಿತದ ಸಂಪೂರ್ಣ ಆಶೀರ್ವಾದದ ಜೀವಿತವನ್ನು ಬಯಸಿದ್ದಲ್ಲಿ ಹೀಗೆ ಮಾಡಬಹುದು. ಪೌಲನ ಸಲಹೆ ಹೀಗಿದೆ: ಉತ್ತಮವಾದ ಗಂಡನನ್ನು ಅಥವಾ ಉತ್ತಮವಾದ ಹೆಂಡತಿಯನ್ನು ನಿಮಗಾಗಿ ಹುಡುಕಿಕೊಳ್ಳಿರಿ. ಆ ವ್ಯಕ್ತಿಯೊಂದಿಗೆ ನಿಂತುಕೊಳ್ಳಿರಿ. ಅವನನ್ನು ಅಥವಾ ಅವಳನ್ನು ಬೆಂಬಲಿಸಿರಿ ಮತ್ತು ಪ್ರೀತಿಸಿರಿ.

ಕಷ್ಟಕರ ದಾಂಪತ್ಯದ ಕಾರಣವನ್ನು ಗುರಿತಿಸುವದು ಕಠಿಣವೇನಲ್ಲ. ಕೆಲವರು

ಸಂಗಾತಿಗಳು ಎಲ್ಲಾ ಜವಾಬ್ದಾರಿಗಳನ್ನು ಪರಸ್ಪರ ಮೇಲೆ ಹಾಕಲು ಪ್ರಯತ್ನಿಸುತ್ತಾರೆ, ಪ್ರತಿಯೊಬ್ಬರು ಅವನನ್ನು ಅಥವಾ ಅವಳನ್ನು ಸಂತೋಷಪಡಿಸುವದು ಇನ್ನೊಬ್ಬರ ಜವಾಬ್ದಾರಿ ಎಂದು ಯೋಚಿಸುತ್ತಾರೆ. ಒಬ್ಬರು ಅಥವಾ ಇಬ್ಬರೂ ಮೇಲಿಂದ ಮೇಲೆ ದೂರಬಹುದು, ತಪ್ಪುಗಳನ್ನು ಹುಡುಕಬಹುದು ಅಥವಾ ಅವನು ಅಥವಾ ಅವಳು ಜೀವಿತದಲ್ಲಿ ಕಳೆದುಕೊಂಡ ಸಂಗತಿಗಳಲ್ಲೇ ಜೀವಿಸುತ್ತಿರಬಹುದು. ಇಂಥಹ ಕ್ರಿಯೆಗಳು ಮತ್ತು ವರ್ತನೆಗಳು ಖಂಡಿತವಾಗಿ ಅಸಂತೋಷವನ್ನು ತರುತ್ತವೆ.

ಯಾರು ಜೀವಿತದಲ್ಲಿ ಯಶಸ್ವಿ ವಿವಾಹಕ್ಕಾಗಿ ಮಾಯಾ ಸೂತ್ರವನ್ನು ಎದುರು ನೋಡುತ್ತಿದ್ದಾರೋ ಅವರು ಬಹುಶಃ ಅದನ್ನು ಕಂಡುಕೊಳ್ಳುವದಿಲ್ಲ. ಜನರನ್ನು ಅನ್ಯೋನ್ಯ ಸಂಬಂಧಗಳಲ್ಲಿ ಅಷ್ಟಾಗಿ ನಡೆಸದಿರುವ ಮೌಲ್ಯಗಳು ಅವರ ಮನೆಯಲ್ಲಿ ಕಾರ್ಯ ಮಾಡುತ್ತವೆ. ಪರಿಗಣಿಸುವದು, ವಿಚಾರಪರತೆ ಮತ್ತು ಸಭ್ಯತೆ ಕೇವಲ ಸಾಮಾನ್ಯ ಪರಿಚಯಕ್ಕಾಗಿ ಅಲ್ಲ; ಅವು ಉತ್ತಮ ವಿವಾಹ ಸಂಬಂಧಕ್ಕೆ ಸಹ ಸಹಾಯಕವಾಗಿವೆ. ಯಾರಿಗೆ ಉತ್ತಮವಾದ ವಿವಾಹ ಸಂಬಂಧ ಅಗತ್ಯವಾಗಿದೆಯೋ ಅವರಿಗೆ ಉತ್ತಮವಾದ ಸತ್ಯವೇದ ಆಧಾರಿತ ಮಾರ್ಗದರ್ಶಿ ಮತ್ತು ಅದು ತರುವ ಎಲ್ಲಾ ಆಶೀರ್ವಾದಗಳು ಎಫೆಸ 4:31, 32ರಲ್ಲಿದೆ:

> ಎಲ್ಲಾ ದ್ವೇಷ ಕೋಪ ಕ್ರೋಧ ಕಲಹ ದೂಷಣೆ ಇವುಗಳನ್ನೂ ಸಕದಲವಿಧವಾದ ದುಷ್ಟತನವನ್ನೂ ನಿಮ್ಮಿಂದ ದೂರ ಮಾಡಿರಿ. ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರ್ರಿ. ದೇವರು ನಿಮಗೆ ಕ್ರಿಸ್ತನಲ್ಲಿ ಕ್ಷಮಿಸಿದನಲ್ಲಾ.

---

## ಟಿಪ್ಪಣಿಗಳು

[1]1984ರಲ್ಲಿ ಮುದ್ರಿತವಾದ NIVನ ಅನುವಾದಕರು 7:1ರಲ್ಲಿನ ನುಡಿಗಟ್ಟನ್ನು 7:26ರ ಆರಂಭದಲ್ಲಿ ಉಲ್ಲೇಖಿಸಿರುವ "ಪ್ರಸ್ತುತ ತೊಂದರೆ" ಎಂಬ ಪೌಲನ ಎಚ್ಚರಿಕೆಯನ್ನು, ಮದುವೆ ಕಾನೂನು ಬಾಹಿರವಾಗಿರದಿದ್ದರೂ ಸಹ ಮದುವೆಯನ್ನು ಅಶಕ್ತಗೊಳಿಸಿತು ಎಂದು ಅರ್ಥೈಸಿಕೊಂಡರು. ಆ ಆವೃತ್ತಿ 7:1ರಲ್ಲಿ ಉದ್ಧರಣ ಚಿಹ್ನೆಗಳನ್ನು ಹೊಂದಿಲ್ಲ. ಆದಾಗ್ಯೂ, NIV ನವೀಕರಿಸಲಾದ (2011) ಆವೃತ್ತಿಯು ಉದ್ಧರಣ ಚಿಹ್ನೆಗಳನ್ನು ಒಳಗೊಂಡಿರುತ್ತದೆ. 6:12, 13 ಮತ್ತು 7:1ರಲ್ಲಿನ ಪದಗುಚ್ಛಗಳು, ಅರ್ಹತೆಗಳನ್ನು ಅನುಸರಿಸುವುದರಿಂದ, ಅವನ ಓದುಗರಿಗೆ ತಿಳಿದಿರುವ ಹೇಳಿಕೆಗಳನ್ನು ಪೌಲನು ಉಲ್ಲೇಖಿಸುತ್ತಿದ್ದಾನೆ ಎಂದು ಸೂಚಿಸುತ್ತದೆ. [2]Richard B. Hays, *The Moral Vision of the New Testament: Community, Cross, New Creation* (San Francisco: Harper-SanFrancisco, 1996), 50. [3]Wayne A. Meeks, *The First Urban Christians: The Social World of the Apostle Paul*, 2nd ed. (New Haven, Conn.: Yale University Press, 2003), 100–1. [4]F. F. Bruce, *Paul: Apostle of the Heart Set Free* (Grand Rapids, Mich.: Wm. B. Eerdmans Publishing Co., 1977), 267. [5]The other trait is love (ἀγάπη, *agapē*). [6]David E. Garland, *1 Corinthians*, Baker Exegetical Commentary (Grand Rapids, Mich.: Baker Academic, 2003), 295n. [7]Anthony C. Thiselton, *The First Epistle to the Corinthians: A Commentary on the Greek Text* (Grand Rapids, Mich.: Wm. B. Eerdmans Publishing Co., 2000), 527. [8]J. Carl Laney, "Paul and the Permanence of Marriage in 1 Corinthians 7," *Journal of the Evangelical Theological Society* 25 (September 1982): 287. [9]ಕ್ರಿಶ್ಚಿಯನ್ ಶಿಕ್ಷಕರು ತಮ್ಮ ಮಕ್ಕಳ ಮನಸ್ಸನ್ನು ಮತ್ತು "ಮೂರ್ಖ ಮಹಿಳೆಯರನ್ನು" ತಳ್ಳಿಹಾಕುವುದನ್ನು Celsus ಅವರು ಆರೋಪಿಸಿದ್ದಾರೆ. (Origen Against Celsus

3.55.) [10]ಪೌಲನ ವಿರೋಧಿಗಳನ್ನು ಗುರುತಿಸುವುದು 2 ಕೊರಿಂಥಿಯಾದ ತೀವ್ರ ಚರ್ಚೆಯ ವಿಷಯವಾಗಿದೆ. 2 ಕೊರಿಂಥದವರಿಗೆ 3:14-16ರಲ್ಲಿರುವ ಅಪೊಸ್ತಲರ ಮಾತುಗಳು, ಕೊರಿಂಥದಲ್ಲಿ ಧರ್ಮಶಾಸ್ತ್ರಕ್ಕೆ ಬದ್ಧರಾಗಿರುವುದರ ಕುರಿತ ವಿವಾದವು ನಂತರ ಅಭಿವೃದ್ಧಿಪಡಿಸಲಾಯಿತು ಎಂದು ಸೂಚಿಸುತ್ತವೆ.

[11]"ಜಿಮ್ನಾಷಿಯಂ" ಎಂಬ ಪದವು ಅದರ ಮೂಲವನ್ನು ಗ್ರೀಕ್ γυμνός (*gumnos*) ನಲ್ಲಿ ಕಂಡುಹಿಡಿದಿದೆ, ಇದರರ್ಥ "ನಗ್ನ." [12]Walter Bauer, *A Greek-English Lexicon of the New Testament and Other Early Christian Literature*, 3rd ed., rev. and ed. Frederick William Danker (Chicago: University of Chicago Press, 2000), 380. [13]ನೋಡಿರಿ 1 Maccabees 1:15; Josephus *Antiquities* 12.5.1 [12.241]. [14]ಸ್ವಾತಂತ್ರ್ಯವನ್ನು ಪಡೆಯಬಾರದೆಂದು ಗುಲಾಮರನ್ನು ಪೌಲನು ಕೋರಿದನೆಂದು ಗಾರ್ಲ್ಯಾಂಡ್ ದೃಷ್ಟಿಕೋನವನ್ನು ಪರೀಕ್ಷಿಸಿದರು. ವ್ಯಾಖ್ಯಾನಕ್ಕಾಗಿ ಒಂದು ಸಮಂಜಸವಾದ ಪ್ರಕರಣವನ್ನು ಮಾಡಬಹುದೆಂದು ಅವರು ಒಪ್ಪಿದರು, ಆದರೆ ಕೊನೆಯಲ್ಲಿ ಅವರು ಅದನ್ನು ತಿರಸ್ಕರಿಸಿದರು. (Garland, 308-10.) [15]Cato *Agriculture* 2.7. [16]ಮೊದಲ ಶತಮಾನದ ಉಪನ್ಯಾಸಕ Dio Chrysostom, "ಹೆಚ್ಚಿನ ಸಂಖ್ಯೆಯ" ಪುರುಷರು ತಮ್ಮನ್ನು ಗುಲಾಮಗಿರಿಗೆ ಮಾರಿದರು (Dio Chrysostom *Discourses* 15.23). ಹೇಗಾದರೂ, ವಾಕ್ಚಾತುರ್ಯದ ಏಳಿಗೆಗೆ ಸಂಬಂಧಿಸಿದಂತೆ ಸತ್ಯಗಳನ್ನು ಅಲಂಕರಿಸುವ ಉಪನ್ಯಾಸಕನ ಪ್ರವೃತ್ತಿಯನ್ನು ಪರಿಗಣಿಸಬೇಕು. [17]ಕೆಲವು ವಲಯಗಳಲ್ಲಿ ಪೇಗನ್ ಮತ್ತು ಆರಂಭಿಕ ಕ್ರಿಶ್ಚಿಯನ್ ನೈತಿಕವಾದಿಗಳು ಕನ್ಯತ್ವವನ್ನು ಅಥವಾ ಪುರುಷ ಮತ್ತು ಮಹಿಳೆಯರಿಗಾಗಿ ಲೈಂಗಿಕವಾಗಿ ಇಂದ್ರಿಯನಿಗ್ರಹವರಿಗೆ ಬಹುಮಾನ ನೀಡಿದರು. ಹೇಗಾದರೂ, "ಕನ್ಯತ್ವ"ದ ಸಾಂದರ್ಭಿಕ ಬಳಕೆಯು ಸ್ತ್ರೀಯರನ್ನು ಸಾಮಾನ್ಯವಾಗಿ ಉಲ್ಲೇಖಿಸುತ್ತದೆ ಎಂಬ ಅಂಶವನ್ನು ಅದು ಹೊಂದಿರುವುದಿಲ್ಲ. (Margaret A. Schatkin, "Virgins," in *Encyclopedia of Early Christianity*, ed. Everett Ferguson [New York: Garland Publishing, 1990], 930–32.) [18]Leon Morris ಈ ವಾಕ್ಯವೃಂದದ ವಿಭಿನ್ನ ದೃಷ್ಟಿಕೋನವನ್ನು ಹೊಂದಿದ್ದನು, ಅದು ಗಮನಕ್ಕೆ ಯೋಗ್ಯವಾಗಿದೆ: "ಚಿಕ್ಕದು ಪೂರ್ಣ ಕೃದ್ವಾಚಿರೂಪ: 'ಸಮಯವನ್ನು ಕಡಿಮೆ ಮಾಡಲಾಗಿದೆ'. ಎರಡನೇ ಆವಿಷ್ಕಾರಕ್ಕೆ ಸಂಬಂಧಿಸಿದಂತೆ ಅನೇಕರು ಉಲ್ಲೇಖಿಸುತ್ತಾರೆ. ಇದು ಸರಿಯಾಗಿದ್ದರೂ, ಅವನು ಸಾಮಾನ್ಯವಾಗಿ ಕರ್ತನ ಬರೋಣವನ್ನು ಉಲ್ಲೇಖಿಸುತ್ತಾನೆ. ಆದರೂ, ಪೌಲನು ಬೇರೆಡೆ ಎಂದಿಗೂ ಈ ರೀತಿಯ ಸಲಹೆಯನ್ನು ನೀಡುವುದಿಲ್ಲ. ಅವನ ಮುಂಚಿನ ಮತ್ತು ನಂತರದ ಪತ್ರಿಕೆಗಳಲ್ಲಿ ಆತನು ಜನರನ್ನು ಸ್ಫೂರ್ತಿಯಿಲ್ಲದ ಪ್ರವೃತ್ತಿಗೆ ಉತ್ತೇಜಿಸಲು ಎರಡನೆಯ ಆಗಮನವನ್ನು ಉಪಯೋಗಿಸುತ್ತಾನೆ (ಉದಾಹರಣೆಗೆ: 1 ಥೆಸ್ಸ. 5:1-11; ಫಿಲಿಪ್ಪಿ. 1:9-11). ಪ್ರಸ್ತುತ ಬಿಕ್ಕಟ್ಟಿನ ಟಿಪ್ಪಣಿ, ಆದ್ದರಿಂದ ಇಲ್ಲಿ ಗುರುತಿಸಲಾಗಿದೆ, ಎಂಬುದು ಇಲ್ಲ. ಇಲ್ಲಿ ಎರಡನೇ ಆವಿಷ್ಕಾರವನ್ನು ನೋಡುತ್ತಿರುವವರು ಕೊನೆಯ ತಲೆಮಾರಿನವರು ಬೇರೆಯವರಿಂದ ಬೇರೆಬೇರೆ ಏಕೆ ಬದುಕಬೇಕು ಎಂದು ಪ್ರಶ್ನಿಸುವಂತಿಲ್ಲ. ನಾವೆಲ್ಲರೂ ಒಂದೇ ತೀರ್ಪು ಎದುರಿಸುತ್ತೇವೆ. . . . ಕೊರಿಂತ್ದಲ್ಲಿ (ವಚನ 26ರ 'ಬಿಕ್ಕಟ್ಟು') ಚಾಲ್ತಿಯಲ್ಲಿರುವ ಸನ್ನಿವೇಶಗಳ ಬಗ್ಗೆ ಉಲ್ಲೇಖವನ್ನು ನೋಡುವುದು ಉತ್ತಮ. ಪರಾಕಾಷ್ಠೆ ಸ್ಪಷ್ಟವಾಗಿ ದೂರದಲ್ಲಿಲ್ಲ; ಈ ತೊಂದರೆಗೊಳಗಾದ ಅವಧಿಯಲ್ಲಿ ಅನೇಕ ವಿಧದ ನಡವಳಿಕೆಗಳನ್ನು ಪರಿವರ್ತಿಸಬೇಕು" (Leon Morris, *The First Epistle of Paul to the Corinthians*, rev. ed., The Tyndale New Testament Commentaries [Grand Rapids, Mich.: Wm. B. Eerdmans Publishing Co., 1985], 113–14). [19]Richard E. Oster, Jr., *1 Corinthians*, The College Press NIV Commentary (Joplin, Mo.: College Press Publishing Co., 1995), 180–81. [20]*Discourses* 3.22.71-72.

[21]ಅನೇಕ ಪಠ್ಯ ಬದಲಾವಣೆಗಳಿಂದಾಗಿ ಪ್ರಶ್ನೆಗಳನ್ನು ಸಂಯೋಜಿಸಲಾಗಿದೆ, ಆದರೆ ಇವುಗಳ ಚರ್ಚೆ ಈ ಅಧ್ಯಯನದ ವ್ಯಾಪ್ತಿಗೆ ಮೀರಿದೆ. [22]Bauer, 188. [23]Robert Louis Stevenson, "El Dorado," in *The Works of Robert Louis Stevenson*, vol. 6, *Memories and Portraits* (New York: Davos Press, 1906), 235–36.